ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 5 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 258 | ಪುಟಗಳು: 12


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಮಿತ್ರ

ರಾಜಕೀಯ, ಆರ್ಥಿಕವಾಗಿ ಬಲಾಢ್ಯರಾಗಲು ಓಬಿಸಿ ಸಮುದಾಯಗಳು ಒಗ್ಗೂಡಬೇಕು

ಪ್ರತಿಭಾ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ, ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ





ಮೈಸೂರಿನ ಎಂಜಿ ರಸ್ತೆಯಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ ಇನ್ನಿತರರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಂಘದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಮೈಸೂರು, ಜ.4(ಜಿಎ)–ರಾಜಕೀಯ, ಆರ್ಥಿಕವಾಗಿ ಬಲಾಢ್ಯರಾಗಲೂ ಓಬಿಸಿ ಸಮುದಾಯಗಳು ಒಗ್ಗೂಡಬೇಕು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದ್ದಾರೆ.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಅನೇಕ ಸಮುದಾಯಗಳು ವೃತ್ತಿಗಳ ಮೂಲಕ ಸಂಘಟನೆಯಾಗುತ್ತಿದ್ದವು. ಅದರಲ್ಲಿ ಗಾಣಿಗರ ಸಮುದಾಯವೂ ಒಂದು. ಗಾಣಿಗ ಸಮುದಾಯ ಮೈಸೂರು ಸಂಸ್ಥಾನ ಮಾತ್ರವಲ್ಲದೇ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು.

ಗಾಣಿಗರ ಸಮುದಾಯದ ನರೇಂದ್ರ ಮೋದಿ ಅವರು ಇಂದು ಮೂರು ಬಾರಿ ಗೆದ್ದು ಪ್ರಧಾನಮಂತ್ರಿಯಾಗಿ ಗಾಣಿಗ ಸಮುದಾಯವನ್ನು ಪ್ರತಿನಿಧಿಸುತ್ತಿದ್ದಾರೆ. ಆದರೆ, ಅವರು ಒಂದು ಸಮುದಾಯಕ್ಕೆ ಮೀಸಲಾಗದೇ ಎಲ್ಲಾ ಸಮುದಾಯಗಳಿಗೂ ಉತ್ತಮ ಭವಿಷ್ಯ ರೂಪಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ 2047ರಲ್ಲಿ ಭಾರತ ಸಂಪೂರ್ಣ ಆರ್ಥಿಕವಾಗಿ ಅಭಿವೃದ್ದಿಯಾಗಬೇಕೆಂದು ಆಲೋಚಿಸಿದ್ದಾರೆ. ಆ ದೃಷ್ಟಿಯಲ್ಲಿ ನಾವೆಲ್ಲರೂ ಸೇರಿ ಆರ್ಥಿಕ ವ್ಯವಸ್ಥೆಗೆ ಉತ್ತಮ ಕೆಲಸಗಳನ್ನು ಮಾಡಬೇಕು. ಮೈಸೂರು–ಕೊಡಗು ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಿ ಎಂದು ಕರೆ ನೀಡಿದರು.

ಈ ಹಿಂದೆ ಎಣ್ಣೆ ಉತ್ಪಾದನೆ ಮಾಡುವ ಮೂಲಕ ಸಮುದಾಯ ಸಂಘಟನೆ ಆಗುತ್ತಿತ್ತು. ಆದರೆ, ಇಂದು ದೊಡ್ಡ ಕಾರ್ಖಾನೆಗಳಲ್ಲಿ ಯಂತ್ರಗಳ ಮೂಲಕ ಎಣ್ಣೆ ಉತ್ಪಾದನೆ ಆಗುತ್ತಿರುವುದರಿಂದ ವ್ಯವಸ್ಥೆ ಬದಲಾವಣೆ ಆಗಿದೆ. ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬೇಕು. ಹೊಸ ವ್ಯವಸ್ಥೆಗಳನ್ನು ಅವಳವಡಿಸಿಕೊಳ್ಳಿ, ಜೊತೆಗೆ ಪಾರಂಪರಿಕತೆಯನ್ನು ಉಳಿಸಿ ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಮಾಜದಲ್ಲಿ ತಾರತಮ್ಯ ಬೇಧ ಭಾವವಿದೆ. ಕೆಲವು ಬಲಾಢ್ಯಾ ಸಮುದಾಯಗಳು ಮಾತ್ರ ಅಭಿವೃದ್ದಿಯಾಗಿವೆ. ಕೆಲವು ಸಮುದಾಯ ಅಭಿವೃದ್ದಿಯಾಗಿಲ್ಲ. ಅದಕ್ಕೆ ಜಾತಿ ವ್ಯವಸ್ಥೆ ಪ್ರಮುಖ ಕಾರಣವಾಗಿದೆ. ಸಣ್ಣ ಸಣ್ಣ ಜಾತಿಗಳಲ್ಲಿ ಒಗ್ಗಟ್ಟು ಇಲ್ಲದಂತೆ ಮಾಡಿ ಒಡಕು ಉಂಟು ಮಾಡಿ, ಕೆಲವರು ಜಾತಿಯ ಅನುಕೂಲ ಪಡೆದು ಕೊಳ್ಳುತ್ತಾರೆ.

> **“ಇಂದು ಹಿಂದುಳಿದ ವರ್ಗದಲ್ಲಿ ಅರಸು ಸಮುದಾಯವೂ ಓಬಿಸಿ ಪಟ್ಟಿಯಲ್ಲಿ ಸೇರಿದೆ. ಕಾರಣಾಂತರದಿಂದ ಸ್ವಾತಂತ್ರ್ಯದ ನಂತರ ಸಮುದಾಯದ ಸಂಘಟನೆ ಉಳಿಸಲು ಸಾಧ್ಯವಾಗಲಿಲ್ಲ. ಬೇರೆ ಕಾರಣಗಳಿಂದ ಬದಲಾವಣೆಯಾಗಿದೆ. ಮುಂದಿನ ದಿನಗಳಲ್ಲಿ ಓಬಿಸಿ ಸಮುದಾಯದವರು ರಾಜಕೀಯವಾಗಿ ಹೋರಾಡಲು ಕಷ್ಟಕರ ವಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಒಳಗೆ ಎಷ್ಟೇ ಒಡಕು ಇದ್ದರೂ ಒಳಗೆ ಕೂತು ಚರ್ಚಿಸಿ, ಹೊರಗೆ ಬಂದ ನಂತರ ಒಗಟ್ಟಾಗಿರಬೇಕು. ಈ ನಿಟ್ಟಿನಲ್ಲಿ ಹೋರಾಟಗಳಿಗೆ ಸಮಯಕ್ಕೆ ಧ್ವನಿಗೂಡಿಸಿ, ಓಬಿಸಿ ವರ್ಗಗಳು ಒಗ್ಗೂಡಬೇಕು..**
> **–ಯದುವೀರ್ ಒಡೆಯರ್, ಸಂಸದ**

ಇದರಿಂದ ಬಹುಸಂಖ್ಯಾತರ ಸಮುದಾಯಗಳು ಮಾತ್ರ ಎಲ್ಲಾ ಕ್ಷೇತ್ರದಲ್ಲಿ ಬೆಳವಣಿಗೆಯಾಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗೆ ದೊಡ್ಡ ಮಹತ್ವವಿದೆ. ಈ ಹಿನ್ನೆಲೆ ಸಮುದಾಯದಲ್ಲಿ ಒಗ್ಗಟ್ಟು ಬಹಳ ಮುಖ್ಯ ಎಂದರು.

ಬುದ್ದ, ಬಸವ, ಅಂಬೇಡ್ಕರ್ ಅವರಿಂದಲೂ ವ್ಯವಸ್ಥೆ ಬದಲಾಯಿಸಲು ಸಾಧ್ಯವಾಗಲಿಲ್ಲ. ಆದರೆ, ಅಂಬೇಡ್ಕರ್ ಅವರು ಸಂವಿಧಾನವನ್ನು ಬರೆದ ಹಿನ್ನೆಲೆಯಲ್ಲಿ ಇಂದು ಎಲ್ಲವೂ ಬದಲಾವಣೆಯಾಗಿವೆ. ಅವರು ತಿಳಿಸಿರುವ ಶಿಕ್ಷಣ, ಹೋರಾಟ, ಸಂಘಟನೆ ಎಂಬ ಮೂರು ಅಂಶಗಳನ್ನು ಬಿಡಬಾರದು. ಅವುಗಳನ್ನು ಅಳವಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಹಿಂದುಳಿದ ವರ್ಗದವರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಮತ್ತೆ ಸಮೀಕ್ಷೆ ಆರಂಭಿಸಿ, ವರದಿ ಬಿಡುಗಡೆ ಮಾಡುವ ಸಂದರ್ಭದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ವಿರೋಧ ವ್ಯಕ್ತ ಪಡಿಸಿದರು. ಮುಂದಿನ ದಿನಗಳಲ್ಲಿ ಮತ್ತೆ ಸಮೀಕ್ಷೆ ಆರಂಭವಾಗಲಿದೆ. ಅದರಲ್ಲಿ ಎಲ್ಲರೂ ಪಾಲ್ಗೊಳ್ಳಿ. ಮತ್ತೆ ಅಡ್ಡಿಪಡಿಸಿದರೆ ನಾವು ಒಗ್ಗಟ್ಟಾಗಿ ಹೋರಾಟ ಮಾಡೋಣ ಎಂದರು. ಸಮುದಾಯಕ್ಕಾಗಿ ಈಗಾಗಲೇ ವರುಣಾದಲ್ಲಿ ಒಂದು ಎಕರೆ ಜಾಗ ಮಂಜೂರು ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಮುದಾಯ ಭವನ ನಿರ್ಮಾಣ ಮಾಡಿದರೆ, ಸರ್ಕಾರ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಎಲ್ಲಾ ಕುಲ ಕಸುಬುಗಳು ಇಂದು ನಶಿಸಿ ಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ಮಕ್ಕಳನ್ನು ವಿದ್ಯಾವಂತರಾಗಿ ಮಾಡಿ. ವಿದ್ಯೆಯಿಂದ ಸಮುದಾಯಕ್ಕೆ ಒಳಿತಾಗಲಿದೆ. ಅದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರೇ ಸಾಕ್ಷಿ. ಅಂಬೇಡ್ಕರ್ ಅವರನ್ನು ಧಿಕ್ಕರಿಸಿದ ಸಮುದಾಯಗಳ ವಿರುದ್ಧ ಹೋರಾಟ ಮಾಡಲಿಲ್ಲ. ಬದಲಾಗಿ ಉತ್ತಮ ವಿದ್ಯಾಭ್ಯಾಸ ಮಾಡಿ, ಸಂವಿಧಾನ ರೂಪಿಸಿಕೊಟ್ಟರು ಎಂದು ತಿಳಿಸಿದರು.

ಸಣ್ಣ ಸಣ್ಣ ಸಮುದಾಯಗಳ ಸಂಘಟನೆಯಲ್ಲಿ ಒಡಕು ಮೂಡಿಸುವವರು ಇರುತ್ತಾರೆ. ಅವರನ್ನು ನಂಬಬೇಡಿ ಒಟ್ಟಾಗಿ ಈ ರೀತಿ ಉತ್ತಮ ಕೆಲಸಗಳನ್ನು ಮತ್ತಷ್ಟು ಮಾಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮಕ್ಕೆ ಮೊದಲು ಆಗಮಿಸಿದ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಕೆ.ಆರ್.ನಗರಕ್ಕೆ ಹೊರಟರು. ನಂತರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜೊತೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಅರಣ್ಯ ವಸತಿ ವಿಹಾರ ಧಾಮಗಳ ಮಾಜಿ ಅಧ್ಯಕ್ಷ ಅಪ್ಪಣ್ಣ, ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮ ಅಧ್ಯಕ್ಷ ವಿಶ್ವಾಸ್‌ಕುಮಾರ್, ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ಎಂ.ಆರ್.ರಾಜಶೇಖರ್, ಜಿಲ್ಲಾಧ್ಯಕ್ಷ ಎನ್.ಸಿ.ಉಮೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸ್ವಪಕ್ಷದವರಿಂದಲೇ ರಘು ಕೌಟಿಲ್ಯ ಸೋಲು

ಶಾಸಕ ಜಿ.ಟಿ.ದೇವೇಗೌಡ ಗಂಭೀರ ಆರೋಪ

ಮೈಸೂರು, ಜ.4(ಜಿಎ)–ವಿಧಾನ ಮಂಡಲದಲ್ಲಿ ಹಿಂದುಳಿದ ವರ್ಗಗಳ ಧ್ವನಿಯಾಗುತ್ತಿದ್ದ ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯರನ್ನು ಸ್ವಪಕ್ಷದವರೇ ಸೋಲಿಸಿದರು ಎಂದು ಶಾಸಕ ಜಿ.ಟಿ.ದೇವೇಗೌಡ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಘು ಅವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದಿಂದ ವಿಧಾನಪರಿಷತ್‌ಗೆ ಸ್ಪರ್ಧಿಸಿದ್ದರು. ಆ ವೇಳೆ ಜೆಡಿಎಸ್ ಪಕ್ಷದ ಶಾಸಕನಾದ ನಾನು ಹಿಂದುಳಿದ ವರ್ಗದವರಾದ ರಘು ಅವರೇ ಗೆಲ್ಲಬೇಕೆಂದು ಅವರೊಟ್ಟಿಗೆ ಹುಣಸೂರು ಸೇರಿದಂತೆ ಎಲ್ಲಾ ಕಡೆಯಲ್ಲಿಯೂ ಪ್ರಚಾರ ಮಾಡಿದೆ. ಅವರು ಗೆಲ್ಲುವ ವಿಶ್ವಾಸವಿತ್ತು. ಆದರೆ ಕೆಲವೇ ಓಟಿನಿಂದ ಸೋತರು. ಅವರ ಪಕ್ಷದಲ್ಲಿ ಇದ್ದವರೇ ಅವರನ್ನು ಸೋಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಕೇವಲ 17 ಓಟಿನಿಂದ ಸೋತರು. ಇಲ್ಲವಾದರೆ, ಇಂದು ರಘು ಅವರು ವಿಧಾನ ಪರಿಷತ್ ಸದಸ್ಯರಾಗಿ ರಾಜ್ಯದ ಹಿಂದುಳಿದ ವರ್ಗಗಳ ಜನರ ಧ್ವನಿಯಾಗುತ್ತಿದ್ದರು. ಅದಕ್ಕಾಗಿಯೇ ನಾನು ಯಾರು ಏನು ಹೇಳಿದರೂ ಕೇಳದೆ ಅವರನ್ನು ಗೆಲ್ಲಿಸಲೇಬೇಕೆಂದು ಹುಣಸೂರು ಸೇರಿದಂತೆ ಎಲ್ಲೆಡೆ ಭಾಷಣ ಮಾಡಿದ್ದೆ. ಹಿಂದುಳಿದ ವರ್ಗಗಳ ಪರವಾಗಿ ಕೆಲಸ ಮಾಡಿದ್ದೆ ಎಂದರು.

ಸಿತಾರ್ ನಾದ್ ಸಂವಾದ 2.0 ಸಿತಾರ್ ಕಾರ್ಯಾಗಾರ

ಮೈಸೂರು, ಜ.4– ಮೈಸೂರಿನ ಹೆರಿಟೇಜ್ ಹೌಸ್‌ನಲ್ಲಿ ಕಲಾ ಸಂವಹನ ಟ್ರಸ್ಟ್ ವತಿಯಿಂದ ಸಿತಾರ್ ನಾದ್ ಸಂವಾದ 2.0, ಸಿತಾರ್ ಕಾರ್ಯಾಗಾರವನ್ನು ಖ್ಯಾತ ಸಿತಾರ್ ವಿದ್ವಾಂಸ ಉಸ್ತಾದ್ ಡಾ.ಮೊಹಾಸಿನ್‌ಖಾನ್ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ ಸಿತಾರ್ ಪರಿಚಯ, ರಾಗಗಳ ಮೂಲಭೂತ ಅಂಶಗಳು, ವಾದನ ತಂತ್ರಗಳು, ಸಿತಾರ್ ಟ್ಯೂನಿಂಗ್ ಮತ್ತು ನಿರ್ವಹಣೆ, ಪ್ರದರ್ಶನ ಹಾಗೂ ತಾತ್ಕಾಲಿಕ ಸೃಜನಶೀಲತೆ ಕುರಿತಾಗಿ ಮಾರ್ಗದರ್ಶನ ನೀಡಲಾಗುತ್ತದೆ. ಸರಸ್ವತಿ ಪುರಂನ ಹೆರಿಟೇಜ್ ಹೌಸ್‌ನಲ್ಲಿ ನಡೆಯಲಿರುವ ಕಾರ್ಯಕ್ರಮವು ವಿದ್ಯಾರ್ಥಿಗಳು, ಸಂಗೀತ ಕಲಾವಿದರು ಮತ್ತು ಶಾಸ್ತ್ರೀಯ ಸಂಗೀತ ಆಸಕ್ತರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿ, ಕಲಿಕೆ ಮತ್ತು ಸಂವಾದಕ್ಕೆ ಅವಕಾಶ ಕಲ್ಪಿಸಲಿದೆ. ಕಾರ್ಯಕ್ರಮದ ಪ್ರವೇಶ ಉಚಿತವಾಗಿದ್ದು, ಆಸಕ್ತರು ಮೊ.9886112881 ಮೂಲಕ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು.

ಪ್ರದೀಪ್‌ಕುಮಾರ್‌ಗೆ ಪಿಹೆಚ್.ಡಿ



ಮೈಸೂರು: ಪ್ರದೀಪ್‌ಕುಮಾರ್ ಅವರು ಡಾ.ಲ್ಯಾನ್ಸಿ ಡಿಸೋಜಾ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ criminology and forensic science ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ನಾಳೆ ಎಂಎಲ್‌ಸಿ ಕೆ.ಶಿವಕುಮಾರ್‌ಗೆ ಅಭಿನಂದನೆ



ಡಾ.ಕೆ.ಶಿವಕುಮಾರ್

ಮೈಸೂರು,ಜ.4(ಜಿಎ)–ಡಾ.ಕೆ.ಶಿವಕುಮಾರ್ ಅಭಿನಂದನಾ ಸಮಿತಿ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಜ.6ರಂದು ಬೆಳಗ್ಗೆ 10.30ಕ್ಕೆ ಮಾನಸಗಂಗೋತ್ರಿ ಸೆನೆಟ್ ಸಭಾಂಗಣದಲ್ಲಿ ವಿಧಾನಪರಿಷತ್ ನೂತನ ಸದಸ್ಯ ಡಾ.ಕೆ.ಶಿವಕುಮಾರ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಭಿನಂದನಾ ಸಮಿತಿ ಸಂಚಾಲಕ ಹರಿಹರ ಆನಂದ ಸ್ವಾಮಿ ಈ ವಿಷಯ ತಿಳಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬುದ್ಧ ಮತ್ತು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸಚಿವ ಕೆ.ವೆಂಕಟೇಶ್ ಪುಷ್ಪಾರ್ಚನೆ ಮಾಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು. ಡಾ.ಕೆ.ಶಿವಕುಮಾರ್ ಅವರು ಪ್ರಖರ, ಸಮರ್ಥ ಪತ್ರಕರ್ತರಾಗಿದ್ದಾರಲ್ಲದೆ, ತಳ ಸಮುದಾಯಗಳ ಧ್ವನಿ ಎಲ್ಲರಿಗೂ ಮುಟ್ಟುವಂತೆ ಮಾಡುತ್ತಿದ್ದರು. ಹೀಗಾಗಿ ಇವರನ್ನು ಅಭಿನಂದಿಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಹಿಂದ ಜವರಪ್ಪ, ನಟರಾಜ್ ಶಿವಣ್ಣ, ದರ್ಶನ್, ಸೋಮಯ್ಯ ಮಲೆಯೂರು ಇದ್ದರು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರು ತಾಲೂಕು ಮಡಿವಾಳ ಮಾಚಿದೇವರ ಸಂಘದ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಬಿಡುಗಡೆ ಮಾಡಿದರು. ಈ ವೇಳೆ ಜಿಲ್ಲಾ ಮಡಿವಾಳ ಮಾಚಿದೇವ ಮಹಾಸಂಘದ ಅಧ್ಯಕ್ಷ ಚನ್ನಕೇಶವ, ತಾಲೂಕು ಅಧ್ಯಕ್ಷ ದುದ್ದಗೆರೆ ಜಯರಾಮ್, ಖಜಾಂಚಿ ಸಿದ್ದಪ್ಪಾಜಿ, ಸಂಘಟನೆ ಪ್ರಮುಖರಾದ ಪ್ರಶಾಂತ್, ಮಾಧುರಾಜ್ ಮಡಿವಾಳ್, ದುದ್ದಗೆರೆ ಮಹೇಶ, ಹಾರೋಹಳ್ಳಿ ಮರಿಶೆಟ್ಟಿ, ಕೆ.ಜಿ.ಕೊಪ್ಪಲು ಸತೀಶ, ಹಾರೋಹಳ್ಳಿ ಮಹದೇವ, ಪತ್ರಿಕಾ ಕಾರ್ಯದರ್ಶಿ ರಾಜೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹಿನಕಲ್ ರಾಕೇಶ್ ಪಾಪಣ್ಣ, ಕಾಂಗ್ರೆಸ್ ಮುಖಂಡ ಹರೀಶ ಮೊಗಣ್ಣ ಇನ್ನಿತರರಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ...



ಮೈಸೂರಿನ ಮಂಜುನಾಥಪುರದಲ್ಲಿ ಪುನೀತ್‌ರಾಜಕುಮಾರ್ ಸ್ಮರಣಾರ್ಥ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಸ್ವತಃ ಕ್ರಿಕೆಟ್ ಆಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಆಯೋಜಕರಾದ ಮುದ್ದು, ವರುಣ್, ಮನೀಶ್, ಕ್ರಿಕೆಟ್ ಆಟಗಾರರಾದ ಮುರುಗ, ರಾಜು, ಮನು, ಸಂದೀಪ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.1.2026 ಸೋಮವಾರ, ಮಳೆ ನಕ್ಷತ್ರ: ಮೂಲ, 29.12.2025ರಿಂದ 10.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರೋಟರಿ ಮೈಸೂರು ಎಲೈಟ್:** ಸಮುದಾಯ ಸೇವೆಗಳ ಅಡಿಯಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನ, ಬಟ್ಟೆ ಬ್ಯಾಗ್ ವಿತರಣೆ, ತರಕಾರಿ ಮಾರಲು ಕೈಗಾಡಿ ವಿತರಣೆ, 2026ನೇ ಕ್ಯಾಲೆಂಡರ್ ಬಿಡುಗಡೆ, ಮುಖ್ಯ ಅತಿಥಿ: ಶಾಸಕ ಟಿ.ಎಸ್.ಶ್ರೀವತ್ಸ, ಉಪಸ್ಥಿತಿ: ವಲಯ ಸೇನಾನಿ ರೊ. ಪಿಹೆಚ್‌ಎಫ್ ಕೆಎಸ್ ಕುಮಾರ್, ರೋಟರಿ ಮೈಸೂರು ಎಲೈಟ್ ನಿಯೋಜಿತ ಅಧ್ಯಕ್ಷ ರೊ.ಮಂಗಲ ಶಿವಕುಮಾರ್, ರೋಟರಿ ಮೈಸೂರು ಎಲೈಟ್ ನಿಕಟಪೂರ್ವ ಅಧ್ಯಕ್ಷ ರೊ. ಪಿಹೆಚ್‌ಎಫ್ ಎಂ.ರವಿ, ಅಧ್ಯಕ್ಷತೆ: ರೋಟರಿ ಮೈಸೂರು ಎಲೈಟ್ ಅಧ್ಯಕ್ಷ ರೊ. ಪಿಹೆಚ್‌ಎಫ್ ಎನ್.ಎಸ್. ಮಹದೇವಸ್ವಾಮಿ, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗ, ಗೊಬ್ಬಳಿ ಮರದ ವೃತ್ತ, ಜೆ.ಪಿ.ನಗರ, ಬೆಳಗ್ಗೆ 8.45ಕ್ಕೆ.
- **ಮೈಸೂರು ಜಿಲ್ಲಾ ಕುಂಬಾರರ ಸಂಘ:** ಅಮೃತ ಮಹೋತ್ಸವ, ರಾಜ್ಯ ಕುಂಬಾರರ ಮಹಾ ಸಮ್ಮೇಳನ, ದಿವ್ಯ ಸಾನಿಧ್ಯ: ಶ್ರೀ ಕ್ಷೇತ್ರ ಮಣೀಲ ಶ್ರೀ ಶ್ರೀ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಬಿಜಾಪುರದ ತೆಲಸಂಗ ಶ್ರೀ ಶ್ರೀ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಚಿತ್ರದುರ್ಗದ ಕುಂಬಾರ ಗುಂಡಯ್ಯ ಮಹಾ ಸಂಸ್ಥಾನದ ಶ್ರೀ ಶ್ರೀ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಉಕ್ಕು–ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೌರವ ಉಪಸ್ಥಿತಿ: ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಹಿಂದುಳಿದ, ಅಲ್ಪಸಂಖ್ಯಾತ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಉತ್ತರಪ್ರದೇಶದ ಹೋಂಗಾರ್ಡ್ ಅಂಡ್ ಸಿವಿಲ್ ಡಿಫೆನ್ಸ್ ಸಚಿವ ಧರ್ಮವೀರ್ ಪ್ರಜಾಪತಿ (ಕುಂಬಾರ, ಗೋವಾ ರಾಜ್ಯದ ಶಾಸಕ ಪ್ರಮೇಂದ್ರ ವಿಷ್ಣು ಸೇಠ್ (ಕುಂಬಾರ), ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಅಧ್ಯಕ್ಷತೆ: ಶ್ರೀ ಕುಲಾಲಗುಂಡ ಬ್ರಹ್ಮಚರ್ಯ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ
- **ಶೇಷಾದ್ರಿಪುರಂ ಪದವಿ ಕಾಲೇಜು, ಆಂತರಿಕ ಗುಣಮಟ್ಟ ಭರವಸೆ ಕೋಶ, ಗಾಂಧಿ ಅಧ್ಯಯನ ಕೇಂದ್ರ, ವಿವೇಕಾನಂದ ಅಧ್ಯಯನ ಕೇಂದ್ರ, ದಾಕ್ಷಾಯಿಣಿ ಪ್ರಕಾಶನ:** ಶ್ರೀ ರವೀಂದ್ರನಾಥ ಠಾಗೋರ್, ಶ್ರೀ ಸ್ವಾಮಿ ವಿವೇಕಾನಂದ ಮತ್ತು ಶ್ರೀ ಅರವಿಂದ್ ಘೋಷ್ ಇವರುಗಳ ಸಮಕಾಲೀನ ಚಿಂತನೆಗಳ ಪ್ರಸ್ತುತತೆ ಕುರಿತು ಉಪನ್ಯಾಸ, ಖ್ಯಾತ ಸಂಸ್ಕೃತ ವಿದ್ವಾಂಸರಾದ ಡಾ.ಸುಬ್ರಾಯ ಈಶ್ವರ ಹೆಗಡೆ ವಿರಚಿತ 'ಬಂಗಾರದ ಸಂತತ್ರಯರು', ಗ್ರಂಥ ಲೋಕಾರ್ಪಣೆ, ಸ್ಥಳ: ಕಾಲೇಜು ಸಭಾಂಗಣ, ಶೇಷಾದ್ರಿಪುರಂ ಪದವಿ ಕಾಲೇಜು ಆವರಣ, ಔಟರ್‌ರಿಂಗ್ ರೋಡ್, ಹೆಬ್ಬಾಳ್, ಬೆಳಗ್ಗೆ 11 ಗಂಟೆಗೆ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಮೈಸೂರು ವಿಶ್ವವಿದ್ಯಾನಿಲಯ:** 106ನೇ ವಾರ್ಷಿಕ ಘಟಿಕೋತ್ಸವ, ಬೆಳಗ್ಗೆ 11.30ಕ್ಕೆ ಪದವಿ ಪ್ರದಾನ, ಅಧ್ಯಕ್ಷತೆ: ರಾಜ್ಯಪಾಲರು ಹಾಗೂ ಮೈಸೂರು ವಿವಿ ಕುಲಾಧಿಪತಿ ಥಾವರ್‌ಚಂದ್ ಗೆಹ್ಲೋಟ್, ಘಟಿಕೋತ್ಸವ ಭಾಷಣ; ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ವಿಶ್ರಾಂತ ಅಧ್ಯಕ್ಷ ಡಾ.ಎಸ್.ಸೋಮನಾಥ್, ಉಪಸ್ಥಿತಿ: ಉನ್ನತ ಶಿಕ್ಷಣ ಸಚಿವರು ಹಾಗೂ ಮೈಸೂರು ವಿವಿ ಸಮಕುಲಾಧಿಪತಿ ಡಾ.ಎಂ.ಸಿ.ಸುಧಾಕರ್, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಶ್ರೀಮತಿ ಎಂ.ಕೆ.ಸವಿತಾ, ಗೌರವ ಡಾಕ್ಟರೇಟ್ ಪ್ರದಾನ: ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶಾಮಭಟ್, ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಜಯಚಂದ್ರರಾಜು ಅವರಿಗೆ. ಮಧ್ಯಾಹ್ನ 3 ಗಂಟೆಗೆ ಪದವಿ ಪ್ರದಾನ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತಿ: ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುಧನ್ವ ಧನಂಜಯ. ಸ್ಥಳ: ಕ್ರಾಫರ್ಡ್ ಭವನ.
- **ಚಾಮರಾಜೇಶ್ವರಿ ಅಕ್ಕನ ಬಳಗ, ಮೈಸೂರು :** ಅಭಿನಂದನಾ ಸಮಾರಂಭ, ದಿವ್ಯಾಶೀರ್ವಾದ ಶ್ರೀ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಉದ್ಘಾಟನೆ: ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿ, ಅಭಿನಂದನೆ: ಸಾಹಿತಿ ಡಾ.ಎಸ್.ಎ.ಉಮಾದೇವಿ, (ಸಿದ್ದಗಂಗಾ ಶಿವಕುಮಾರ ಶ್ರೀ ಪ್ರಶಸ್ತಿ ಪುರಸ್ಕೃತರು), ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, (ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು), ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೋಭಾರಾಣಿ ಜೈ ಪ್ರಕಾಶ್, ಅಧ್ಯಕ್ಷತೆ: ಚಾಮರಾಜೇಶ್ವರಿ ಅಕ್ಕನ ಬಳಗದ ಅಧ್ಯಕ್ಷೆ ಶ್ರೀಮತಿ ಮಾದಲಾಂಬಿಕೆ ನಂಜುಂಡಸ್ವಾಮಿ, ಸ್ಥಳ: ಸಿಲ್ವರ್ ಜ್ಯುಬಿಲಿ ಸಭಾಂಗಣ, ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4 ಗಂಟೆಗೆ.
- **ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಘಟಕ :** ಜಾನಪದ ಭಾವಯಾನ ಸಂಭ್ರಮ–ಗಾಯನ ಕಾರ್ಯಕ್ರಮ, ಗಾಯಕಿ ಶ್ರೀಮತಿ ಲಕ್ಷ್ಮಿ ದಿನೇಶ್ ಅವರಿಂದ. ಸಾರಥ್ಯ: ಪರಿಷತ್‌ನ ಅಧ್ಯಕ್ಷ ವಿ.ನಾಗರಾಜ ಭೈರಿ, ಸ್ಥಳ: ನಾದಬ್ರಹ್ಮ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ರಿಂದ.
- **ಹಿರಿಯ ನಾಗರಿಕರ ಮಂಡಳಿ :** ಹಿರಿಯ ನಾಗರಿಕರಿಗಾಗಿ ಉಪನ್ಯಾಸ ಕಾರ್ಯಕ್ರಮ, ವಕೀಲ ಅರುಣ್‌ಕುಮಾರ್ ಅವರಿಂದ 'ಸೈಬರ್ ಅಪರಾಧ ಘಟನೆಗಳನ್ನು ತಡೆಗಟ್ಟುವ ಕ್ರಮಗಳು ಮತ್ತು ಸಂಭವಿಸಿದಲ್ಲಿ ಕ್ರಮಗಳು' ಕುರಿತು ಉಪನ್ಯಾಸ, ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು, ಸ್ಥಳ: ಸರಸ್ವತಿ ಸಮುದಾಯ ಭವನ, ಹಿರಿಯ ನಾಗರಿಕ ಮಂಡಳಿ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ.
- **ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ (ಇಂಡಿಯಾ) :** ಹೈ ರೈಸ್ ಕನ್‌ಸ್ಟ್ರಕ್ಷನ್ ಇನ್ ದುಬೈ ಎ ಕ್ವಾಲಿಟಿ ಪರ್ಸ್‌ಫೆಕ್ಟಿವ್ ಕುರಿತು ಉಪನ್ಯಾಸ, ಸ್ಥಳ: ಎಸ್‌ಪಿ ಭಟ್ ಹಾಲ್, ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.
- **ಅಖಿಲ ಭಾರತ ಮಧ್ವ ಮಹಾ ಮಂಡಲ, ಮೈಸೂರು ಶಾಖೆ :** ನೂತನ ಸುಸಜ್ಜಿತ ಸುಮಧ್ವ ಸಭಾಭವನ ಉದ್ಘಾಟನೆ, ದಿವ್ಯ ಉಪಸ್ಥಿತಿ: ಉಡುಪಿಯ ಜಗದ್ಗುರು ಮಧ್ವಾಚಾರ್ಯ ಮೂಲ ಸಂಸ್ಥಾನ ಶ್ರೀ ಅಧೋಕ್ಷಜ ಪೇಜಾವರ ಮಠದ ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀ ಪಾದಂಗಳವರು, ಪ್ರಧಾನ ಅಭ್ಯಾಗತರಾದ ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಮಧ್ವಾಚಾರ್ಯ ರಸ್ತೆ, ಕೆ.ಆರ್.ವನಂ, ಸಂಜೆ 5 ಗಂಟೆಗೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ –ಡಾ.ಜಿ.ಎಂ.ಹೆಗಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಬಿ.ಸುನಂದಾ ದಿಲೀಪ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) 1. ಹೊಸಗನ್ನಡ ಸಾಹಿತ್ಯದಲ್ಲಿ ಹಾಸ್ಯ ಜಿ.ಪಿ.ರಾಜರತ್ನಂ ಅವರ ಭಾಷಣದ ಧ್ವನಿಮುದ್ರಣ–2. ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗ–ಡಾ.ಪ್ರಧಾನ ಗುರುದತ್ತ ಅವರ ಭಾಷಣದ ಧ್ವನಿಮುದ್ರಣ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಬಾಂಬೆ ಎಸ್.ಜಯಶ್ರೀ–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 10.40 2025 The year of reforms ವಿಶೇಷ ಬಾನುಲಿ ಸರಣಿ. 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, **ಮಧ್ಯಾಹ್ನ** 12.05 ವನಿತಾ ವಿಹಾರ, 12.35–ದೇವರನಾಮ, ವಿದ್ಯಾಭೂಷಣ 12.45–ನಮ್ಮ ಆರೋಗ್ಯ–ಚಳಿಗಾಲದಲ್ಲಿ ಚರ್ಮದ ರಕ್ಷಣೆ ಈ ಕುರಿತು ಮೈಸೂರಿನ ಮಕ್ಕಳ ಚರ್ಮ ವೈದ್ಯರಾದ ಡಾ.ಪುನೀತಾ.ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ.ಕುಲದೀಪ್.ಎನ್, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪಿ ಎಂ ವಿಕಸಿತ್ ಭಾರತ್ ಜಿ ರಾಮ್ ಜಿ ಮಿಷನ್ ಈ ಕುರಿತು ಮಾಹಿತಿ ನೀಡುತ್ತಾರೆ ಬಸವರಾಜ್ ಎಣಗಿ, 1.20–ಭಾವಗೀತೆಗಳು–ಜಿ.ಎಸ್.ಲಕ್ಷ್ಮಿ–ದ.ರಾ.ಬೇಂದ್ರೆ ಅವರ ರಚನೆಗಳು, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಅಮೃತಾ ವೆಂಕಟೇಶ್–ವೀಣಾ ವಾದನ, 4.00 ಮಹಿಳಾರಂಗ –ನನ್ನ ಹಕ್ಕು ನನ್ನ ಜವಾಬ್ದಾರಿ –ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ, ಭಾಗವಹಿಸುತ್ತಾರೆ –ಮೈಸೂರಿನ ವಕೀಲರಾದ ಎಸ್.ಜೆ.ಮಧ್ವರಾಜ್. ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಅನುರಾಧ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬೇಸಿಗೆ ಭತ್ತದ ಸಮಗ್ರ ಉತ್ಪಾದನಾ ತಾಂತ್ರಿಕತೆಗಳು ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಜಿ. ಆರ್. ದಿನೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ, ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿಸರಣಿ ಕಾರ್ಯಕ್ರಮ. ವಿಷಯ –ಭೂಗೋಳಶಾಸ್ತ್ರ / Geography, ಭಾಗವಹಿಸುತ್ತಾರೆ –ಮೈಸೂರು ಜಿಲ್ಲೆ ಕೆ.ಆರ್.ನಗರದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ದೀಪಕ್‌ಕುಮಾರ್. ಪ್ರಸ್ತುತಿ–ದಿಗ್ವಿಜಯ್.ಬಿ, 9.30 ಸವಿನೆನಪು, 10.00–ಆಕಾಶವಾಣಿ ಸಂಗೀತ ಸಮ್ಮೇಳನ–2025–ಪಂಡಿತ್ ಅಶಿಮ್ ಚೌದರಿ–ಸಿತಾರ್ ವಾದನ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 5 ಸೋಮವಾರ 2026

ಸಂಪುಟ: 46 | ಸಂಚಿಕೆ: 258 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಚಾಮುಂಡಿಬೆಟ್ಟವನ್ನ ಕಾಂಕ್ರೀಟ್ ಕಾಡಾಗಿಸುವುದು ಬೇಡ...

● ಪರಿಸರವಾದಿಗಳ ಒಕ್ಕೊರಲ ಆಗ್ರಹ ● 'ಚಾಮುಂಡಿಬೆಟ್ಟ ನಡಿಗೆ' ಅಭಿಯಾನದಲ್ಲಿ ಸ್ವಾಮೀಜಿಗಳು, ಪರಿಸರವಾದಿಗಳು, ವಿದ್ಯಾರ್ಥಿಗಳು ಸೇರಿ ನೂರಾರು ಮಂದಿ ಭಾಗಿ ● ಬೆಟ್ಟ ಸ್ವಚ್ಛ, ಸುಂದರವಾಗಿರುವುದನ್ನು ಜನ ಬಯಸುತ್ತಾರೆ

ಮೈಸೂರು, ಜ.4(ಎಂಟಿವೈ)– ಅಭಿವೃದ್ಧಿ ಹೆಸರಿನಲ್ಲಿ ಚಾಮುಂಡಿಬೆಟ್ಟವನ್ನು ಕಾಂಕ್ರೀಟೀಕರಣ ಕಾಡು ಮಾಡಬಾರದು, ಬೆಟ್ಟದ ನೈಸರ್ಗಿಕ ಪರಿಸರ ಸಂರಕ್ಷಣೆ ಆಗಬೇಕು. ಇದು ನೂರಾರು ಮಂದಿ ಪರಿಸರ ಪ್ರೇಮಿಗಳ ಆಗ್ರಹ. ಭಾನುವಾರ ಚಾಮುಂಡಿಬೆಟ್ಟ ನಡಿಗೆಯಲ್ಲಿ ಪಾಲ್ಗೊಂಡವರು 'ಚಾಮುಂಡಿ ಬೆಟ್ಟ' ಉಳಿವಿಗೆ ಶಪಥ ಮಾಡಿದರು.

'ಪರಿಸರ ಬಳಗ ಮತ್ತು ಪರಿಸರಕ್ಕಾಗಿ ನಾವು' ಸಂಘಟನೆ ನೀಡಿದ್ದ 'ಚಾಮುಂಡಿಬೆಟ್ಟದ ನಡಿಗೆ ಅಭಿಯಾನದಲ್ಲಿ ಪರಿಸರವಾದಿಗಳು, ಪರಿಸರ ಪ್ರೇಮಿಗಳು, ಕಳಕಳಿಯುಳ್ಳ ನಾಗರಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ನಾನಾ ಮಠಾಧೀಶರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಚಾಮುಂಡಿಬೆಟ್ಟದ ವಾಯುವಿಹಾರಿಗಳು ಬೆಟ್ಟದ ಪಾದದಿಂದ ಮೆಟ್ಟಿಲು ಮೂಲಕ ಬೆಟ್ಟ ಹತ್ತಿ ಚಾಮುಂಡಿ ಬೆಟ್ಟ ರಕ್ಷಣೆಯ ಜಾಗೃತಿ ಮೂಡಿಸಿದರು.

ನಡಿಗೆಯಲ್ಲಿ ಪಾಲ್ಗೊಂಡಿದ್ದ ಪರಿಸರ ಪ್ರೇಮಿಗಳು ಹಸಿರು ಬಣ್ಣದ ವಸ್ತ್ರ ಧರಿಸಿದ್ದರೆ, ಉಳಿದವರು ತೋಳಿಗೆ ಹಸಿರು ಪಟ್ಟಿ ಕಟ್ಟಿಕೊಂಡಿದ್ದರು. ಈ ಮೂಲಕ ಪರಿಸರ ಪ್ರಜ್ಞೆ ಪ್ರದರ್ಶಿಸಿದರಲ್ಲದೆ, ಬೆಟ್ಟದ ಮೇಲೆ ನಿರ್ಮಿಸಲು ಉದ್ದೇಶಿಸಿರುವ ಕಾಂಕ್ರೀಟ್ ಕಟ್ಟಡಗಳಿಗೆ ತಡೆಯೊಡ್ಡುವಂತೆ ಆಗ್ರಹಿಸಿದರು. ಸರ್ಕಾರ ಅಭಿವೃದ್ಧಿ ಹೆಸರಲ್ಲಿ ಚಾಮುಂಡಿ ಬೆಟ್ಟದ ಮೇಲೆ ವಿವಿಧ ಕಟ್ಟಡ ನಿರ್ಮಿಸಲು ಮುಂದಾಗಿದೆ. ಅಲ್ಲದೆ, ಬೆಟ್ಟದ ಮೇಲೆ ಅನಧಿಕೃತವಾಗಿ ಮನೆಗಳ ನಿರ್ಮಾಣವಾಗುತ್ತಿದೆ. ದೇವಾಲಯದ ಸುತ್ತಲೂ ಅನಧಿಕೃತ ಅಂಗಡಿಗಳು ತಲೆ ಎತ್ತುತ್ತಿವೆ. ಪ್ರಮುಖ ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರವಾಗಿರುವ ಚಾಮುಂಡಿಬೆಟ್ಟದ ಮೇಲೆ ನಿಗದಿಗಿಂತ ಹೆಚ್ಚಿನ ಪ್ರಮಾಣದ ಕಟ್ಟಡಗಳು ನಿರ್ಮಾಣವಾಗುತ್ತಿರುವುದರಿಂದ ಬೆಟ್ಟದ ಮೇಲೆ ಒತ್ತಡ ಉಂಟಾಗುತ್ತಿದೆ. ಈಗಾಗಲೇ 3–4 ಬಾರಿ ಭೂ ಕುಸಿತ ಸಂಭವಿಸಿದ್ದು, ಇದು ಪ್ರಕೃತಿ ನೀಡಿದ ಎಚ್ಚರಿಕೆಯಾಗಿದೆ. ಇನ್ನಾದರೂ ಎಚ್ಚೆತ್ತುಕೊಂಡು, ಪರಿಸರದ ಮೇಲಾಗುತ್ತಿರುವ ದೌರ್ಜನ್ಯ ತಡೆಗಟ್ಟದಿದ್ದರೆ ದೊಡ್ಡ ಅನಾಹುತಕ್ಕೆ ನಾಂದಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಟ್ಟದಲ್ಲಿ ನಡೆಸುತ್ತಿರುವ ಅನಗತ್ಯ ಅಭಿವೃದ್ಧಿ ಕಾರ್ಯಕ್ಕೆ ತಡೆಯೊಡ್ಡಬೇಕು ಎಂದು ನಡಿಗೆಯಲ್ಲಿ ಪಾಲ್ಗೊಂಡಿದ್ದ ಪರಿಸರವಾದಿಗಳು ಒತ್ತಾಯಿಸಿದರು.





ಚಾಮುಂಡಿಬೆಟ್ಟದ ಉಳಿವಿಗಾಗಿ ಆಯೋಜಿಸಿದ್ದ ನಡಿಗೆಯಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು ಸೇರಿದಂತೆ ನೂರಾರು ಪರಿಸರವಾದಿಗಳು.

ಪ್ರಗತಿ ಹೆಸರಲ್ಲಿ ಪ್ರಕೃತಿ ನಾಶ ಬೇಡ!

ಪರಿಸರಕ್ಕಾಗಿ ನಾವು ಸಂಘಟನೆಯ ಮುಖ್ಯಸ್ಥರೂ ಆದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಮಾತನಾಡಿ, ಚಾಮುಂಡಿಬೆಟ್ಟ ನಡಿಗೆ ಬೆಟ್ಟದ ರಕ್ಷಣೆಗಾಗಿ ನಡೆಯುತ್ತಿದೆ. ಪ್ರಗತಿ ಹೆಸರಲ್ಲಿ ಪ್ರಕೃತಿ ನಾಶ ಮಾಡಬೇಡಿ. ನಿರ್ನಾಮ ಮಾಡುವುದು ಸುಲಭ, ನಿರ್ಮಾಣ ಮಾಡುವುದು ಕಷ್ಟದ ಕೆಲಸ. ಇರುವುದನ್ನು ಉಳಿಸಿಕೊಂಡು ಪರಿಸರವನ್ನು ಅಭಿವೃದ್ಧಿ ಮಾಡಬೇಕು. ಚಾಮುಂಡಿಬೆಟ್ಟ ಕೇವಲ ಬೆಟ್ಟ ಮಾತ್ರವಲ್ಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರ, ಪರಿಸರ ಸೂಕ್ಷ್ಮತೆ ಹೊಂದಿದೆ. ಅದರ ಪಾವಿತ್ರ್ಯತೆ ಕಾಪಾಡಿಕೊಳ್ಳಬೇಕು. ಇಡೀ ಮೈಸೂರಿಗೆ ಜಲಚಕ್ರಕ್ಕೆ ಬೆಟ್ಟವೇ ಕಾರಣ. ಇದು ವಾಣಿಜ್ಯ ಕ್ಷೇತ್ರ ಆಗಬಾರದು, ಧಾರ್ಮಿಕ ಭಾವನೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು ಎಂದರು.

ಒಗ್ಗಟ್ಟಾಗಿ ಬೆಟ್ಟ ಉಳಿಸಿಕೊಳ್ಳಿ: ಇದೇ ವೇಳೆ ಕಪ್ಪತ್ತಗುಡ್ಡ ನಂದಿವೇರಿ ಮಠದ ಶ್ರೀ ಶಿವಕುಮಾರ ಸ್ವಾಮಿಜಿ ಮಾತನಾಡಿ, ■ 6ನೇ ಪುಟಕ್ಕೆ



ಇಂದಿನಿಂದ ಹುಲಿ ಗಣತಿ

■ ಇದೇ ಮೊದಲ ಬಾರಿಗೆ ಹುಲಿ ಸಂಚಾರವಿರುವ ಉಪವಿಭಾಗಗಳಲ್ಲೂ ಗಣತಿ ಕಾರ್ಯ ■ ಈ ಸಂದರ್ಭದಲ್ಲೇ ಹುಲಿಯೊಂದಿಗೆ ಮಾಂಸಹಾರಿ, ಸಸ್ಯಹಾರಿ ಪ್ರಾಣಿಗಳ ಸಮೀಕ್ಷೆ ■ ಬಂಡೀಪುರ, ನಾಗರಹೊಳೆ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಭದ್ರಾ, ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಿಬ್ಬಂದಿಗೆ ತರಬೇತಿ, ಅಗತ್ಯ ಸಿದ್ಧತೆ

ಮೈಸೂರು, ಜ.4(ಎಂಟಿವೈ)– ನಾಗರಹೊಳೆ, ಬಂಡೀಪುರ, ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶ (ಬಿಆರ್‌ಟಿ) ಸೇರಿದಂತೆ ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ, 36 ವನ್ಯಧಾಮ ಮತ್ತು 12 ಹುಲಿ ಸಂಚಾರವಿರುವ ಉಪ ವಿಭಾಗಗಳಲ್ಲಿ ಸೋಮವಾರ(ಜ.5) ದಿಂದ ವಿವಿಧ ಹಂತಗಳಲ್ಲಿ ರಾಷ್ಟ್ರೀಯ ಹುಲಿ ಗಣತಿ ಪ್ರಕ್ರಿಯೆ ಆರಂಭವಾಗಲಿದೆ.

ದೇಶದಲ್ಲಿರುವ ಹುಲಿ ಸಂಖ್ಯೆಯನ್ನು ನಿಖರವಾಗಿ ನಮೂದಿಸುವ ನಿಟ್ಟಿನಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಕರ್ನಾಟಕದ ಐದು ಹುಲಿ ಸಂರಕ್ಷಿತ ಪ್ರದೇಶ ಒಳಗೊಂಡಂತೆ ದೇಶದಲ್ಲಿರುವ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಗಣತಿ ಪ್ರಕ್ರಿಯೆ ನಡೆಯಲಿದೆ. 2026ನೇ ಸಾಲಿನ ರಾಷ್ಟ್ರೀಯ ಹುಲಿ ಗಣತಿ ಪ್ರಕ್ರಿಯೆಯನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತಿದ್ದು, ಕರ್ನಾಟಕದ ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ, ಭದ್ರಾ, ಕಾಳಿ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆಮಹದೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮ ಸೇರಿದಂತೆ ರಾಜ್ಯದ 36 ವನ್ಯಧಾಮ, ಜೊತೆಗೆ ಹುಲಿ ಪ್ರತ್ಯಕ್ಷವಾಗಿದ್ದ ಮೈಸೂರು, ಹುಣಸೂರು, ಗುಂಡ್ಲುಪೇಟೆ ಸೇರಿದಂತೆ 12 ಉಪ ವಿಭಾಗಗಳಲ್ಲೂ ಈ ಬಾರಿ ಗಣತಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಒಟ್ಟು ರಾಜ್ಯದಲ್ಲಿ 3,212 ಬೀಟ್‌ಗಳಲ್ಲಿ 6512 ಸ್ಥಳದಲ್ಲಿ ತಲಾ ಎರಡರಂತೆ 13,024 ಕ್ಯಾಮರಾ ಟ್ರ್ಯಾಪ್ ಬಳಸಿ ಈ ಬಾರಿ ವೈಜ್ಞಾನಿಕ ಮತ್ತು ಕರಾರುವಕ್ಕಾಗಿ ಹುಲಿ ಗಣತಿ ನಡೆಸಲು ನಿರ್ಧರಿಸಲಾಗಿದೆ.

ಬಂಡೀಪುರ: ರಾಜ್ಯದ ಮೊಟ್ಟ ಮೊದಲ ಹುಲಿ ಸಂರಕ್ಷಿತ ಪ್ರದೇಶ ■ 6ನೇ ಪುಟಕ್ಕೆ



ಹುಲಿ ಗಣತಿಗೆ ನಿಯೋಜಿಸಿರುವ ನಾಗರಹೊಳೆ ಸಿಬ್ಬಂದಿಗೆ ವೀರನಹೊಸಳ್ಳಿ ಕಚೇರಿಯಲ್ಲಿ ತರಬೇತಿ ನೀಡಲಾಗುತ್ತಿದೆ.

ತರಬೇತಿ ನೀಡಲಾಗಿದೆ

ಹುಲಿ ಗಣತಿ ಪ್ರಕ್ರಿಯೆಗೆ ನಿಯೋಜಿಸಿರುವ ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಸುರಕ್ಷತೆಯೊಂದಿಗೆ ನಿಖರವಾದ ಮಾಹಿತಿ ಕಲೆ ಹಾಕುವಂತೆ ಗಣತಿಗೆ ನಿಯೋಜಿಸಿರುವ ತಂಡವನ್ನು ಸಜ್ಜುಗೊಳಿಸಲಾಗಿದೆ. 8 ವಲಯ ಹೊಂದಿರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ 91 ಗಸ್ತು, 496 ಗ್ರಿಡ್‌ಗಳಲ್ಲಿ 992 ಕ್ಯಾಮರಾ ಟ್ರ್ಯಾಪ್ ಬಳಸಿ, 106 ಟ್ರ್ಯಾನ್ಸಾಕ್ಟ್ ಲೈನ್‌ಗಳಲ್ಲಿ ಹುಲಿ ಗಣತಿಗೆ ಕ್ರಮ ಕೈಗೊಳ್ಳಲಾಗಿದೆ. ನಾಗರಹೊಳೆಯಲ್ಲಿ ಈ ಹಿಂದಿನ ಗಣತಿಯಲ್ಲಿ ಪ್ರತಿ ಚದರ ಕಿ.ಮಿ ವ್ಯಾಪ್ತಿಯಲ್ಲಿ 11.15 ಹುಲಿ ಸಾಂದ್ರತೆ ಕಂಡು ಬಂದಿತ್ತು.

-ಪಿ.ಎ.ಸೀಮಾ, ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ವೈದ್ಯಕೀಯ ಶಿಕ್ಷಣ ಸಿಬ್ಬಂದಿಗೆ ಟರ್ಮ್ ಇನ್ಶೂರೆನ್ಸ್ ಕಡ್ಡಾಯ!

ಬೆಂಗಳೂರು, ಜ.4– ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯಡಿ ಬರುವ ಎಲ್ಲ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಟರ್ಮ್ ಇನ್ಸುರೆನ್ಸ್ (ಅವಧಿ ವಿಮೆ) ಕಡ್ಡಾಯಗೊಳಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ ಎಂದು ಸಂಬಂಧಿಸಿದ ಇಲಾಖೆ ಸಚಿವ ಶರಣ್ ಪ್ರಕಾಶ್ ಪಾಟೀಲ್ ಭಾನುವಾರ ತಿಳಿಸಿದ್ದಾರೆ.

ಕಳೆದ ತಿಂಗಳು ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ರಸ್ತೆ ಅಪಘಾತದಲ್ಲಿ ಸಾವಿಗೀಡಾದ ನಂತರ ವೈದ್ಯಕೀಯ ಶಿಕ್ಷಣ ಖಾತೆಯನ್ನು ಒಳಗೊಂಡಿರುವ ಪಾಟೀಲ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ತಾಂತ್ರಿಕ ಮೇಲ್ವಿಚಾರಣೆಯ ಪರಿಣಾಮವಾಗಿ ಮಹಾಂತೇಶ್ ಅವರ ಕುಟುಂಬಕ್ಕೆ ಅರ್ಹವಾದ ಮೊತ್ತಕ್ಕಿಂತ ಸುಮಾರು 50 ಲಕ್ಷ ರೂ. ಕಡಿಮೆ ಮೊತ್ತ ದೊರಕಿದೆ.

ವೈದ್ಯಕೀಯ ಕಾಲೇಜಿನ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಷಯ ಗಮನಕ್ಕೆ ಬಂದಿತು. ರಾಜ್ಯ ನಾಗರಿಕ ಸೇವೆಗಳಿಂದ ಐಎಎಸ್‌ಗೆ ಬಡ್ತಿ ಪಡೆದ ನಂತರ ಅಧಿಕಾರಿಯು ವಿಮಾ ವ್ಯವಸ್ಥೆಯಲ್ಲಿ ತನ್ನ ಸೇವಾ ಸ್ಥಿತಿಯನ್ನು ನವೀಕರಿಸಿಲ್ಲ ಎಂದು ಕಂಡುಬಂದಿದೆ.



ಈ ಲೋಪವು ದುಃಖಿತ ಕುಟುಂಬದ ಮೇಲೆ ಆರ್ಥಿಕ ಪರಿಣಾಮಗಳನ್ನು ಬೀರಿದೆ ಎಂದು ಪಾಟೀಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಪಾಟೀಲ್, ಎಲ್ಲ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಸದ್ಯದ ವೇತನ ಮತ್ತು ಹುದ್ದೆಗೆ ಅನುಗುಣವಾಗಿ ಅವಧಿ ವಿಮೆ ಪಡೆಯುವುದನ್ನು ಕಡ್ಡಾಯಗೊಳಿಸುವ ಸುತ್ತೋಲೆಯನ್ನು ಹೊರಡಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದೇನೆ. ಉದ್ಯೋಗಿಯ ಮರಣದ ಸಂದರ್ಭದಲ್ಲಿ ಕುಟುಂಬಗಳು ಪೂರ್ಣ ಅರ್ಹ ವಿಮಾ ರಕ್ಷಣೆಯನ್ನು ಪಡೆಯುವುದನ್ನು ಖಚಿತಪಡಿಸಿ ಕೊಳ್ಳುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಅನೇಕ ಉದ್ಯೋಗಿಗಳು, ವಿಶೇಷವಾಗಿ ಕಡಿಮೆ ವೇತನ ಶ್ರೇಣಿಯಲ್ಲಿರುವವರು, ಹಣಕಾಸಿನ ನಿರ್ಬಂಧಗಳು ಅಥವಾ ಅರಿವಿನ ಕೊರತೆಯಿಂದಾಗಿ ಸಾಕಷ್ಟು ಅವಧಿ ವಿಮೆಯನ್ನು ಆಯ್ಕೆ ಮಾಡಿಕೊಂಡಿಲ್ಲದಿರಬಹುದು. ಪ್ರಮುಖ ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳನ್ನು ತೊಡಗಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದರಿಂದಾಗಿ ■ 6ನೇ ಪುಟಕ್ಕೆ

ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ನಿವೃತ್ತ ಎಎಸ್‌ಐ ಆತ್ಮಹತ್ಯೆ

ಮೈಸೂರು,ಜ.4(ಪಿಎಂ)– ನಿವೃತ್ತ ಎಎಸ್‌ಐ ಒಬ್ಬರು ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಭಾನುವಾರ ನಡೆದಿದೆ.



ಬೋಗಾದಿ ನಿವಾಸಿ, ನಿವೃತ್ತ ಎಎಸ್‌ಐ ಲವಕುಶ (60) ಆತ್ಮಹತ್ಯೆ ಮಾಡಿ ಕೊಂಡವರು. ನಗರದ ಕೆಆರ್ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಲವಕುಶ ಅವರು ಕಳೆದ 3 ತಿಂಗಳ ಹಿಂದೆಯಷ್ಟೇ ನಿವೃತ್ತರಾಗಿದ್ದರು. ಭಾನುವಾರ ಸಂಜೆ ಕುಕ್ಕರಹಳ್ಳಿ ಕೆರೆಯ ರೈಲ್ವೆ ಗೇಟ್ ಸಮೀಪ (ಕ್ರಾಫರ್ಡ್ ಭವನದ ಹಿಂಭಾಗ) ರೈಲ್ವೆ ಹಳಿ ಮಾರ್ಗದಲ್ಲಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ರೈಲ್ವೆ ಪೊಲೀಸರು, ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಶವಾಗಾರಕ್ಕೆ ಸ್ಥಳಾಂತರ ಮಾಡಿದ್ದು, ನಾಳೆ ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಿದ್ದಾರೆ. ಮೃತರು ಪತ್ನಿ ಭಾನುಮತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಕೆಆರ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಧನರಾಜ್ ಹಾಗೂ ಸಿಬ್ಬಂದಿ ಶವಾಗಾರಕ್ಕೆ ಭೇಟಿ ನೀಡಿ, ಲವಕುಶ ಅವರ ಪಾರ್ಥಿವ ಶರೀರ ವೀಕ್ಷಿಸಿದರು.

ಪದವೀಧರೆ ದಿಯಾ ಕುಮಾರಿ, ಹೈಸ್ಕೂಲ್ ವಿದ್ಯಾರ್ಥಿ ಕುನಾಲ್ ಜೈನ ದೀಕ್ಷೆ; ಹೃದಯಸ್ಪರ್ಶಿ ಶುಭ ಹಾರೈಕೆ

● ಮೈಸೂರಿನಲ್ಲಿ ಅದ್ಧೂರಿಯಾಗಿ ನೆರವೇರಿದ ಮುಕ್ತಿ ಜಯೋತ್ಸವ ● ಲೌಕಿಕ ಬದುಕು ತ್ಯಜಿಸಿ ಅಲೌಕಿಕದತ್ತ ಸಾಗುವ ಮಹತ್ವದ ತೀರ್ಮಾನ ● ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ವಿಜೃಂಭಣೆಯ ಕಾರ್ಯಕ್ರಮ ● ಯದುವೀರ್, ಡಾ. ಅಶ್ವಥ್ ನಾರಾಯಣ್ ಸೇರಿದಂತೆ ಹಲವರಿಂದ ಶುಭ ಕೋರಿಕೆ ● ಫೆ.22ಕ್ಕೆ ಗುಜರಾತ್‌ನ ಮಣಿಲಕ್ಷ್ಮಿ ತೀರ್ಥ ದೇವಾಲಯದಲ್ಲಿ ವಿಧ್ಯುಕ್ತ ಸನ್ಯಾಸತ್ವ ಸ್ವೀಕಾರ

ಮೈಸೂರು, ಜ.4(ಬಿಎಲ್‌ಯು)– ಮೈಸೂರಿನ ಜೈನ ಸಮುದಾಯದ ಯುವತಿ ಹಾಗೂ ಬಾಲಕ ಜೈನ ದೀಕ್ಷೆ ಸ್ವೀಕರಿಸುತ್ತಿದ್ದು, ಇದರ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ಮುಕ್ತಿ ಜಯೋತ್ಸವ ಅದ್ಧೂರಿಯಾಗಿ ನಡೆಯಿತು.

ಜೈನ ದೀಕ್ಷೆಯು ಪವಿತ್ರ ತ್ಯಾಗದ ಪ್ರತಿಜ್ಞೆಯಾಗಿದ್ದು, ಲೌಕಿಕ ಬಾಂಧವ್ಯಗಳನ್ನು ತ್ಯಜಿಸಿ, ಸತ್ಯ ಹಾಗೂ ಆತ್ಮ ಸಾಕ್ಷಾತ್ಕಾರದ ಹಾದಿಯಲ್ಲಿ ಸಾಗುವುದು ಇದರ ಮೂಲ ಉದ್ದೇಶವಾಗಿದೆ. ಮೋಹದಿಂದ ಸಾಕ್ಷಾತ್ಕಾರದ ಕಡೆಗೆ ಮತ್ತು ಲೌಕಿಕದಿಂದ ಮೋಕ್ಷದ ಕಡೆಗೆ ಸಾಗಲು ಯುವತಿ ಹಾಗೂ ಬಾಲಕ ಪ್ರತಿಜ್ಞೆ ಮಾಡಿದ್ದಾರೆ.



ಕುನಾಲ್

ದಿಯಾ ಕುಮಾರಿ: ಮೈಸೂರಿನ ಶಿವರಾಂಪೇಟೆ ವಾಸಿ ಪ್ರವೀಣ್ ಕುಮಾರ್ ಹರಣ್ ಹಾಗೂ ಅನಿತಾ ದೇವಿ ಅವರ ಪುತ್ರಿ ದಿಯಾ ಕುಮಾರಿ ಜೈನ ದೀಕ್ಷೆ ಸ್ವೀಕರಿಸಲು ಸಿದ್ಧಳಾಗಿರುವ ಯುವತಿ. ಪದವೀಧರಳಾಗಿರುವ ಈಕೆಗೆ 22 ವರ್ಷ ವಯಸ್ಸು. ಈಕೆಯ ಕುಟುಂಬ ಆರ್ಥಿಕವಾಗಿ ಸದೃಢವಾಗಿದ್ದು, ಮೂರು ಮಕ್ಕಳಲ್ಲಿ ಈಕೆಯೂ ಒಬ್ಬಳು. ಆದರೆ ಅದೇಕೊ ಏನೊ ದಿಯಾ ಕುಮಾರಿಗೆ ಅಲೌಕಿಕ ಬದುಕು ಆಕರ್ಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಲೌಖಿಕ ಬದುಕು ತ್ಯಜಿಸಲು ನಿರ್ಧರಿಸಿದ್ದಾರೆ.

ಗುಜರಾತ್‌ನ ಮುಕ್ತಿ ಪ್ರಜ್ಞಾ ಶ್ರೀಜಿ ಅವರ ಬಳಿ ಕಳೆದ 7 ವರ್ಷಗಳಿಂದ ದಿಯಾ ಕುಮಾರಿ ಆಧ್ಯಾತ್ಮಿಕ ಬದುಕಿನಲ್ಲಿ ದಿನ ಕಳೆದಿದ್ದಾಳೆ. ಆದರೆ ಈಗ ಜೈನ ದೀಕ್ಷೆ ಪಡೆದು ಸನ್ಯಾಸತ್ವಕ್ಕೆ ತನ್ನ ಬದುಕು ಒಪ್ಪಿಸಲು ನಿರ್ಧರಿಸಿದ್ದಾಳೆ. ಕುನಾಲ್ ದಿಯಾ ಕುಮಾರಿಯಂತೆ 13 ವರ್ಷದ ಕುನಾಲ್ ಎಂಬಾತ ಕೂಡ ಜೈನ ದೀಕ್ಷೆ ಪಡೆಯುತ್ತಿದ್ದಾನೆ. ಈತ ಮೈಸೂರಿನ ಸಿದ್ಧಾರ್ಥ ಬಡಾವಣೆಯ ನಿವಾಸಿ ನರೇಶ್ ಹಾಗೂ ಸಮತಾದೇವಿ ಅವರ ಪುತ್ರ, 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈತ ಕೂಡ ಲೌಖಿಕ ಬಾಂಧವ್ಯ ತ್ಯಜಿಸಿ ಜೈನ ದೀಕ್ಷೆ ಪಡೆಯುತ್ತಿದ್ದಾನೆ.



ದಿಯಾ ಕುಮಾರಿ

ದಿಯಾ ಕುಮಾರಿ ಹಾಗೂ ಕುನಾಲ್, ಫೆ.22ರಂದು ಗುಜರಾತ್‌ನ ಮಣಿಲಕ್ಷ್ಮಿ ತೀರ್ಥ ದೇವಾಲಯದಲ್ಲಿ ಜೈನ ದೀಕ್ಷೆ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇಂದು ಮುಕ್ತಿ ಜಯೋತ್ಸವ ಏರ್ಪಡಿಸಲಾಗಿತ್ತು ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಿದ್ದ ಜಯನಂದ ನಗರಿ ಮಂಟಪದಲ್ಲಿ ಮುಕ್ತಿ ಜಯೋತ್ಸವ ಅದ್ಧೂರಿಯಾಗಿ ನಡೆಯಿತು.

ಅವಿನಾಭಾವ ಸಂಬಂಧ: ಇದೇ ವೇಳೆ ದಿಯಾ ಕುಮಾರಿ ಹಾಗೂ ಕುನಾಲ್ ಅವರಿಗೆ ಶುಭ ಕೋರಿ ಮಾತನಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜೈನ ಸಮುದಾಯಕ್ಕೂ ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ. ಇದನ್ನು ಹಲವು ಜೈನ ಶಾಸನಗಳು ಸಾರಿ ಹೇಳುತ್ತವೆ ಎಂದರು. ಸ್ವಾತಂತ್ರ್ಯ ಬರುವವರೆಗೂ ಮೈಸೂರು ಮಹಾರಾಜರು ■ 6ನೇ ಪುಟಕ್ಕೆ





ಫೆಬ್ರವರಿ 22 ರಂದು ಜೈನ ದೀಕ್ಷೆ ಸ್ವೀಕರಿಸುತ್ತಿರುವ ಕುನಾಲ್‌ನನ್ನು ಮೈಸೂರಿನಲ್ಲಿ ಭಾನುವಾರ ಅದ್ಧೂರಿ ಮೆರವಣಿಗೆಯಲ್ಲಿ ಸಮಾರಂಭ ಸ್ಥಳಕ್ಕೆ ಕರೆತರಲಾಯಿತು. ರಥದಲ್ಲಿ ಕುನಾಲ್ ತಂದೆ ನರೇಶ್ ಹಾಗೂ ತಾಯಿ ಸಮತಾ ದೇವಿ ಅವರನ್ನು (ಎಡಚಿತ್ರ) ಕಾಣಬಹುದು. ಸಾಂಪ್ರದಾಯಿಕ ರಾಜಸ್ಥಾನಿ ಉಡುಗೆ ಧರಿಸಿರುವ ದಿಯಾ ಕುಮಾರಿ ಕೂಡ ಜೈನ ದೀಕ್ಷೆ ಸ್ವೀಕರಿಸುತ್ತಿದ್ದು, ಅವರೂ ಕೂಡ ಮೆರವಣಿಗೆಯಲ್ಲಿ ಸಾಗುತ್ತಿರುವುದು.

ಮಗಳ ನಿರ್ಧಾರ ಒಂದೆಡೆ ಸಂತಸ, ಮತ್ತೊಂದೆಡೆ ದುಃಖ!

ನನ್ನ ಮಗಳು ದೀಕ್ಷೆ ಪಡೆಯುತ್ತಿರುವುದು ಒಂದು ಕಡೆ ಸಂತೋಷ, ಮತ್ತೊಂದು ಕಡೆ ದುಃಖವಾಗುತ್ತಿದೆ ಎಂದು ದಿಯಾ ಕುಮಾರಿ ತಂದೆ ಪ್ರವೀಣ್ ಕುಮಾರ್ ಹರಣ್ ಪ್ರತಿಕ್ರಿಯಿಸಿದ್ದಾರೆ.

ದೀಕ್ಷೆ ಪಡೆಯುವವರು ಇಡೀ ಜೀವನ ಪರ್ಯಂತ ಜೈನ ಧರ್ಮದ ಕಠಿಣ ನಿಯಮಗಳನ್ನು ಪಾಲನೆ ಮಾಡಬೇಕು. ಜೀವನದಲ್ಲಿ ಎಂದೂ ಮತ್ತೆ ಮನೆಗೆ ಬರುವಂತಿಲ್ಲ, ತಂದೆ–ತಾಯಿಯನ್ನು ಮಾತನಾಡಿಸುವಂತಿಲ್ಲ, ಆಸ್ತಿ–ಪಾಸ್ತಿ, ಬಂಧು–ಬಳಗ ಎಲ್ಲರನ್ನು ತ್ಯಜಿಸಬೇಕಿದೆ. ಚಪ್ಪಲಿ ಹಾಕುವಂತಿಲ್ಲ, ವಾಹನದಲ್ಲಿ ಪ್ರಯಾಣಿಸುವಂತಿಲ್ಲ, ಈ ಎಲ್ಲಾ ನಿಯಮ ಪರಿಪಾಲನೆ ಮಾಡುವುದಾಗಿ ನಿರ್ಧರಿಸಿ ನನ್ನ ಮಗಳು ದೀಕ್ಷೆ ಪಡೆಯುತ್ತಿದ್ದಾಳೆ.ಆಕೆಗೆ ಜ್ಞಾನೋದಯವಾಗಿದ್ದು, ಮೋಕ್ಷ ಕಾಣಲು ಹೊರಟಿದ್ದಾಳೆ ಎಂದು ಪ್ರವೀಣ್ ಕುಮಾರ್ ಹರಣ್ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನನಗೂ, ನನ್ನ ಹುಡುಗಿಗೂ ಬ್ರೇಕ್ ಅಪ್ ಆಯ್ತು.
ತಿಮ್ಮ : ಯಾಕೋ?
ಗುಂಡ : ನಿನ್ನೆ ಹೊರಗಡೆ ಊಟಕ್ಕೆ ಕರ್ಕೊಂಡು ಹೋಗು ಅಂದ್ಲು. ಕರ್ಕೊಂಡ್ ಹೋಗಿ ಊಟ ಕೊಡಿಸಿದೆ. ಅದ್ಕೆ ಬ್ರೇಕ್ ಅಪ್ ಹೇಳಿ ಹೋದ್ಲು!
ತಿಮ್ಮ : ಎಲ್ಲಿಗೆ ಕರ್ಕೊಂಡು ಹೋಗಿದ್ದೆ?
ಗುಂಡ : ಇಂದಿರಾ ಕ್ಯಾಂಟೀನ್‌ಗೆ!

ಮೈಸೂರು ಮಿತ್ರ
ಸೋಮವಾರ, ಜನವರಿ 5, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ದುಃಖವು ನಿಮ್ಮ ಅಸ್ತಿತ್ವವನ್ನು ಎಷ್ಟು ಆಳವಾಗಿ ಕೊರೆಯುತ್ತದೆಯೋ ಅಷ್ಟೆ ಹೆಚ್ಚು ಸಂತೋಷವನ್ನೂ ನೀವು ಹಿಡಿದಿಟ್ಟುಕೊಳ್ಳಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಣ ಇರುವ ಗಂಡನ ಕೈ ಹಿಡಿದರೂ ಋಣ ಇರುವಷ್ಟೇ ಪ್ರಾಪ್ತಿ

ನಿಮ್ಮ ಪತ್ರಗಳು

ರಸ್ತೆಗಳಲ್ಲಿ ರಾಗಿ ಒಕ್ಕಣೆ ತಪ್ಪಿಸಿ

ಮಾನ್ಯರೆ,

ರಾಜ್ಯದ ನಾನಾ ಭಾಗಗಳಲ್ಲಿ ಈಗ ಬೆಳೆದ ಫಸಲನ್ನು ಮನೆಗೆ ತರುವಂತಹ ಸಮಯ. ಇಂಥ ಸಮಯದಲ್ಲಿ ಕೆಲವು ರೈತರು ರಾಗಿ, ಜೋಳ, ಭತ್ತ, ಹುರುಳಿ ಹೀಗೆ ನಾನಾ ತರಹದ ಫಸಲನ್ನು ಡಾಂಬರ್ ರಸ್ತೆಗೆ ಹಾಕಿ ಒಕ್ಕಣೆ ಮಾಡುತ್ತಾ ಇರೋದು ದುರಂತದ ಸಂಗತಿ. ಈ ಹಿಂದೆ ಹಳ್ಳಿಯ ರೈತರಿಗೆ ಇದರ ಬಗ್ಗೆ ಹೇಳಿಕೊಡಬೇಕಾಗಿರಲಿಲ್ಲ. ಒಕ್ಕಣೆಗೆ ಒಂದು ಕಣ ಅಂತ ರಚನೆ ಮಾಡಿ, ಸಮತಟ್ಟಾಗಿ ಮಾಡಿ, ಅದನ್ನು ಸಗಣಿಯ ನೀರಿಂದ ಚೆನ್ನಾಗಿ ಸಾರಿಸಿ, ಅದರಲ್ಲಿ ರಾಗಿ, ಭತ್ತ, ಹುರುಳಿ ಮುಂತಾದ ಬೆಳೆಗಳನ್ನು ಕೊಯ್ದು, ಎತ್ತಿನಗಾಡಿಯಲ್ಲಿ ತಂದು ಮೆದೆ ಹಾಕಿ ಎಲ್ಲರೂ ಒಟ್ಟಾಗಿ ಸೇರಿ ತಮ್ಮ ನೋವು ನಲಿವುಗಳನ್ನು ಸಮನಾಗಿ ಹಂಚಿಕೊಂಡು ಒಕ್ಕಣೆ ಮಾಡುತ್ತಿದ್ದರು. ಆದರೆ ಈಗ ಈ ದೃಶ್ಯಗಳು ಕೆಲವು ಕಡೆ ಬಿಟ್ಟು ಹಲವಾರು ಕಡೆಗಳಲ್ಲಿ ಮರೆಯಾಗಿವೆ. ಆದರೆ ಈಗ ನಮ್ಮ ರೈತರು ಈ ವಿಷಯದಲ್ಲಿ ಎಷ್ಟು ಸೋಮಾರಿಗಳಾಗಿ ಹೋಗಿದ್ದಾರೆ ಅಂತ ಅಂದ್ರೆ ಹೇಳಲಿಕ್ಕೆನೇ ಬೇಸರ ಆಗುತ್ತಲಿದೆ.


ಸಂಗ್ರಹ ಚಿತ್ರ

ಯಾಕೆಂದರೆ ಡಾಂಬರ್ ರಸ್ತೆಗೆ ಫಸಲನ್ನು ತಂದು ಸುರಿಯೋದು, ಒಕ್ಕಣೆ ಮಾಡೋದು ರಸ್ತೆಯಲ್ಲಿ ಇದರಿಂದ ಆ ರಸ್ತೆ ಮಾರ್ಗವಾಗಿ ತಿರುಗಾಡುವಂತಹ ವಾಹನಗಳಿಗೆ ತುಂಬಾ ಅನಾನುಕೂಲವಾಗಲಿದೆ ಕೆಲವು ವಾಹನಗಳು ಸಂಚರಿಸುವಾಗ ಬೆಳೆಯ ಹುಲ್ಲು ಚಕ್ರಕ್ಕೆ ಸುತ್ತಿಕೊಂಡು ಅಪಘಾತ ಹಾಗೂ ಕೆಲವೊಮ್ಮೆ ಆಯತಪ್ಪಿ ಉರುಳಿ ಬಿದ್ದು ಮಾರಣಾಂತಿಕ ಗಾಯ ಹಾಗೂ ಅಂಗವಿಕಲರಾಗುವುದು ಸಾಮಾನ್ಯ ಎನಿಸಿದೆ. ಮತ್ತೆ ಕೆಲವೆಡೆ ನಾಲ್ಕು ಚಕ್ರದ ವಾಹನಗಳು ಬೆಂಕಿಗಾಹುತಿಯಾಗಿರುವುದು ಉಂಟು. ಹಾಗಾಗಿ ಗ್ರಾಪಂ ಸದಸ್ಯರು, ಆ ಭಾಗದ ಸ್ಥಳೀಯ ಮುಖಂಡರು, ಪಿಡಿಓಗಳು ಅವರ ಮನವೊಲಿಸಬೇಕು, ಅದಕ್ಕೂ ಕೇಳಲಿಲ್ಲ ಅಂದ್ರೆ ಕಾನೂನು ಕ್ರಮ ಕೈಗೊಳ್ಳಬೇಕು. ಹಾಗಾದರೆ ಮಾತ್ರ ಇದು ನಿಲ್ಲುತ್ತದೆ. ಫಸಲು ಒಕ್ಕಣೆ ಮಾಡಲು ಸರ್ಕಾರವೇ ರಚಿಸಿ ಕೊಟ್ಟಂತಹ ಕಣಗಳು ಇದ್ದರೂ ಅದನ್ನು ಯಾರೋ ಒಂದಿಬ್ಬರು ಬಳಸಿಕೊಳ್ಳುವುದನ್ನು ಬಿಟ್ಟರೆ ಉಳಿದವರೆಲ್ಲ ರಸ್ತೆಗಳಲ್ಲಿ ಹಾಕಿ ಒಕ್ಕಣೆ ಮಾಡಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ. ಇದರ ಬಗ್ಗೆ ಎಲ್ಲರೂ ಗಮನಹರಿಸಿ ಆದಷ್ಟು ಪ್ರಾಣ ಹಾನಿ ಆಗುವುದನ್ನು ತಡೆಯಬೇಕಿದೆ. **–ನೊಂದ ಪ್ರಯಾಣಿಕ, ಮೈಸೂರು.**

ತೆರವಂತೆ ತಂಗಿ, ತರವಲ್ಲ ತಗಿ ನಮ್ಮೂರಿಗೆ

ಮಾನ್ಯರೆ,

ನಗೆಯು ಬರುತಿದೆ ನಮಗೆ ನಗೆಯು ಉಕ್ಕಿ ಬರುತಿದೆ
ಅರಮನೆಯ ಆಜುಬಾಜಲ್ಲಿ ಗೂಡಂಗಡಿಗಳು ತೆರವಂತೆ,
ಪ್ರವಾಸಿಗರಿಗೆ ಕಿರಿಕಿರಿ ತರವಲ್ಲ, ನಮಗೇನೋ ಹರುಷವೇ,
ತೆರವು ಎಷ್ಟು ದಿನಕ್ಕೆಂದು ತಿಳಿಯದೆ ನಗೆಯು ಬರುತಿದೆ
ಅಬ್ಬರದಿ ತೆರವಾದ ಮರುದಿನ ಸಯ್ಯಾಜಿರಾವ್ ರಸ್ತೆಯ
ಫುಟ್‌ಪಾತ್ ಪರಿಸ್ಥಿತಿ ಏನಾಯಿತೆಂದು ನಾವು ಬಲ್ಲೆವು!?,
ನಗೆಯು ಬರುತಿದೆ ನಮಗೆ ನಗೆಯು ಉಕ್ಕಿ ಬರುತಿದೆ
ಶಿವರಾಮ್‌ಪೇಟೆ ರಸ್ತೆಯ ಫುಟ್‌ಪಾತ್ ಹೇಗಿದೆಯಣ್ಣ?,
ಕೆಳಗಿಳಿಯದೆ, ಮಹಿಳೆಯರ ಮೈಕೈ ತಾಗಿಸದೆ ನಡೆದರೆ
ಅವನೇ ಮೈಸೂರು ಶೂರ, ನಗೆಯು ಬರದೆ ಇರುವುದೇ?,
ತಿಳಿಯದೇನಲ್ಲ, ಹೇಳಿದಂತೆ ನಡೆಯುವುದಿಲ್ಲ ಎನ್ನುವುದನ್ನು,
ತೆರವಂತೆ ತಂಗಿ, ತರವಲ್ಲ ತಗಿ ನಮ್ಮೂರಿಗೆ, ಮೈಸೂರಿಗೆ,
ಹೊಸ ವರ್ಷಕ್ಕಾದರೂ ನೆಟ್ಟಗಾದರೆ ನಾವು ನಿಟ್ಟುಸಿರು ಬಿಟ್ಟಾವು!
(ಕವಿಗಳು ಹಾಗೂ ದಾಸರ ಕ್ಷಮೆಯೊಂದಿಗೆ)

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

ನಮ್ಮ ಸಂಸ್ಕೃತಿಯು ಎತ್ತ ಸಾಗುತ್ತಿದೆ?

ಮಾನ್ಯರೆ,

ರಾಜ್ಯಾದ್ಯಂತ ನಡೆದಿರುವ ಹೊಸ ವರ್ಷದ ಆಚರಣೆ ಸಂಬಂಧದಲ್ಲಿ ನಮ್ಮ ಬೆಂಗಳೂರಿನಲ್ಲಿ ಯುವಕ ಯುವತಿಯರು ಯದ್ವಾ–ತದ್ವಾ ಕುಡಿದು ಕುಪ್ಪಳಿಸಿ, ಕೇಕೆ ಹಾಕಿ ನಗುತ್ತಿರುವ ದೃಶ್ಯವು ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಸದರಿ ಯುವಕ ಯುವತಿಯರನ್ನು ಪೊಲೀಸರು ಆಟೋದಲ್ಲಿ ಕೂರಿಸಿ ಅವರವರ ಮನೆಗಳಿಗೆ ಕಳುಹಿಸುತ್ತಿರುವುದೂ ನಡೆದಿದೆ.

ನಮ್ಮ ಯುವ ಜನಾಂಗಕ್ಕೆ ಏನಾಗಿದೆ. ಹೊಸ ವರ್ಷವನ್ನು ಆಚರಿಸಬೇಕೆಂದರೆ, ನೆನಪಿರಲಿ ಹಿಂದೂಗಳಾದ ನಾವು ವರ್ಷದ ಮೊದಲ ಹಬ್ಬ ಯುಗಾದಿಯನ್ನು ವರ್ಷದ ಮೊದಲ ಹಬ್ಬವಾಗಿ ಸಂಭ್ರಮದಿಂದ ಆಚರಿಸಬೇಕು ಅಲ್ಲವೆ? ತಮ್ಮ ಮಕ್ಕಳು ಬೆಳ್ಂಬೆಳಗ್ಗೆ ದೃಶ್ಯವನ್ನು ಸದರಿ ಯುವಕ, ಯುವತಿಯರ ತಂದೆ–ತಾಯಿಗಳೂ ಅವರ ನಿಜವಾದ ಕಷ್ಟಕ್ಕೆ ಆಗುವ ಸ್ನೇಹಿತರು ದೃಶ್ಯ ಮಾಧ್ಯಮಗಳಲ್ಲಿ ವೀಕ್ಷಿಸಿ ಅದೆಷ್ಟು ನೊಂದುಕೊಂಡಿರಬಹುದು.


ಈ ರೀತಿ ಹೊಸ ವರ್ಷಾಚರಣೆ ನಮ್ಮ ಸಂಸ್ಕೃತಿಯಲ್ಲ. ಇದು ಪಾಶ್ಚಾತ್ಯ ಸಂಸ್ಕೃತಿಯಾಗಿದೆ. ಸುಮಾರು 49ರಿಂದ 50 ಯುವಕ–ಯುವತಿಯರು ಸೇರಿ ಈ ರೀತಿಯ ಅಂದರೆ ವಿಸ್ಕಿ, ಲಿಕ್ಕರ್, ಬಿಯರ್ ಕುಡಿದು ವರ್ಷಾಚರಣೆ ಮಾಡುತ್ತಿದ್ದು, ಇದರಿಂದ ಹಲವು ಯುವಕ ಯುವತಿಯರ ಬಾಳೇ ಹಾಳಾಗಬಹುದು. ಒಂದು ಕಡೆ ಕುಡಿದ ನಶೆಯಲ್ಲಿ ತನ್ನ ಸ್ನೇಹಿತನ ಕೊಲೆ ಮಾಡಿರುವ ದೃಶ್ಯವೂ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ. ಈ ರೀತಿಯ ವರ್ಷಾ ಚರಣೆಯಿಂದ ಲಿಕ್ಕರ್ ಹಾಗೂ ಬಿಯರ್ ಅಂಗಡಿಗಳ ಮಾಲೀಕರು ತಮ್ಮ ಜೇಬನ್ನು ತುಂಬಿಸಿಕೊಳ್ಳುತ್ತಾರೆ. ಅವುಗಳನ್ನು ತಯಾರಿಸುವ ಕಂಪನಿಗಳೂ ಇನ್ನಷ್ಟು ಶ್ರೀಮಂತರಾಗುತ್ತಾರೆ. ನಮ್ಮ ಪೊಲೀಸರು ಕಟ್ಟೆಚ್ಚರ ವಹಿಸಿ ತಮ್ಮ ಕಾರ್ಯ ನಿರ್ವಹಿಸಿದ್ದರಿಂದ ಯಾವುದೇ ಅಹಿತಕರ ಘಟನೆಗಳು ನಡೆಯದೇ ಇರುವುದು ಸಮಾಧಾನದ ಸಂಗತಿಯಾಗಿದೆ. **–ಬೇಲೂರು ದ.ಶಂ.ಪ್ರಕಾಶ್, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅಪರೂಪದ ಸಮಾಜ ಸೇವಕರು ದುಗ್ಗಹಟ್ಟಿ ವೀರಭದ್ರಪ್ಪನವರು


ಶ್ರೀ ದುಗ್ಗಹಟ್ಟಿ ವೀರಭದ್ರಪ್ಪನವರು

ಶರಣರ ಬಾಳನ್ನು ಮರಣದಲ್ಲಿ ಕಾಣು ಎಂಬ ಮಾತಿಗೆ ದೃಶ್ಯ ಸಾಕ್ಷಿಯನ್ನು ಕಾಣಬೇಕೆಂದಿದ್ದರೆ 2025 ಡಿಸೆಂಬರ್ 31, ವರ್ಷಾಂತ್ಯದ ದಿನ ಯಳಂದೂರಿನ ದುಗ್ಗಹಟ್ಟಿ ಗ್ರಾಮಕ್ಕೆ ಭೇಟಿ ಕೊಟ್ಟಿದ್ದವರನ್ನು ಒಮ್ಮೆ ಕೇಳಿ ನೋಡಿ. ಅಬಾಲ ವೃದ್ಧರಾಗಿ, ನಾಡಿನ ಮಠಾಧಿಪತಿಗಳು, ರಾಜಕೀಯ ಮುಖಂಡರು, ಬಂಧು–ಬಳಗ ಸಾವಿರ ಸಾವಿರ ಸಂಖ್ಯೆಯಲ್ಲಿ ಅಂದು ಮುಂಜಾನೆ ಶಿವೈಕ್ಯರಾದ ಶ್ರೀ **ದುಗ್ಗಹಟ್ಟಿ ವೀರಭದ್ರಪ್ಪನವರ** ಅಂತಿಮ ದರ್ಶನಕ್ಕೆ ಆಗಮಿಸಿದ್ದರು. ಅಂದು ಎಲ್ಲರ ಬಾಯಲ್ಲೂ 93 ವರ್ಷಗಳ ಸಾರ್ಥಕ ಜೀವನ ನಡೆಸಿ, ಅರ್ಥಪೂರ್ಣ ಬದುಕಿಗೆ ವಿದಾಯ ಹೇಳಿದ್ದ ಶ್ರೀಯುತರ ಗುಣಗಾನದಿಂದ ಅವರ ಮನೆಯ ಆವರಣ ತುಂಬಿಹೋಗಿತ್ತು. ಶ್ರೀಯುತರು ಇಳಿವಯಸ್ಸಿನಲ್ಲಿಯೂ ಒಂದು ದಿನವೂ ಯಾರಿಗೂ ತೊಂದರೆ ಕೊಡದೆ ಸುಖಸಾವನ್ನು ಕಂಡು ಸ್ವರ್ಗಸ್ಥರಾಗಿದ್ದರು. **'ಪರೋಪಕಾರಾಯ ಇದು ಶರೀರಂ'** ಮಾತಿಗೆ ಇಂಬು ಕೊಡುವಂತೆ ತಮ್ಮ ಬದುಕಿನ ಯಾತ್ರೆಯಲ್ಲಿ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಒದಗಿಸಿ ಈ ಕಾಲಘಟ್ಟದ ಜನರು ಅಚ್ಚರಿಪಡುವಂತಹ ವ್ಯಕ್ತಿತ್ವ ಅವರದ್ದಾಗಿತ್ತು. ಪ್ರಗತಿಪರ ಕೃಷಿಕರಾಗಿ, ರಾಜಕಾರಣಿಯಾಗಿ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಹಕಾರ..... ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ದುಗ್ಗಹಟ್ಟಿ ಧೀಮಂತ, ಸಮಾ ಜೋದ್ಧಾರದ ಹರಿಕಾರರು ಎನಿಸಿಕೊಂಡವರು ಅವರು.

ಸಮಾಜ ಸೇವೆಗೆ ಹೆಸರಾದವರು

ದುಗ್ಗಹಟ್ಟಿ ವೀರಭದ್ರಪ್ಪನವರ ತಂದೆ ಶ್ರೀ ಪಟೇಲ್ ಮುಟ್ಟಲಿಂಗಪ್ಪನವರು ದಾನ–ಧರ್ಮ, ಸಮಾಜಸೇವೆಗೆ ಹೆಸರಾದವರು. ತಮ್ಮ ಗ್ರಾಮದ ಮಕ್ಕಳು ವಿದ್ಯಾವಂತರಾಗಲಿ ಎಂಬ ಕಾರಣಕ್ಕೆ ಗ್ರಾಮದ ಮುಖ್ಯರಸ್ತೆಯಲ್ಲಿಯೇ ಎಕರೆಗಟ್ಟಲೆ ಜಾಗವನ್ನು ಶಾಲೆ ನಿರ್ಮಾಣಕ್ಕೆ ದಾನ ಮಾಡಿದ್ದ ಮಹಾತ್ಮರು ಅವರು. ಅವರ ಸಮಾಜಸೇವೆಯನ್ನು ಪರಿಗಣಿಸಿ ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾಗಿದ್ದ ಶ್ರೀ **ಜಯಚಾಮ ರಾಜೇಂದ್ರ ಒಡೆಯರ್** ಅವರು **'ರಾಜ ಸೇವಾ ಪ್ರಸಕ್ತ'** ಬಿರುದನ್ನು ಪ್ರದಾನ ಮಾಡಿ ಗೌರವಿಸಿದ್ದರು. ಅವರ ಐದು ಮಂದಿ ಮಕ್ಕಳಲ್ಲಿ ಒಬ್ಬರಾದ, 1935 ಜನವರಿ 16ರಂದು ಜನಿಸಿದ **ದುಗ್ಗಹಟ್ಟಿ ಪಿ.ವೀರಭದ್ರಪ್ಪನವರು** ತಮ್ಮ ತಂದೆಯವರಿಂದ ಬಳುವಳಿಯಾಗಿ ಬಂದ ಉದಾರತೆ, ದೂರದೃಷ್ಟಿ, ಸಮಾಜಸೇವೆಯನ್ನು ಮೈಗೂಡಿಸಿಕೊಂಡು ತಮ್ಮ ಜೀವಿತಾವಧಿಯ ಕೊನೆಯ ದಿನದವರೆಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಅಭಿವೃದ್ಧಿ ಕೆಲಸಗಳನ್ನು ಮಾಡಿ ಅಪರೂಪದ ಸಮಾಜ ಸೇವಕರಾಗಿ ಜನ ಮಾನಸದಲ್ಲಿ ಎತ್ತರದ ಸ್ಥಾನವನ್ನು ಗಳಿಸಿ ಉಳಿಸಿಕೊಂಡವರು.

ಶ್ರೀಮಂತರೆಲ್ಲಾ ಹೃದಯವಂತರಾಗಿರುವುದು ಅಪರೂಪ. ದುಗ್ಗಹಟ್ಟಿ ವೀರಭದ್ರಪ್ಪ ಅವರ ಕುಟುಂಬದವರನ್ನು ಸಾಹುಕಾರ್ ಕುಟುಂಬ ಎಂದೇ ಕರೆಯುವುದು ವಾಡಿಕೆ. ಈ ಸಾಹುಕಾರ್ ಕುಟುಂಬ ಸಿರಿವಂತಿಕೆ ದರ್ಬಾರ್ ಮಾಡದೆ ಸಮಾಜಕ್ಕೆ ತಮ್ಮಿಂದಾಗುವ ಆರ್ಥಿಕ ನೆರವನ್ನು ನೀಡುವ ಮೂಲಕ ದಾನವೂ ಒಂದು ಶ್ರೇಷ್ಠವಾದ ಧರ್ಮ ಎಂಬುದನ್ನು ಸಾಬೀತು ಮಾಡಿದ್ದಾರೆ. ಅನೇಕ ಸಂಘಸಂಸ್ಥೆಗಳ ಉದ್ಧಾರಕ್ಕೆ ಉದಾರವಾಗಿ ಧನಸಹಾಯ ಮಾಡಿ ಕೊಡುಗೈ ದಾನಿಗಳಾಗುತ್ತಾರೆ. ಯಳಂದೂರು ಪಟ್ಟಣದಲ್ಲಿ ನಶಿಸಿ ಹೋಗುತ್ತಿದ್ದ ಶ್ರೇಷ್ಠ ಕವಿ ಷಡಕ್ಷರ ದೇವನ ಗದ್ದುಗೆಯನ್ನು 1975ರಲ್ಲಿ ಜೀರ್ಣೋದ್ಧಾರ ಮಾಡಿ, ಉದ್ಘಾಟನೆಗೆ ಅಂದಿನ ಉಪರಾಷ್ಟ್ರಪತಿಗಳಾಗಿದ್ದ **ಬಿ.ಡಿ.ಜತ್ತಿಯವರು** ಹಾಗೂ ಮುಖ್ಯಮಂತ್ರಿಗಳಾಗಿದ್ದ **ಎಸ್.ನಿಜಲಿಂಗಪ್ಪನವರನ್ನು** ಅತಿಥಿಗಳಾಗಿ ಆಹ್ವಾನಿಸಿ, ಅರ್ಥಪೂರ್ಣ ಕಾರ್ಯಕ್ರಮ ಮಾಡಿದ್ದು ಅವರ ಕಾರ್ಯದಕ್ಷತೆಗೆ ಸಾಕ್ಷಿ.

ಪ್ರಾಮಾಣಿಕತೆಗೆ ಹೆಸರಾದವರು

ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಇತಿಹಾಸದ ಚಿತ್ರಗಳನ್ನು ಅರ್ಥಪೂರ್ಣವಾಗಿ ವರ್ಣಿಸುವ ಶ್ರೀ ಧರ್ಮೇಂದ್ರ ಅವರು ದುಗ್ಗಹಟ್ಟಿ ವೀರಭದ್ರಪ್ಪನವರ ಕಾರ್ಯವೈಖರಿಯ ಕುರಿತು ಹೇಳಿದ ಹಲವು ಸಂಗತಿಗಳು ಅಕ್ಷರಶಃ ಸತ್ಯವಾದವು. 1961–68ರ ಅವಧಿಯಲ್ಲಿ ಅವರು ತಾಲೂಕು ಬೋರ್ಡ್ ಅಧ್ಯಕ್ಷರಾಗಿದ್ದಾಗ ಯಳಂದೂರು ತಾಲೂಕಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರು. ಅವುಗಳಲ್ಲಿ ಬಹು ಮುಖ್ಯವಾಗಿ ಬಿಳಿಗಿರಿರಂಗನಬೆಟ್ಟಕ್ಕೆ ಟಾರ್ ರಸ್ತೆ ಮಾಡಿಸಿದ್ದು ಸಹ ಒಂದು. ವಿಶೇಷವೆಂದರೆ ರಸ್ತೆ ನಿರ್ಮಾಣಕ್ಕೆ ಬಿಡುಗಡೆಯಾಗಿದ್ದ ರೂ. 4.50 ಲಕ್ಷ ರೂಪಾಯಿಗಳಲ್ಲಿ, ಗುಣಮಟ್ಟದ ರಸ್ತೆ ನಿರ್ಮಾಣ ಮಾಡಿಸಿ, ಬಾಕಿ ಉಳಿದ ಹಣ 1.60 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿದ ಅಪರೂಪದ ಪ್ರಾಮಾಣಿಕ ರಾಜಕಾರಣಿ ಅವರು. ಬಿ.ಆರ್.ಹಿಲ್ಸ್‌ಗೆ ವಿದ್ಯುತ್ ಸಂಪರ್ಕ, ದೂರವಾಣಿ ಸಂಪರ್ಕ ಇತ್ಯಾದಿ ಸೌಲಭ್ಯಗಳನ್ನು ವಿಸ್ತರಿಸಿ ಆ ಭಾಗದ ಜನ ಮುಖ್ಯವಾಹಿನಿಗೆ ಬರಲು ಕಾರಣರಾದ ಮಹಿಮರು. ಶ್ರೀ ಮಲೆ ಮಹದೇಶ್ವರಬೆಟ್ಟದ ದೊಡ್ಡರಥದ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಎರಡೂ ಬೆಟ್ಟಗಳ ಜನರ ಹೃದಯಕೋಶದಲ್ಲಿ ಶ್ರೀ ವೀರಭದ್ರಪ್ಪನವರಿಗೆ ಭದ್ರವಾದ ಶಾಶ್ವತ ಸ್ಥಾನವಿದೆ. ಅವರ ಸಾಮಾಜಿಕ ಕಾಳಜಿ ಕುರಿತು ಹೇಳಲೇಬೇಕಾದ ಮತ್ತೊಂದು ರೋಚಕ ಸಂಗತಿ ಎಂದರೆ 1974ರಲ್ಲಿ ಚಿಕ್ಕಹೊಳೆ ಅಣೆಕಟ್ಟು ಹಾನಿಯಾಗಿ ಪ್ರವಾಹ ಉಂಟಾಯಿತು. ಅದರಿಂದ ಯಳಂದೂರು ತಾಲೂಕಿನ ಗ್ರಾಮಗಳಿಗೆ ಹೆಚ್ಚಿನ ಹಾನಿಯಾಗುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ವೇಳೆ ಮಿಲಿಟರಿ ಯೋಧರೊಂದಿಗೆ ವೀರಭದ್ರಪ್ಪನವರು ಜೀವದ ಹಂಗು ತೊರೆದು ಹೋರಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸಹಕಾರ ಕ್ಷೇತ್ರದಲ್ಲಿ ಇವರ ಸೇವೆ ಇಲ್ಲಿ ಉಲ್ಲೇಖನೀಯ. ಕೊಳ್ಳೇಗಾಲ ತಾಲೂಕಿನ ಕುಂತೂರು ಗ್ರಾಮದಲ್ಲಿ 1960ರ ದಶಕದಲ್ಲಿ ಶ್ರೀ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಗೆ (ಈಗ ಬಣ್ಣಾರಿ ಶುಗರ್ಸ್ ಆಗಿದೆ) ಅತೀ ಹೆಚ್ಚು ಷೇರುದಾರರನ್ನು ಸೇರಿಸಿದ ಕೀರ್ತಿ ಇವರಿಗೆ ಸಂದಿದೆ. ಈ ಕಾರ್ಖಾನೆ ಸ್ಥಾಪನೆಯಾಗಬೇಕಾದರೆ ವೀರಭದ್ರಪ್ಪನವರ ಪರಿಶ್ರಮ, ಕಾಳಜಿಯೂ ಅಡಗಿದೆ. ಮಾತ್ರವಲ್ಲ ಅವರು ಸಂಸ್ಥಾಪಕ ನಿರ್ದೇಶಕರಾಗಿದ್ದರು. ಮೈಸೂರು ಜಿಲ್ಲೆಯ ಜನರಿಗೆ ಸಿಹಿ ಹಂಚುವ ಮೂಲಕ ಸಕ್ಕರೆ ನಾಡಾಗಿ ನಿರ್ಮಾಣ ವಾಗಲು ಕಾರಣೀಭೂತರಾದವರಲ್ಲಿ ಶ್ರೀಯುತರು ಒಬ್ಬರು.

> 'ಪರೋಪಕಾರಾಯಂ ಇದಂ ಶರೀರಂ' ಎಂಬ ಮಾತಿಗೆ ಇಂಬು ಕೊಡುವಂತೆ ವೀರಭದ್ರಪ್ಪನವರು ತಮ್ಮ ಬದುಕಿನ ಯಾತ್ರೆಯಲ್ಲಿ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಸೇವೆ ಒದಗಿಸಿ ಈ ಕಾಲಘಟ್ಟದ ಜನರು ಅಚ್ಚರಿಪಡುವಂತಹ ವ್ಯಕ್ತಿತ್ವ ಅವರದ್ದಾಗಿತ್ತು. ಪ್ರಗತಿಪರ ಕೃಷಿಕರಾಗಿ, ರಾಜಕಾರಣಿಯಾಗಿ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಹಕಾರ... ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ದುಗ್ಗಹಟ್ಟಿ ಧೀಮಂತ, ಸಮಾಜೋದ್ಧಾರದ ಹರಿಕಾರರು ಎನಿಸಿಕೊಂಡವರು ಅವರು. ಶ್ರೀಯುತರು ಮಹಾ ದೈವಭಕ್ತರಾಗಿದ್ದು, ಬಸವಣ್ಣನವರ ತತ್ತ್ವ ಆದರ್ಶಗಳನ್ನು ಪಾಲಿಸುತ್ತಿದ್ದರು. ಇಷ್ಟಲಿಂಗ ಪೂಜೆ ಅವರಿಗೆ ಇಷ್ಟವಾದ ನಿತ್ಯನೇಮಗಳಲ್ಲಿ ಒಂದು. ಸಮಯ ವ್ಯರ್ಥ ಮಾಡದೆ ನಿತ್ಯ ಏನಾದರೊಂದು ಕೆಲಸ ಮಾಡುತ್ತಾ ಕಾಯಕವೇ ಕೈಲಾಸ ಎಂದು ನಂಬಿದ್ದರವರು. ಮನೆಗೆ ಬಂದ ಅತಿಥಿಗಳಿಗೆ ಸಕಾಲದಲ್ಲಿ ಊಟೋಪಚಾರದ ವ್ಯವಸ್ಥೆ ಮಾಡಿ ಮಠಗಳಲ್ಲಿನ ಅನ್ನ ದಾಸೋಹ ಪರಿಕಲ್ಪನೆಯನ್ನು ಮನೆಯಲ್ಲಿಯೂ ಅಳವಡಿಸಿ ಬಂಧುಗಳಲ್ಲಿ ಪ್ರೀತಿಪಾತ್ರರಾಗಿದ್ದರು.

ಮನೆಯಲ್ಲೂ ದಾಸೋಹ

ಶ್ರೀಯುತರು ಮಹಾ ದೈವಭಕ್ತರಾಗಿದ್ದು, ಬಸವಣ್ಣನವರ ತತ್ತ್ವ ಆದರ್ಶಗಳನ್ನು ಪಾಲಿಸುತ್ತಿದ್ದರು. ಇಷ್ಟಲಿಂಗ ಪೂಜೆ ಅವರಿಗೆ ಇಷ್ಟವಾದ ನಿತ್ಯನೇಮಗಳಲ್ಲಿ ಒಂದು. ಸಮಯ ವ್ಯರ್ಥ ಮಾಡದೆ ನಿತ್ಯ ಏನಾದರೊಂದು ಕೆಲಸ ಮಾಡುತ್ತಾ ಕಾಯಕವೇ ಕೈಲಾಸ ಎಂದು ನಂಬಿದ್ದರವರು. ಮನೆಗೆ ಬಂದ ಅತಿಥಿಗಳಿಗೆ ಸಕಾಲದಲ್ಲಿ ಊಟೋಪಚಾರದ ವ್ಯವಸ್ಥೆ ಮಾಡಿ ಮಠಗಳಲ್ಲಿನ ಅನ್ನ ದಾಸೋಹ ಪರಿಕಲ್ಪನೆಯನ್ನು ಮನೆಯಲ್ಲಿಯೂ ಅಳವಡಿಸಿ, ಬಂಧುಗಳಲ್ಲಿ ಪ್ರೀತಿಪಾತ್ರರಾಗಿದ್ದರು.

ಮಠ–ಮಾನ್ಯಗಳೊಂದಿಗೆ ನಿಕಟ ಸಂಬಂಧ

ಮಠಮಾನ್ಯಗಳ ಬಗ್ಗೆ ಅಪಾರ ಗೌರವ ಹೊಂದಿದ್ದ ಶ್ರೀಯುತರು ಶ್ರೀ ಸುತ್ತೂರು ಮಠದ 23ನೇ ಪೀಠಾಧಿಪತಿಗಳಾಗಿದ್ದ ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಪ್ತ ಭಕ್ತ ವಲಯದಲ್ಲಿ ಒಬ್ಬರಾಗಿ ಅವರ ನೆಚ್ಚಿನ ಶಿಷ್ಯರಾಗಿದ್ದರು. ಸುತ್ತೂರು ಮಠದ ಸಾಮಾಜಿಕ ಕಾರ್ಯಗಳಲ್ಲಿ ತನು–ಮನಃ ಪೂರ್ವಕವಾಗಿ ಸೇವೆಗೈದಿದ್ದಾರೆ. ಅಷ್ಟೇ ಅಲ್ಲದೆ ಯಳಂದೂರು ಪಟ್ಟಣದಲ್ಲಿ 2002ರಲ್ಲಿ ಸುತ್ತೂರು ಮಠದ ಸಂಸ್ಥಾಪಕರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1042ನೇ ಜಯಂತಿ ಮಹೋತ್ಸವ ಆಚರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಶ್ರೀಯುತರಿಗೆ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಹಿಂದಿನ ಪೂಜ್ಯರಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಕಂಡರೆ ಮಹಾ ಭಕ್ತಿ–ಗೌರವ. ಸಿದ್ದಗಂಗಾ ಮಠದ ಹಿರಿಯ ವಿದ್ಯಾರ್ಥಿಗಳ ಸಂಘ ಪ್ರದಾನ ಮಾಡುವ 2025ನೇ ಸಾಲಿನ ಸಂಘಸಿರಿ ಪ್ರಶಸ್ತಿಯನ್ನು ಇಂದಿನ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಶ್ರೀ ವೀರಭದ್ರಪ್ಪನವರಿಗೆ ಪ್ರದಾನ ಮಾಡಿದ್ದನ್ನು ಸ್ಮರಿಸಬಹುದು. ಅವರ ಅಂತಿಮ ದಿನಗಳಲ್ಲಿ ಸಂದ ಈ ಪ್ರಶಸ್ತಿಯು ಅವರು ಬದುಕಿನ ಸಾರ್ಥಕತೆಯ ಧನ್ಯತಾಭಾವ ಅನುಭವಿಸಲು ನೆರವಾಯಿತು.


ಸಿದ್ದಗಂಗಾ ಮಠದ ಹಿರಿಯ ವಿದ್ಯಾರ್ಥಿಗಳ ಸಂಘ ಪ್ರದಾನ ಮಾಡುವ 2025ನೇ ಸಾಲಿನ ಸಂಘಸಿರಿ ಪ್ರಶಸ್ತಿಯನ್ನು ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಶ್ರೀ ವೀರಭದ್ರಪ್ಪನವರಿಗೆ ಪ್ರದಾನ ಮಾಡಿದ ಸಂದರ್ಭದ ಚಿತ್ರವಿದು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಶಯದಂತೆ ಯಳಂದೂರು ತಾಲೂಕಿನ ಗಂಗವಾಡಿ ಕ್ಷೇತ್ರದಲ್ಲಿನ ಶ್ರೀ ಭದ್ರಕಾಳಮ್ಮ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯ ಹಾಗೂ ಕಲ್ಯಾಣ ಮಂಟಪಗಳ ನಿರ್ಮಾಣ ಮಾಡಿ, ಗ್ರಾಮೀಣ ಜನತೆಗೆ ಕಡಿಮೆ ದರದಲ್ಲಿ ಶುಭ ಕಾರ್ಯಗಳನ್ನು ಮಾಡಿಕೊಳ್ಳಲು ಅನುಕೂಲ ಕಲ್ಪಿಸಿರುತ್ತಾರೆ.

ಮಹಾ ವಿದ್ಯಾದಾನಿಗಳು

ಶಿಕ್ಷಣ ಕ್ಷೇತ್ರಕ್ಕೆ ಶ್ರೀಯುತರ ಕೊಡುಗೆ ಗಣನೀಯವಾದದ್ದು. 2000ನೇ ಇಸವಿಯಲ್ಲಿ ಇಹಲೋಕ ತ್ಯಜಿಸಿದ ತಮ್ಮ ಧರ್ಮಪತ್ನಿ ಶ್ರೀಮತಿ ಸುಂದರಮ್ಮನವರ ಸ್ಮರಣಾರ್ಥ ಪ್ರಾರಂಭವಾದ ಎಸ್.ಡಿ.ವಿ.ಎಸ್. ವಿದ್ಯಾಸಂಸ್ಥೆಯು ಗುಣಮಟ್ಟದ ಶಿಕ್ಷಣ ನೀಡುತ್ತಾ, ಯಳಂದೂರು ತಾಲೂಕಿನ ವಿದ್ಯಾರ್ಥಿಗಳ ಆಶಾಕಿರಣವಾಗಿ ಹೊರಹೊಮ್ಮಿದೆ. ಗ್ರಾಮೀಣ ಭಾಗದ ಕುಟುಂಬಗಳ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಬರಲು ಈ ಸಂಸ್ಥೆಯು ಕಾರಣವಾಗಿದ್ದು, ಆ ಭಾಗದ ಜನರು ಇವರ ಶಿಕ್ಷಣ ಸೇವೆಯನ್ನು ಕೊಂಡಾಡುತ್ತಾರೆ. ಇತ್ತೀಚೆಗೆ ಕಾಗಲವಾಡಿ ಗ್ರಾಮದಲ್ಲಿ ಕೆಲ ವರ್ಷಗಳ ಹಿಂದೆ ವಿಭ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿ ಸುತ್ತಮುತ್ತಲ ಗ್ರಾಮದ ಜನರ ಮನಗೆದ್ದಿದ್ದಾರೆ.

ಪ್ರಗತಿಪರ ರೈತರು, ಯಶಸ್ವಿ ಉದ್ಯಮಿ

ಶ್ರಮಜೀವಿಗೆ ಸಮಯದ ಕೊರತೆಯಿರುವುದಿಲ್ಲ ಎಂಬ ಮಾತಿಗೆ ಇಂಬುಕೊಡುವಂತೆ ಇಷ್ಟೆಲ್ಲಾ ಸೇವಾ ಕಾರ್ಯಗಳ ಜೊತೆಗೆ ಒಬ್ಬ ಪ್ರಗತಿಪರ ರೈತರೂ, ಉದ್ಯಮಿಯಾಗಿಯೂ ಅವರು ಯಶಸ್ವಿಯಾಗಿದ್ದರು ಎಂದರೆ ಆಶ್ಚರ್ಯವಾಗುತ್ತದೆ. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ದೇಶಗಳಿಗೆ ಭೇಟಿ ಕೊಟ್ಟು, ಆಧುನಿಕ ಕೃಷಿ ತಂತ್ರಜ್ಞಾನವನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡು ಮಾದರಿ ಕೃಷಿಕರಾಗಿದ್ದರು. ರೇಷ್ಮೆನಾಡು ಎಂದು ಕರೆಯಿಸಿಕೊಳ್ಳುವ ಆ ಭಾಗದಲ್ಲಿ ಹಿಪ್ಪುನೇರಳೆ ಕೃಷಿ ಜನಪ್ರಿಯವಾಗಿತ್ತು. ಜಪಾನ್ ದೇಶಕ್ಕೆ ಪ್ರವಾಸ ಕೈಗೊಂಡು ಹಿಪ್ಪುನೇರಳೆ ಕೃಷಿ ಬಗ್ಗೆ ಮಾಹಿತಿ ಹೊತ್ತು ತಂದು ಸ್ಥಳೀಯವಾಗಿ ಸಾಕಷ್ಟು ಪ್ರಯೋಗಗಳನ್ನು ಮಾಡಿದ್ದರು. 1970ರ ದಶಕದಲ್ಲಿ ಯಳಂದೂರು ಪಟ್ಟಣದಲ್ಲಿ ಶ್ರೀ ಮಹದೇಶ್ವರ ಚಿತ್ರಮಂದಿರ ಹಾಗೂ ಕಾಗಲವಾಡಿ ಯಲ್ಲಿಯೂ ಒಂದು ಚಿತ್ರ ಮಂದಿರ ಸ್ಥಾಪಿಸಿ ಆ ಭಾಗದ ಜನರ ಮನರಂಜನೆಯ ಕೊರತೆಯನ್ನು ನೀಗಿಸಿದ್ದಾರೆ.

ಮಹಾ ಹೃದಯವಂತರು

ಅನೇಕ ಸಂಘ ಸಂಸ್ಥೆಗಳ ನಿರ್ದೇಶಕರಾಗಿ/ಸದಸ್ಯರಾಗಿ ತಮ್ಮ ಅಭಿವೃದ್ಧಿ ಸಂಕಲ್ಪದಿಂದ ಆ ಸಂಸ್ಥೆಗಳ ಏಳ್ಗೆಯಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ನೇರ ನಡೆ–ನುಡಿಗೆ ಹೆಸರಾಗಿದ್ದ ಶ್ರೀಯುತರು ತಮ್ಮ ಮನಸ್ಸಿಗೆ ಬಂದ ವಿಚಾರವನ್ನು ಅದು ಎಷ್ಟೇ ಕಹಿ ಎನಿಸಿದರೂ ಹೇಳಿ ಬಿಡುತ್ತಿದ್ದರು. ಇದರಿಂದ ಅನೇಕರಿಗೆ ನಿಷ್ಠುರವಾಗಿರುವುದು ಸಹ ಉಂಟು. ಅವರು ಮುಂಗೋಪಿಯಂತೆ ಕಂಡರೂ ಆಂತರ್ಯದಲ್ಲಿ ಹೃದಯವಂತರಾಗಿದ್ದರು, ವ್ಯಕ್ತಿ ನಿಷ್ಠೆಗಿಂತ ವಸ್ತುನಿಷ್ಠವಾಗಿ ನಡೆದುಕೊಂಡು ಹಿರಿಯ–ಕಿರಿಯರೆನದೆ ಎಲ್ಲರೊಂದಿಗೆ ಆತ್ಮೀಯತೆಯಿಂದ ಬೆರೆಯುತ್ತಿದ್ದರು.

ಶ್ರೀಯುತರದ್ದು ನಾಲ್ಕು ಜನ ಮಕ್ಕಳು ಹಾಗೂ ಏಳು ಜನ ಮೊಮ್ಮಕ್ಕಳನ್ನು ಹೊಂದಿದ್ದ ತುಂಬು ಕುಟುಂಬ. ವೀರ ಭದ್ರಪ್ಪನವರ ಮಕ್ಕಳಾದ ವಿ.ಮಲ್ಲಿಕಾರ್ಜುನಸ್ವಾಮಿ, ವಿ.ಗಂಗಾಧರಸ್ವಾಮಿ ಹಾಗೂ ಅವರ ಸಹೋದರ ಡಿ.ಪಿ.ಗುರುಸಿದ್ದಪ್ಪ ಅವರ ಪುತ್ರ ಡಿ.ಜಿ.ರಾಜೇಶ್ ಅವರು ಶ್ರೀಯುತರ ಎಲ್ಲಾ ಕಾರ್ಯಗಳಿಗೆ ಬೆನ್ನೆಲುಬಾಗಿ ನಿಂತು ಅವರ ಆಶಯಗಳು ಸಾಕಾರಗೊಳ್ಳುವಲ್ಲಿ ಕೈಜೋಡಿಸಿದ್ದಾರೆ.

ನುಡಿನಮನ ಕಾರ್ಯಕ್ರಮ

ಶ್ರೀಯುತರ ಸ್ಮರಣಾರ್ಥ ಸ್ವಗ್ರಾಮವಾದ ದುಗ್ಗಹಟ್ಟಿಯಲ್ಲಿ ದಿನಾಂಕ 9–1–2026ರಂದು ಬೆಳಗ್ಗೆ 10.30ಕ್ಕೆ ಶಿವಗಣಾರಾಧನೆ ಹಾಗೂ ನುಡಿನಮನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಸ್ಮರಣೆ ಕಾರ್ಯಕ್ರಮದಲ್ಲಿ ನಾಡಿನ ಮಠಾಧೀಶರು, ಜನಪ್ರತಿನಿಧಿಗಳು, ಅಪಾರ ಅಭಿಮಾನಿಗಳು ಹಾಗೂ ಬಂಧುಮಿತ್ರರು ಪಾಲ್ಗೊಳ್ಳುತ್ತಿದ್ದಾರೆ. ಇಂದು ದುಗ್ಗಹಟ್ಟಿ ವೀರಭದ್ರಪ್ಪನವರ ಕಾಯ ನಮ್ಮೊಟ್ಟಿಗೆ ಇಲ್ಲದೇ ಇರಬಹುದು, ಆದರೆ ಅವರು ಕಾಯಕ ಧರ್ಮದಿಂದ ಮಾಡಿದ ಸತ್ಕಾರ್ಯಗಳು ಅವರ ಹೆಸರನ್ನು ಅಜರಾಮರವಾಗಿಸುತ್ತವೆ.

ಹೂರಣ: ಕಾಯಕ್ಕೆ ಕೊನೆಯುಂಟು, ಕಾಯಕ ಪ್ರೇಮದಿಂದ ಮಾಡಿದ ಕಾರ್ಯಕ್ಕೆ ಕೊನೆಯಿಲ್ಲ.

ದಸರಾ ವಸ್ತುಪ್ರದರ್ಶನದಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ ಆಚರಣೆ


ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸಾವಿತ್ರಿ ಬಾಯಿ ಫುಲೆ ಜಯಂತಿ ಆಚರಿಸಲಾಯಿತು.

ಮೈಸೂರು,ಜ.4(ಎಂಕೆ)–ಕೆಲ ವರ್ಗಕ್ಕೆ ಮಾತ್ರವಲ್ಲದೆ ಸರ್ವರಿಗೂ ಶಿಕ್ಷಣ ಸಿಗುವಂತೆ ಮಾಡಿದ ಕೀರ್ತಿ ಸಾವಿತ್ರಿಬಾಯಿ ಫುಲೆ ಅವರಿಗೆ ಸಲ್ಲುತ್ತದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸ್ಮರಿಸಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಕೃಷ್ಣರಾಜ ಯುವ ಬಳಗ ಆಯೋಜಿಸಿದ್ದ ಭಾರತದ ಮಹಿಳಾ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಸಮಾಜದ ಕಣ್ಣು ಎಂದು ಸಾರಿದ ಸಾವಿತ್ರಿಬಾಯಿ ಫುಲೆ, ಸದಾ ಸ್ಮರಣೀಯರು ಎಂದರು.

ದೇಶದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆ ಆರಂಭಿಸುವ ಮೂಲಕ ಮಹಿಳಾ ಶಿಕ್ಷಣಕ್ಕೆ ಮುನ್ನುಡಿ ಬರೆದ ಸಾವಿತ್ರಿಬಾಯಿ ಫುಲೆ ಅವರು, ಮಹಿಳೆಯರನ್ನು ಅಡುಗೆ ಮನೆಗೆ ಸೀಮಿತ ಮಾಡಿದ ಕಾಲದಲ್ಲಿ ಶಿಕ್ಷಣ ಕ್ರಾಂತಿ ಮಾಡಿದ್ದರ ಪರಿಣಾಮವಾಗಿ ಇಂದು ಮಹಿಳೆಯರು ಎಲ್ಲಾ ರಂಗಗಳಲ್ಲಿ ಸಾಧನೆ ಮಾಡಲು ಕಾರಣವಾಗಿದೆ ಎಂದರು.

ನಂತರ ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ರಘುರಾಜೇ ಅರಸ್, ಪತ್ರಕರ್ತ ಟಿ.ಗುರುರಾಜ್, ಕೆ.ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜು ಬಸಪ್ಪ, ಕಾಂಗ್ರೆಸ್ ಯುವ ಮುಖಂಡ ರಾಕೇಶ್‌ಕುಮಾರ್, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ಕೆ.ಎಂ. ನವೀನ್, ನಿರೂಪಕ ಅಜಯ್ ಶಾಸ್ತ್ರಿ, ರಂಗಸ್ವಾಮಿ ಪಾಪು, ಪದ್ಮನಾಭ್ ಗುಂಡಣ್ಣ, ಮೆಲ್ಲಹಳ್ಳಿ ರಾಜೇಶ್‌ಗೌಡ, ಮಹೇಂದ್ರ, ಜಯಲಕ್ಷ್ಮಿ, ನಾಗೇಶ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಫೆ.12ಕ್ಕೆ ದೆಹಲಿಯಲ್ಲಿ ನಡೆಯುವ ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ ಬೆಂಬಲಿಸಲು ಕರೆ

ಮೈಸೂರು,ಜ.4(ಎಸ್‌ಪಿಎನ್)– ಬಿಹಾರದ ಬುದ್ಧಗಯಾದಲ್ಲಿರುವ 'ಮಹಾಬೋಧಿ ಮಹಾವಿಹಾರ'ದ ನಿರ್ವಹಣೆಗಾಗಿ ರೂಪಿಸಿರುವ 1949ರ ಬಿ.ಟಿ.ಆಕ್ಟ್ ರದ್ದುಗೊಳಿಸಿ, ಇಲ್ಲಿನ ಆಡಳಿತವನ್ನು ಸಂಪೂರ್ಣ ಬೌದ್ಧರಿಗೆ ನೀಡುವಂತೆ ಒತ್ತಾಯಿಸಿ ಫೆ.12ರಂದು ದೆಹಲಿಯಲ್ಲಿ ಹಮ್ಮಿಕೊಂಡಿರುವ 'ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ' ಯಶಸ್ಸಿಗೆ ಶ್ರಮಿಸಬೇಕು ಎಂದು ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಕರೆ ನೀಡಿದರು.

ಮೈಸೂರು ಬಲ್ಲಾಳ ವೃತ್ತದ ಬಳಿಯಿರುವ ವಿಶ್ವಮೈತ್ರಿ ಬುದ್ಧವಿಹಾರ ಆವರಣದಲ್ಲಿ ಕರ್ನಾಟಕದ ಉಪಾಸಿಕಾ ಮತ್ತು ಉಪಾಸಕಾ ಚಾರಿಟೆಬಲ್ ಟ್ರಸ್ಟ್ ಹಾಗೂ ಬೋಧಗಯಾ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ ರಾಜ್ಯ ಸಮಿತಿ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ'ದ ಮೈಸೂರಿನ ಸಭೆಯಲ್ಲಿ ಅವರು ಮಾತನಾಡಿದರು.

ಬಿಹಾರದಲ್ಲಿ ದಲಿತರ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಹಾಗಾಗಿ ಬೌದ್ಧರ ಪವಿತ್ರ ಸ್ಥಳವಾದ ಬುದ್ಧಗಯಾ ಮಹಾಬೋಧಿ ಮಹಾವಿಹಾರ ಹೋರಾಟ ಯಶಸ್ವಿಯಾಗಿಲ್ಲ. ಇದಕ್ಕಾಗಿ ಹೋರಾಟ ಮಾಡುತ್ತಿದ್ದ ಭಂತೆ ವಿನಾಚಾರ ಅವರನ್ನು ಅಲ್ಲಿನ ಸರ್ಕಾರ 68 ದಿನಗಳ ಕಾಲ ಜೈಲಿಗಟ್ಟಿತು. ಆದರೂ ಅವರು, ಬೌದ್ಧರ ಪವಿತ್ರ ಸ್ಥಳವಾದ 'ಮಹಾಬೋಧಿ ಮಹಾವಿಹಾರ' ಪಡೆಯಲು ಹೋರಾಟ ಮಾಡುತ್ತಿದ್ದರೂ ಈ ಹೋರಾಟಕ್ಕೆ ಬೆಂಬಲ ಸಿಗದಿರುವುದು ಅತ್ಯಂತ ನೋವಿನ ಸಂಗತಿ ಎಂದರು.



'ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ'ದ ಮೈಸೂರಿನ ಸಭೆಯಲ್ಲಿ ಜ್ಯೋತಿ ಹಿಡಿದು ವಿವಿಧ ಬೌದ್ಧ ಭಿಕ್ಕುಗಳು ಒಗ್ಗಟ್ಟು ಪ್ರದರ್ಶಿಸಿದರು.

ಈ ದೇಶಕ್ಕೆ ಸಂವಿಧಾನ ಜಾರಿಯಾಗುವ ಮುಂಚೆಯೇ 'ಮಹಾಬೋಧಿ ಮಹಾವಿಹಾರ'ದ ನಿರ್ವಹಣೆಗಾಗಿ 1949ರ ಬಿ.ಟಿ.ಆಕ್ಟ್ ಜಾರಿಗೊಂಡಿದೆ. ಈ ಆಕ್ಟ್‌ನ ಮುಕ್ತಿಗಾಗಿ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಆದರೂ ಯಶಸ್ವಿಯಾಗಿಲ್ಲ. ಈ ಹೋರಾಟ ಯಶಸ್ವಿಯಾಗಲು ಜ.6ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ 'ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ'ದ ಮನವಿಯನ್ನು ಕರ್ನಾಟಕ ರಾಜ್ಯಪಾಲರ ಮೂಲಕ ಕೇಂದ್ರ ಸರ್ಕಾರಕ್ಕೆ ನೀಡುವ ಕಾರ್ಯಕ್ರಮವಿದೆ. ಈ ಭಾಗದ ಸಮಸ್ತ ಭೀಮನ ಮಕ್ಕಳು ಹೋರಾಟದಲ್ಲಿ ಭಾಗಿಯಾಗುವಂತೆ ಮನವಿ ಮಾಡಿದರು.

ಈ ದೇಶದಲ್ಲಿ ಹಿಂದೂಗಳಿಗಾಗಿ ದೇವಸ್ಥಾನಗಳಿವೆ. ಕ್ರೈಸ್ತರಿಗಾಗಿ ಚರ್ಚ್‌ಗಳಿವೆ. ಮುಸ್ಲಿಮರಿಗಾಗಿ ಮಸೀದಿಗಳಿವೆ. ಸಿಖ್ಖರಿಗಾಗಿ ಗುರುದ್ವಾರಗಳಿವೆ. ಆಯಾಯ ಧರ್ಮದ ಧಾರ್ಮಿಕ ಸ್ಥಳಗಳನ್ನು ನಮ್ಮದೆಂದು ಗರ್ವದಿಂದ ಆಯಾಯ ಸಮುದಾಯಗಳು ಹೇಳಿಕೊಳ್ಳುತ್ತವೆ. ಆದರೆ, ಬೌದ್ಧರು ಬಿಹಾರದ ಬುದ್ಧಗಯಾದಲ್ಲಿನ ಮಹಾಬೋಧಿ ಮಹಾವಿಹಾರವನ್ನು ನಮ್ಮದೆಂದು ಹೇಳುವ ಪರಿಸ್ಥಿತಿ ಇಲ್ಲವಾಗಿರುವುದು ಬೇಸರ ಸಂಗತಿ ಎಂದರು.

ಈ ವೇಳೆ ಎಂಎಲ್‌ಸಿ ಡಾ.ಕೆ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಭಂತೆ ವಿನಾಚಾರ, ಮಾಜಿ ಮೇಯರ್ ಪುರುಷೋತ್ತಮ್, ಬೀದರ್‌ನ ಶ್ರೀ ಭೂಮಿ ದೀಪ ಬಂತೇಜಿ, ಶ್ರೀ ಬೋಧಿದತ್ತ ಅಮರಜ್ಯೋತಿ, ಮಾತೆ ಗೌತಮಿ, ನಾಗರತ್ನ ಸೇರಿದಂತೆ ಇತರೆ ಬೌದ್ಧ ಸನ್ಯಾಸಿಗಳಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಫೆ.12ರ ಬುದ್ಧಗಯಾ ಮುಕ್ತಿ ಆಂದೋಲನದ ದೆಹಲಿ ಚಲೋ ಯಶಸ್ವಿಗಾಗಿ 'ಬೌದ್ಧರಿಗಾಗಿ ಬುದ್ಧಗಯಾ' ಶೀರ್ಷಿಕೆಯಡಿ ಮೈಸೂರಿನ ಬಸವಲಿಂಗಪ್ಪ ವೃತ್ತ(ಸಿಲ್ಕ್ ಫ್ಯಾಕ್ಟರಿ)ದಿಂದ ವಿಶ್ವಮೈತ್ರಿ ಬುದ್ಧ ವಿಹಾರದವರೆಗೆ ಮೊಂಬತ್ತಿ ಮೆರವಣಿಗೆ ನಡೆಸಲಾಯಿತು.

ಅಪಘಾತದಲ್ಲಿ ಗಾಯಗೊಂಡಿದ್ದ ಹಿರಿಯ ಪತ್ರಕರ್ತ ರಾಜಕುಮಾರ್ ಬಾಹುಸಾರ್ ಸಾವು

ಮೈಸೂರು,ಜ.4– ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ನಗರದ ದಟ್ಟಗಳ್ಳಿ ನಿವಾಸಿ, ಹಿರಿಯ ಪತ್ರಕರ್ತ ರಾಜಕುಮಾರ್ ಬಾಹುಸಾರ್ (64) ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಸಂಜೆ ನಿಧನರಾದರು.



ವಾರದ ಹಿಂದೆ ನಂಜನಗೂಡು ತಾಲೂಕಿನ ಕಳಲೆಯ ಬಳಿ ನಡೆದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅವರು, ನಗರದ ಟ್ರಾಮಾ ಕೇರ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇವರ ಪತ್ನಿ ಕಳೆದ ವರ್ಷ ಅನಾರೋಗ್ಯದಿಂದ ಮೃತಪಟ್ಟಿದ್ದರು.

ಮೂಲತಃ ಚಾಮರಾಜನಗರ ಜಿಲ್ಲೆಯವರಾದ ರಾಜ್‌ಕುಮಾರ್ ಬಾಹುಸಾರ್, ಚಾಮರಾಜನಗರ ಹಾಗೂ ಮೈಸೂರಿನಲ್ಲಿ ವಿವಿಧ ಪತ್ರಿಕೆಗಳಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲದಿಂದ ವರದಿಗಾರರಾಗಿ ಕೆಲಸ ಮಾಡಿದ್ದರು. ಮೈಸೂರು ಮಿತ್ರ, ಕನ್ನಡ ಪ್ರಭ, ಸಂಕ್ರಾಂತಿ, ಸಂಯುಕ್ತ ಕರ್ನಾಟಕ, ರಾಜ್ಯ ಧರ್ಮ, ಜನಮನ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದರು.

ಅವರ ಪಾರ್ಥಿವ ಶರೀರವನ್ನು ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿಡಲಾಗಿದ್ದು, ಸೋಮವಾರ (ಜ.5) ಮರಣೋತ್ತರ ಪರೀಕ್ಷೆ ನಂತರ ಮಧ್ಯಾಹ್ನ 12ರ ಸುಮಾರಿಗೆ ನಗರದ ದಟ್ಟಗಳ್ಳಿಯ ಮೃತರ ನಿವಾಸದ ಆವರಣದಲ್ಲಿ ಅರ್ಧ ಗಂಟೆ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಚಾಮುಂಡಿ ಬೆಟ್ಟದ ತಪ್ಪಲಿನ ಸುಡುವ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಯೆದ್ ಕುದ್ರಾಟ್ ಹಶ್ಮಿಗೆ ಪಿಹೆಚ್.ಡಿ



ಮೈಸೂರು, ಜ.4– ಸಯೆದ್ ಕುದ್ರಾಟ್ ಹಶ್ಮಿ ಅವರು ಡಾ. ಎಂ.ಎಸ್ ಬೆಂಜಮಿನ್ ಅವರ ಮಾರ್ಗದರ್ಶನದಲ್ಲಿ ಸಾದರ ಪಡಿಸಿದ ಕಾನೂನು ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಶೇಷ ಚೇತನರ ಲೂಯಿಸ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ದೃಷ್ಟಿ ಚಾರಿಟೆಬಲ್ ಟ್ರಸ್ಟ್ ಚಾಂಪಿಯನ್



ವಿಶೇಷ ಚೇತನರ ಲೂಯಿಸ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ದೃಷ್ಟಿ ಚಾರಿಟೇಬಲ್ ಟ್ರಸ್ಟ್ ತಂಡಕ್ಕೆ ದೇವರಾಜ್ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು, ಜ.4(ವಿವಿಹೆಚ್)– ಮೈಸೂರಿನ ಎಸ್‌ಜೆಸಿಇ ಮೈದಾನದಲ್ಲಿ ದೃಷ್ಟಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಲೂಯಿಸ್ ಬ್ರೈಲ್ ಅವರ 217ನೇ ಜಯಂತಿ ಪ್ರಯುಕ್ತ ಭಾನುವಾರ ಆಯೋಜಿಸಿದ್ದ ವಿಶೇಷ ಚೇತನರ ಲೂಯಿಸ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ದೃಷ್ಟಿ ಚಾರಿಟೆಬಲ್ ಟ್ರಸ್ಟ್ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ದೃಷ್ಟಿ ಚಾರಿಟೇಬಲ್ ಟ್ರಸ್ಟ್, ಸ್ನೇಹ ದೀಪ ಅಕಾಡೆಮಿ ಮತ್ತು ದೀಪ ಅಕಾಡೆಮಿ ತಂಡಗಳ ನಡುವೆ ನಡೆದ ತ್ರಿಕೋನ ಸರಣಿಯಲ್ಲಿ ಮೂರು ಪಂದ್ಯಗಳು ಡ್ರಾನಲ್ಲಿ ಅಂತ್ಯಗೊಂಡವು. ಬಳಿಕ ರನ್‌ರೇಟ್ ಆಧಾರದಲ್ಲಿ ಸ್ನೇಹ ದೀಪ ಅಕಾಡೆಮಿ ಮತ್ತು ದೃಷ್ಟಿ ಚಾರಿಟೆಬಲ್ ಟ್ರಸ್ಟ್ ಫೈನಲ್ಸ್ ಮುಖಾಮುಖಿಯಾಯಿತು. ದೃಷ್ಟಿ ಟ್ರಸ್ಟ್ ಚಾಂಪಿಯನ್ ಆದರೆ ಸ್ನೇಹದೀಪ ಅಕಾಡೆಮಿ ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ತೋರಿದ ದೃಷ್ಟಿ ಚಾರಿಟೆಬಲ್ ಟ್ರಸ್ಟ್‌ನ ಕೃಷ್ಣ ಮೂರ್ತಿ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೆ, ಫೈನಲ್ಸ್ ಪಂದ್ಯದ ಪಂದ್ಯಶ್ರೇಷ್ಠ ಪ್ರಶಸ್ತಿಗೂ ದೃಷ್ಟಿ ಅಕಾಡೆಮಿಯ ಅಭಿರಾಮ ಭಾಜನರಾದರು.

ಈ ವೇಳೆ ಗೆದ್ದ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷ ದೇವರಾಜ್, ರೋಟರಿಯ ಉದ್ದೇಶ ಸಬಲೀಕರಣ ಮತ್ತು ಸಹಾಯದ ಅವಶ್ಯಕತೆ ಇರುವವರ ಕೈ ಹಿಡಿಯುವುದಾಗಿದೆ. ಈ ನಿಟ್ಟಿನಲ್ಲಿ ವಿಶೇಷ ಚೇತನರಿಂದ ನಡೆಯುತ್ತಿರುವ ಇಂತಹ ಕಾರ್ಯಕ್ರಮಗಳಿಗೆ ಊರುಗೋಲಾಗಿ ಸದಾ ನಿಲ್ಲಲಿದೆ ಎಂದರು.

ನಾನು ಸಬಲನಾದಲ್ಲಿ ನನ್ನ ಸಮುದಾಯವೂ ಸಬಲವಾಗುತ್ತದೆ ಎಂಬ ಉದ್ದೇಶದಿಂದ ದಿವಾಕರ್ ಅವರು ತಾವೇ ಸ್ಥಾಪಿಸಿರುವ ದೃಷ್ಟಿ ಚಾರಿಟೇಬಲ್ ಟ್ರಸ್ಟ್ ಕಡೆಯಿಂದ ಸಮಾಜಮುಖಿ ಕೆಲಸಗಳ ಕೈಗೊಂಡಿರುವುದು ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ದೃಷ್ಟಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಿರಾಮಯ ಫೌಂಡೇಷನ್‌ನ ಸಂಸ್ಥಾಪಕರಾದ ಆರ್.ರಕ್ಷಿತಾ ಅವರಿಗೆ 2026ನೇ ಸಾಲಿನ 'ದೃಷ್ಟಿ ಪ್ರತಿಷ್ಠಾನ ಉತ್ತಮ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ನಿರ್ದೇಶಕ ರಾಘವೇಂದ್ರ, ದೃಷ್ಟಿ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಬಿ.ಆರ್.ದಿವಾಕರ್ ಉಪಸ್ಥಿತರಿದ್ದರು.

ಹದಿನಾರು ಕೆರೆಯಲ್ಲಿ ಪಟ್ಟೆತಲೆ ಹೆಬ್ಬಾತುಗಳ ಕಲರವ...



ಮೈಸೂರು ಸಮೀಪದ ಹದಿನಾರು ಕೆರೆಯಲ್ಲಿ ವಿದೇಶದಿಂದ ವಲಸೆ ಬಂದಿರುವ ಪಟ್ಟೆತಲೆ ಹೆಬ್ಬಾತುಗಳ ಕಲರವ ಕಳೆಗಟ್ಟಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮದುವೆಯಾಗುವುದಾಗಿ ನಂಬಿಸಿ ಶಿಕ್ಷಕಿಗೆ 11.76 ಲಕ್ಷ ರೂ. ವಂಚನೆ

ಮೈಸೂರು,ಜ.4(ಪಿಎಂ)– ಮದುವೆಯಾಗುವುದಾಗಿ ಶಿಕ್ಷಕಿಯೊಬ್ಬರನ್ನು ನಂಬಿಸಿ ಅವರಿಂದ 11,76,500 ರೂ. ನಗದನ್ನು ಯುಪಿಐ ಮತ್ತು ಆರ್‌ಟಿಜಿಎಸ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ವಿಜಯನಗರದ 4ನೇ ಹಂತದ ಶಿಕ್ಷಕಿ ಮೋಸ ಹೋದವರು. ಸಚಿನ್ ಎಂದು ಪರಿಚಯಿಸಿಕೊಂಡವ ನಾನು ಮ್ಯಾಟ್ರಿಮೋನಿಯಲ್ಲಿ ನಿಮ್ಮ ನಂಬರ್ ಪಡೆದುಕೊಂಡೆ. ಭಾರತಕ್ಕೆ ಬಂದು ನಿಮ್ಮನ್ನು ಮದುವೆಯಾಗುತ್ತೇನೆ ಎಂದು ನಂಬಿಸಿದ. ನಂತರ ಗಿಫ್ಟ್ ಕಳುಹಿಸಿದ್ದು, ಗಿಫ್ಟ್ ಪಾರ್ಸಲ್‌ನಲ್ಲಿ 47000 ಯೂರೋ ಹಣವಿದೆ. ಅದಕ್ಕೆ ತೆರಿಗೆ ಕಟ್ಟಬೇಕೆಂದು ಹಂತ ಹಂತವಾಗಿ ಒಟ್ಟು 11.76,500 ಹಣವನ್ನು ಯುಪಿಐ ಮತ್ತು ಆರ್‌ಟಿಜಿಎಸ್ ಮೂಲಕ ವರ್ಗಾವಣೆ ಮಾಡಿಸಿ ಕೊಂಡು ಮೋಸ ಮಾಡಿದ್ದಾನೆ ಎಂದು ಅಪರಿಚಿತ ವ್ಯಕ್ತಿಯ ವಿರುದ್ಧ ನೊಂದ ಮಹಿಳೆ ಆರೋಪಿಸಿದ್ದು, ಈ ಬಗ್ಗೆ ಜ.2ರಂದು ಪ್ರಕರಣ ದಾಖಲಾಗಿದೆ.

ಮೈಸೂರು ಅರಮನೆಯ ಆಜುಬಾಜಲ್ಲಿ ಮತ್ತೆ

ರಸ್ತೆ ಬದಿ ವ್ಯಾಪಾರಿಗಳ ಕಾರುಬಾರು


ಮೈಸೂರು,ಜ.4(ಪಿಎಂ)– ಅರಮನೆಯ ವರಹಾ ಗೇಟ್ ಬಳಿ ಬೀದಿ ಬದಿ ಹಾಗೂ ಗೂಡಂಗಡಿಗಳ ಕಾರುಬಾರು ಮತ್ತೆ ಶುರುವಾಗಿದೆ. ಕೆಲ ದಿನಗಳ ಹಿಂದೆಯಷ್ಟೇ ಇಲ್ಲಿದ್ದ ಗೂಡಂಗಡಿಗಳನ್ನು ತೆರವುಗೊಳಿಸಲಾಗಿತ್ತು. ಆದರೆ ಇದೀಗ ಅಲ್ಲಿನ ಬಹುತೇಕ ಕಡೆಯಲ್ಲಿ ಗೂಡಂಗಡಿಗಳು ಮತ್ತೆ ತಲೆ ಎತ್ತಿವೆ.

ಅರ್ಥಾತ್ ಅದೇ ಯಥಾಸ್ಥಿತಿ ವಾತಾವರಣ ನಿಧಾನವಾಗಿ ಸೃಷ್ಟಿಯಾಗುತ್ತಿದೆ. ಅರಮನೆಯ ಜಯಮಾರ್ತಾಂಡ ದ್ವಾರದ ಮುಂಭಾಗ ಬಿಎನ್ ರಸ್ತೆಯಲ್ಲಿ ಕಳೆದ ಡಿ.25ರಂದು ಬಲೂನು ವ್ಯಾಪಾರಿ ಬಳಿಯಿದ್ದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿತ್ತು. ಇದರ ಪರಿಣಾಮ ಸ್ಥಳದಲ್ಲೇ ಆ ವ್ಯಾಪಾರಿ ಭೀಕರವಾಗಿ ಸಾವನ್ನಪ್ಪಿದ್ದರೆ, ಮಾರನೆ ದಿನ ಗಾಯಗೊಂಡಿದ್ದ ಇಬ್ಬರು ಮಹಿಳೆಯರು ಮೃತಪಟ್ಟಿದ್ದರು.

ಇದರಿಂದ ಎಚ್ಚೆತ್ತಿದ್ದ ನಗರ ಪೊಲೀಸರು, ಅರಮನೆ ವರಹಾ ಗೇಟ್ ಬಳಿ ಹಲವು ವರ್ಷಗಳಿಂದ ಬೀಡುಬಿಟ್ಟಿದ್ದ ಗೂಡಂಗಡಿಗಳ ತೆರವಿಗೆ ಕ್ರಮ ವಹಿಸಿದ್ದರು. ಈ ದ್ವಾರದ (ಗನ್‌ಹೌಸ್) ಸಮೀಪದ 50ಕ್ಕೂ ಹೆಚ್ಚು ಗೂಡಂಗಡಿಗಳನ್ನು ತೆರವುಗೊಳಿಸಿದ್ದರು. ಕರಕುಶಲ ಸಾಮಗ್ರಿಗಳ ಮಾರಾಟಗಾರರು, ತಿಂಡಿ ತಿನಿಸು ವ್ಯಾಪಾರದ ಗಾಡಿಗಳು, ಚಹ ಅಂಗಡಿಗಳನ್ನು ಸೇರಿದಂತೆ ಎಲ್ಲಾ ಬಗೆಯ ಬೀದಿಬದಿ ವ್ಯಾಪಾರ ತೆರವುಗೊಳಿಸಲಾಗಿತ್ತು.

ಅಲ್ಲದೆ, ಮತ್ತೆ ಅಲ್ಲಿ ಅಂತಹ ವಹಿವಾಟು ನಡೆಯದಂತೆ ನಿಗಾ ವಹಿಸಲು ಕಮಾಂಡೋ ಪಡೆಯನ್ನು ಸಹ ನಿಯೋಜಿಸಲಾಗಿತ್ತು. ಆದರೆ ಇದೀಗ ನಿಧಾನವಾಗಿ ವಹಿವಾಟುಗಳಲ್ಲಿ ಇಲ್ಲಿ ಆರಂಭಗೊಳ್ಳುತ್ತಿದ್ದು, ಅದೇ ಯಥಾಸ್ಥಿತಿಗೆ ಅರಮನೆಯ ಪ್ರದೇಶ ಮರಳುವಂತಾಗುತ್ತಿದೆ.

ಇದೀಗ ಬಹುತೇಕ ವ್ಯಾಪಾರ ವಹಿವಾಟು ಹಿಂದಿನಂತೆ ನಡೆಯಲು ಶುರುವಾಗಿದ್ದು, ಪಾನಿಪುರಿ, ಕಬ್ಬಿನ ಹಾಲು, ಎಳನೀರು, ಹಣ್ಣು ಹಂಪಲು, ಅಲಂಕಾರಿ ವಸ್ತು ಹಾಗೂ ಆಟಿಕೆಗಳ ಮಾರಾಟ ಮತ್ತೆ ಗರಿಗೆದರಿದೆ. ವಿಶ್ವವಿಖ್ಯಾತ ಮೈಸೂರು ಅರಮನೆಯ ಭದ್ರತೆಯ ದೃಷ್ಟಿಯಿಂದ ಇಲ್ಲಿನ ಸುತ್ತಮುತ್ತಲ ಪ್ರದೇಶದಲ್ಲಿ ಬೀದಿಬದಿ ವ್ಯಾಪಾರ ವಹಿವಾಟಿಗೆ ಇತಿಮಿತಿ ಕಾಯ್ದುಕೊಳ್ಳುವುದು ಸೂಕ್ತವೆಂದು ಪ್ರಜ್ಞಾವಂತ ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.





ಮೈಸೂರು ಅರಮನೆಯ ವರಹಾ ದ್ವಾರದ ಸಮೀಪದ ರಸ್ತೆ ಬದಿಯಲ್ಲಿ ಬೀದಿ ಬದಿಯ ವ್ಯಾಪಾರ ವಹಿವಾಟು ಮತ್ತೆ ತಲೆ ಎತ್ತಿರುವುದು.

ಸಿಲಿಂಡರ್ ಸ್ಫೋಟದ ಬಳಿಕ ಜೊತೆಗೆ ಕಳೆದ ಡಿಸೆಂಬರ್ ಕೊನೆ ವಾರದಲ್ಲಿ ಅರಮನೆ ವರಹಾ ದ್ವಾರದ ಸಮೀಪ ಬೀದಿ ವ್ಯಾಪಾರ ತೆರವುಗೊಳಿಸಿದ್ದ ನಗರ ಪೊಲೀಸರು ಹಾಗೂ ಸ್ಥಳೀಯ ಆಡಳಿತ, ಇದೀಗ ಅವು ಮತ್ತೆ ನಿಧಾನವಾಗಿ ಬೀಡುಬಿಡುತ್ತಿರುವಾಗ ಮೌನಕ್ಕೆ ಶರಣಾಗಿರುವುದೇಕೆ? ಹಾಗಿದ್ದಲ್ಲಿ ತೆರವು ಮಾಡಿದ್ದು ಯಾವ ಉದ್ದೇಶಕ್ಕಾಗಿ? ಬೀದಿ ಬದಿ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಇವರಿಂದ ಸಾಧ್ಯವಿಲ್ಲವೇ? ಎಂದು ಅವರು ಪ್ರಶ್ನಿಸಿದ್ದಾರೆ.

ಕ್ರೀಡೆ ಮಾನವನ ದೈಹಿಕ, ಮಾನಸಿಕ ಆರೋಗ್ಯಕ್ಕೆ ಸಹಕಾರಿ

ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಉದ್ಘಾಟಿಸಿದ ಶಾಸಕ ಹೆಚ್.ಟಿ.ಮಂಜು



ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜ.4– ಕ್ರೀಡೆಗಳು ಮಾನವನ ದೈಹಿಕ, ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗಿದ್ದು, ಯಾರು ತಮ್ಮನ್ನು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರು ಹೆಚ್ಚು ಆರೋಗ್ಯವಂತರಾಗಿ ಹಾಗೂ ದೀರ್ಘಾಯುಷಿಗಳಾಗುತ್ತಾರೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ಶಂಕರ್ ಸ್ಪೋರ್ಟ್ಸ್ ಅಕಾಡೆಮಿ ಒಳಾಂಗಣ ಕ್ರೀಡಾಂಗಣದಲ್ಲಿ ಕಿಕ್ಕೇರಮ್ಮ ರೂರಲ್ ಸ್ಪೋರ್ಟ್ಸ್ ಕ್ಲಬ್ ಮತ್ತು ಕಿಕ್ಕೇರಿ ಸುರೇಶ್ ಪ್ರೀಮಿಯರ್ ಲೀಗ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 2 ದಿನಗಳ ತಾಲೂಕು ಮಟ್ಟದ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳು ಮನುಷ್ಯನ ಒತ್ತಡ ನಿವಾರಿಸುವ ಜೊತೆಗೆ ಆತ್ಮವಿಶ್ವಾಸ ಹೆಚ್ಚಿಸಿ ಆರೋಗ್ಯಕರ ಜೀವನ ಶೈಲಿಗೆ ಅಡಿಪಾಯ ಹಾಕುತ್ತವೆ. ಅಲ್ಲದೇ ದೈಹಿಕವಾಗಿ ಸಕ್ರಿಯವಾಗಿಸಿ ಸ್ಥೂಲಕಾಯತೆ ಹಾಗೂ ಇತರ ಆರೋಗ್ಯ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ಯುವಕರು ತಮ್ಮ ಇಷ್ಟದ ಯಾವುದಾದರೊಂದು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಕ್ರೀಡೆಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಯುವಕರಿಗೆ ಸಲಹೆ ನೀಡಿದರು. ಇದೇ ವೇಳೆ ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಎಲ್ಲಾ 8 ತಂಡಗಳ ಆಟಗಾರರನ್ನು ಪರಿಚಯಿಸಿಕೊಂಡ ಶಾಸಕರು ಷಟಲ್ ಬ್ಯಾಟ್ ಹಿಡಿದು ಯಶಸ್ವಿಯಾಗಿ ಆಟ ಆಡುವ ಮೂಲಕ ಕ್ರೀಡಾಪಟುಗಳ ಗಮನ ಸೆಳೆದರು. ಅಲ್ಲದೇ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಪ್ರಥಮ 40 ಸಾವಿರ, ದ್ವಿತೀಯ 30, ತೃತೀಯ 20, 4ನೇ ಬಹುಮಾನ 10 ಸಾವಿರ ನಗದು ಬಹುಮಾನದೊಂದಿಗೆ ಪಾರಿತೋಷಕ ನೀಡುತ್ತಿರುವುದು ಶ್ಲಾಘನೀಯ ಎಂದರು.

ಈ ವೇಳೆ ಶಂಕರ್ ಸ್ಪೋರ್ಟ್ಸ್ ಅಕಾಡೆಮಿ ಅಧ್ಯಕ್ಷ ಕೆ.ಟಿ.ಶಂಕರ್, ಕಾರ್ಯದರ್ಶಿ ದೀಪಶ್ರೀ, ಕೆಪಿಎಸ್ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಮಧು, ಕಿಕ್ಕೇರಿ ಪಿಎಸಿಎಸ್ ಮಾಜಿ ಅಧ್ಯಕ್ಷ ಶೇಖರ್, ಉದ್ಯಮಿ ವಿಶ್ವನಾಥ್, ಪುರಸಭಾ ಮಾಜಿ ಸದಸ್ಯ ನಂದೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಆರ್.ಪೂರ್ಣಚಂದ್ರತೇಜಸ್ವಿ, ಮುಖ್ಯ ಶಿಕ್ಷಕ ಮಂಜುನಾಥ್ ಸೇರಿದಂತೆ ಇತರರಿದ್ದರು.

ರಕ್ತದಾನದಿಂದ ಬಿಪಿ, ಶುಗರ್ ನಿಯಂತ್ರಣ

ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ



ರಕ್ತದಾನ ಶಿಬಿರ, ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಗೆ ಬಿಜೆಪಿ ಮುಖಂಡ ಸಚ್ಚಿದಾನಂದ ಚಾಲನೆ ನೀಡಿದರು.

ಮಂಡ್ಯ, ಜ.4– ರಕ್ತದಾನದ ಬಗ್ಗೆ ಜನ ಸಾಮಾನ್ಯರಲ್ಲಿ ತಪ್ಪು ಕಲ್ಪನೆಗಳಿದ್ದು, ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ರಕ್ತದಾನದಿಂದ ರಕ್ತದೊತ್ತಡ, ಮಧುಮೇಹದಂತಹ ರೋಗಗಳು ನಿಯಂತ್ರಣಕ್ಕೆ ಬರುತ್ತದೆ ಎಂಬುದನ್ನು ದಾನಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಸಲಹೆ ನೀಡಿದರು.

ಸ್ನೇಹಮಯಿ ಸೇವಾ ಟ್ರಸ್ಟ್ ವತಿಯಿಂದ ತಾಲೂಕಿನ ಕೊತ್ತತ್ತಿ ಗ್ರಾಮದ ಪ್ರಾಥಮಿಕ ಶಾಲಾ ವರಣದಲ್ಲಿ ನಡೆದ ರಕ್ತದಾನ ಶಿಬಿರ ಮತ್ತು ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ದೇಶದಲ್ಲಿ ಪ್ರತಿ ವರ್ಷ 41 ದಶಲಕ್ಷ ಯುನಿಟ್ ರಕ್ತದ ಕೊರತೆ ಇದ್ದು, ಇದನ್ನು ದಾನಿಗಳ ಮೂಲಕವೇ ಪಡೆದುಕೊಳ್ಳುವ ಅನಿವಾರ್ಯತೆ ಎದುರಾಗಿದೆ ಎಂದರು.

ಸಮಯಕ್ಕೆ ಸರಿಯಾಗಿ ರಕ್ತ ಸಿಗದೆ ಎಷ್ಟೋ ಮಂದಿ ರೋಗಿಗಳು ಸಾವನ್ನಪ್ಪುತ್ತಿದ್ದಾರೆ. ಅಪಘಾತದ ಗಾಯಾಳುಗಳು ಮೃತರಾಗುತ್ತಿದ್ದಾರೆ. ಅತ್ಯಮೂಲ್ಯವಾದ ಜೀವಗಳನ್ನು ಉಳಿಸಲು ರಕ್ತದಾನ ಅಗತ್ಯವಾಗಿದ್ದು, ಸ್ವಯಂಪ್ರೇರಿತವಾಗಿ ರಕ್ತದಾನ ಮಾಡುವಂತೆ ಸಲಹೆ ನೀಡಿದರು. ಒಬ್ಬ ರಕ್ತದಾನಿ ನೀಡುವ ರಕ್ತದಿಂದ 3 ಮಂದಿ ಪ್ರಾಣ ಉಳಿಸಬಹುದಾಗಿದೆ. ರಕ್ತವನ್ನು ಪರ್ಯಾಯವಾಗಿ ಉತ್ಪಾದಿಸಲು ಸಾಧ್ಯವಿಲ್ಲ ಮನುಷ್ಯ ದಾನ ಮಾಡಿದರಷ್ಟೇ ರಕ್ತದ ಉತ್ಪಾದನೆ ಮಾಡಲು ಸಾಧ್ಯವಾಗುತ್ತದೆ ಎಂದರು.

> ಯುವಜನತೆ ಕ್ರೀಡೆಗಳಲ್ಲಿ ಭಾಗವಹಿಸುವುದು ಅತ್ಯಾವಶ್ಯಕ. ಗ್ರಾಮೀಣ ಕ್ರೀಡೆಗಳಲ್ಲಿ ತೊಡಗಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ವಾಲಿಬಾಲ್ ಪಂದ್ಯಾವಳಿಯೂ ಸಹಕಾರಿಯಾಗಿದೆ. ಜೊತೆಗೆ ಕ್ರೀಡೆಯನ್ನು ಕ್ರೀಡಾ ಮನೋಭಾವದಿಂದಲೇ ನೋಡುವಂತಹ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಯಾವುದೇ ಗೊಂದಲಕ್ಕೆ ಕಾರಣವಾಗದೆ ಪಂದ್ಯಾವಳಿ ಅತ್ಯಂತ ಯಶಸ್ವಿಯಾಗಲಿ. - ಸಚ್ಚಿದಾನಂದ, ಬಿಜೆಪಿ ಮುಖಂಡ.

18 ರಿಂದ 60 ವರ್ಷ ವಯೋಮಾನದವರು ರಕ್ತದಾನ ಮಾಡಬಹುದಾಗಿದೆ. ಮಧುಮೇಹ ರೋಗವಿದ್ದು, ನಿತ್ಯ ಮಾತ್ರೆಗಳನ್ನು ತೆಗೆದುಕೊಂಡು ಆರೋಗ್ಯ ಸದೃಢವಾಗಿಟ್ಟುಕೊಂಡಿರುವವರೂ ಸಹ ರಕ್ತದಾನ ಮಾಡಬಹುದು ಎಂದರು.

ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲೇ ರೋಗಿಗಳಿಗೆ ರಕ್ತದ ಕೊರತೆ ಎದುರಾಗುತ್ತಿದ್ದು, ಇದನ್ನು ಕಂಡು ಇಲ್ಲಿನ ಯುವಕರು ರಕ್ತದಾನದ ಮೂಲಕ ಮಾನವೀಯತೆ ಮೆರೆಯುತ್ತಿರುವುದನ್ನು ಶ್ಲಾಘಿಸಿದರು.

ಗ್ರಾಮದ ಮುಖಂಡರಾದ ಕುಮಾರ್, ಯೋಗೇಶ್, ನಾಗರಾಜು, ಮಹೇಶ್, ಜವರೇಗೌಡ, ಕುಳ್ಳಪ್ಪ, ವೆಂಕಟೇಶ್, ಮೋಹನ್, ಮಹೇಶ್, ಸಚಿನ್, ರಕ್ಷಿತ್, ಕಾರ್ತಿಕ್, ಅಕ್ಷಯ್, ಮನೋಜ್ ಸೇರಿದಂತೆ ಹಲವರಿದ್ದರು.

ಇಂದಿನಿಂದ ಚೆಲುವನ ವೈಭವದ ಅಧ್ಯಯನೋತ್ಸವ

ಮೇಲುಕೋಟೆ, ಜ.4– ಇಲ್ಲಿನ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಜ.5ರಿಂದ 10 ದಿನಗಳ ಕಾಲ ಕೊಠಾರೋತ್ಸವ ಎಂದೇ ಕರೆಯುವ ಅಧ್ಯಯನೋತ್ಸವ ವೈಭವದಿಂದ ನೆರವೇರಲಿದೆ.



ವೈಷ್ಣವ ಪಂಥದಲ್ಲಿ ನಾರಾಯಣನ ಸಾಕ್ಷಾತ್ಕಾರ ಪಡೆದು ದೈವತ್ವಕ್ಕೇರಿದ 12 ಮಂದಿ ಆಳ್ವಾರುಗಳಿಗೆ ಧನುರ್ಮಾಸದ ವೇಳೆ ವಿಶೇಷ ಮಾಲೆ ಮರ್ಯಾದೆ ಸಮರ್ಪಿಸುವ ಹಾಗೂ ಅವರನ್ನು ನೆನೆಯುವ ಮಹೋತ್ಸವವಾಗಿದ್ದು, ಕೊಠಾರ ಮಂಟಪದಲ್ಲಿ ಪ್ರತಿಸಂಜೆ ಆಳ್ವಾರುಗಳು ಮತ್ತು ರಾಮಾನುಜಾಚಾರ್ಯರಿಗೆ ಮಾಲೆ ಮರ್ಯಾದೆ ನಡೆಯಲಿದೆ. ಸಂಗೀತ ರಾಮಾಯಣ, ಅರೆಯರ್ ಪಾಟ್ಟು ಹಾಗೂ ದಿವ್ಯ ಪ್ರಬಂಧ ಪಾರಾಯಣದೊಂದಿಗೆ ಚೆಲುವನಾರಾಯಣನಿಗೆ ಉತ್ಸವಗಳು ನಡೆಯಲಿದೆ.

ಜ.5 ರಿಂದ 14 ರವರೆಗೆ ಪ್ರತಿದಿನ ಸಂಜೆ ರಾಜ ಬೀದಿಯಲ್ಲಿ ವಿವಿಧ ಕೈಂಕರ್ಯಪರರಿಂದ ಅನೂಚಾನ ಸಂಪ್ರದಾಯ ಹಾಗೂ ದೇವಾಲಯದ ಕೈಪಿಡಿಯಲ್ಲಿ ಉಲ್ಲೇಖವಾದಂತೆ ನೇಮಿ ಸೇವೆಯಾಗಿ ಚೆಲುವನಾರಾಯಣಸ್ವಾಮಿಗೆ ಪುಷ್ಪ ಕೈಂಕರ್ಯ ನಂತರ ದೇವಾಲಯದಲ್ಲಿ ಸೇವೆಗಳು ನಡೆಯಲಿದೆ. ಪ್ರತಿದಿನ ಚೆಲುವನಾರಾಯಣಸ್ವಾಮಿ ವೈವಿಧ್ಯಮಯ ಪುಷ್ಪಾಲಂಕಾರದೊಂದಿಗೆ ಕಂಗೊಳಿಸಲಿದ್ದು, ಮೇಲುಕೋಟೆಯ ಪಾರಂಪರಿಕ ನೈವೇದ್ಯಗಳು ಸ್ವಾಮಿಗೆ ಅರ್ಪಣೆಯಾಗುವುದು ಕೊಠಾರೋತ್ಸವದ ವಿಶೇಷವಾಗಿದೆ. ಚೆಲುವನಾರಾಯಣಸ್ವಾಮಿ ಕೊಠಾರೋತ್ಸವವನ್ನು ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶೀಲಾರ ಮಾರ್ಗದರ್ಶನದಲ್ಲಿ ವ್ಯವಸ್ಥಿತವಾಗಿ ನಡೆಸಲಾಗುತ್ತದೆ ಎಂದು ಪಾರುಪತ್ತೇಗಾರ್ ಹಾಗೂ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ತಿಳಿಸಿದ್ದಾರೆ.

ಭಕ್ತರು ಪ್ರತಿ ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕೊಠಾರೋತ್ಸವದಲ್ಲಿ ಚೆಲುವನಾರಾಯಣಸ್ವಾಮಿ ಹಾಗೂ 12 ಆಳ್ವಾರುಗಳನ್ನು ಒಟ್ಟಾಗಿ ದರ್ಶನ ಮಾಡಬಹುದು. ವರ್ಷದಲ್ಲಿ 10 ದಿನಗಳ ಕಾಲ ಮಾತ್ರ ಈ ಅವಕಾಶವಿರುತ್ತದೆ. ವಿಷ್ಣುದೀಪ ನಂತರ ದೇವಾಲಯದಲ್ಲಿ ಯಾವುದೇ ಉತ್ಸವ ಮತ್ತು ಅಭಿಷೇಕ ಇರಲಿಲ್ಲ. ಜ.5ರಂದು ನಡೆಯುವ ಪ್ರಥಮ ಉತ್ಸವದೊಂದಿಗೆ ಉತ್ಸವಾದಿಗಳು ಆರಂಭವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ವೀರೇಂದ್ರ ಹೆಗಡೆಯವರ ಸಾಮಾಜಿಕ ಕಾರ್ಯಗಳು ಪ್ರಶಂಸನೀಯ



ಕಾರ್ಯಕ್ರಮವನ್ನು ಶ್ರೀಸಿದ್ಧರಾಮಚೈತನ್ಯ ಸ್ವಾಮೀಜಿ ಉದ್ಘಾಟಿಸಿದರು.

ಮದ್ದೂರು, ಜ.4– ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು ಕೈಗೊಂಡಿರುವ ಸಮಾಜಮುಖಿ ಕಾರ್ಯಗಳು ಪ್ರಶಂಸನೀಯ ಎಂದು ಕುಣಿಗಲ್ ಅರೆಶಂಕರ ಮಠದ ಶ್ರೀಸಿದ್ಧರಾಮಚೈತನ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನ ಚಾಮನಹಳ್ಳಿಯ ಅಂಬಿ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಶ್ರೀಶನೇಶ್ವರಸ್ವಾಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಹುಟ್ಟು ಹಾಕಿದ ಶ್ರೀಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆ ಸರ್ಕಾರ ಮಾಡದ ಕೆಲಸವನ್ನು ಮಾಡುತ್ತಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

84 ಕೋಟಿ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಪುಣ್ಯದ ಜನ್ಮ. ಮಾನವ ಜನ್ಮದಲ್ಲಿ ಉತ್ತಮ ನಡೆ–ನುಡಿ, ಸರಳತೆ ಅಳವಡಿಸಿಕೊಂಡು ಮಾದರಿಯಾಗಿ ಬದುಕಬೇಕು. ತಾಯಿಯೇ ಮೊದಲ ಗುರು ಎಂಬಂತೆ ಮಕ್ಕಳನ್ನು ಒಳ್ಳೆಯ ದಾರಿಯಲ್ಲಿ ಬೆಳೆಸುವಲ್ಲಿ ತಾಯಿಯಾದವರು ಶಿಕ್ಷಕರಂತೆ ಮಕ್ಕಳಿಗೆ ಸಲಹೆ ನೀಡಬೇಕೆಂದರು. ನಿವೃತ್ತ ಪ್ರಾಂಶುಪಾಲ ಸಿ.ಆರ್.ರಾಜು ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆಯು ಮಹಿಳಾ ಸಬಲೀಕರಣ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಮುಂದಿನ ಜನಾಂಗದ ಉತ್ತಮ ಪ್ರಜೆಗಳಿಗಾಗಿ ಸಂಸ್ಕೃತಿ– ಸಂಸ್ಕಾರ ಹಾಗೂ ಧಾರ್ಮಿಕ ನಂಬಿಕೆಗಳ ಬಗ್ಗೆ ಅಪಾರ ಗೌರವ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದಲ್ಲಿ ಹಮ್ಮಿಕೊಂಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆ ವತಿಯಿಂದ ಆರೋಗ್ಯ ರಕ್ಷಾ ಮೊತ್ತ 16 ಸಾವಿರ ಮತ್ತು ಪ್ರಗತಿ ರಕ್ಷಾ ಕವಚ 70 ಸಾವಿರ ರೂ.ಗಳ ಮಂಜೂರಾತಿ ಪತ್ರಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು.

ಪೂಜಾ ಸಮಿತಿ ಅಧ್ಯಕ್ಷ ಕೃಷ್ಣ, ಗ್ರಾಪಂ ಅಧ್ಯಕ್ಷ ಸಿ.ಕೆ.ಸತೀಶ್, ತಾಲೂಕಿನ ಯೋಜನಾಧಿಕಾರಿ ಎಂ.ಎ.ಹಾಲಪ್ಪ, ಮುಖ್ಯ ಅತಿಥಿಗಳಾಗಿ ಮುನಿಯಪ್ಪ, ಶ್ರೀನಿವಾಸ, ಜಯರತ್ನ, ಸವಿತಾ, ಪ್ರತಿಭಾ, ಸಾಮೂಹಿಕ ಶ್ರೀಶನೇಶ್ವರ ಸ್ವಾಮಿ ಪೂಜಾ ಸಮಿತಿ ಉಪಾಧ್ಯಕ್ಷರು ಮತ್ತು ಸದಸ್ಯರು, ಯೋಜನೆ ಕಾರ್ಯಕರ್ತ ಸಿಬ್ಬಂದಿ, ಸೇವಾ ಪ್ರತಿನಿಧಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

ಎಂಆರ್‌ಪಿ ದರದಲ್ಲಿ ಮದ್ಯ ನೀಡದ್ದಕ್ಕೆ ಆಕ್ರೋಶ

ಪುಂಡರಿಂದ ಬಾರ್‌ಗೆ ಬೆಂಕಿ ಹಚ್ಚಿ ದಂಧಾಲೆ

ಕೆ.ಆರ್.ಪೇಟೆ, ಜ.4– ಎಂಆರ್‌ಪಿ ದರದಲ್ಲಿ ಮದ್ಯ ನೀಡದ್ದಕ್ಕೆ ಆಕ್ರೋಶಗೊಂಡ ಪುಂಡರ ಗುಂಪು ಬಾರ್‌ಗೆ ಪೆಟ್ರೋಲ್ ಸುರಿದು ಬೆಂಕಿ ಇಟ್ಟು ದಾಂಧಲೆ ನಡೆಸಿರುವ ಘಟನೆ ತಾಲೂಕಿನ ಮುರುಕನಹಳ್ಳಿ ತೋಟಗಾರಿಕೆ ಫಾರಂ ಬಳಿಯ ಈಗಲ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ನಡೆದಿದೆ.



ಅಗಸರಹಳ್ಳಿಯ ಪರಮೇಶ್ ಅವರಿಗೆ ಸೇರಿದ ಈಗಲ್ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಮದ್ಯ ಸೇವನೆಗೆ ಆಗಮಿಸಿದ ಮುರುಕನಹಳ್ಳಿ ಗ್ರಾಮದ ರಕ್ಷಿತ್ ಹಾಗೂ ಆತನ ಸ್ನೇಹಿತರಿಬ್ಬರು ಎಂಆರ್‌ಪಿ ಬೆಲೆಗೆ ಮದ್ಯದ ಬಾಟಲ್‌ಗಳನ್ನು ನೀಡಬೇಕು ಎಂದು ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಪುಂಡರ ಬೇಡಿಕೆಗೆ ಬಾರ್ ಮಾಲೀಕರು ನಿರಾಕರಿಸಿ, ಮದ್ಯ ಕೊಡದಿದ್ದಕ್ಕೆ ಆಕ್ರೋಶಗೊಂಡ ಯುವಕರು ಬಾರ್ ಹಾಗೂ ಮತ್ತು ಮಾಲೀಕನಿಗೆ ಸೇರಿದ ಕಾರ್‌ಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ದಾಂಧಲೆ ನಡೆಸಿರುವ ದೃಶ್ಯ ಸಿಸಿ ಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಮೂರನೇ ಪುಟದಿಂದ

ಜೈನ ದೀಕ್ಷೆ ; ಹೃದಯಸ್ಪರ್ಶಿ ಶುಭ ಹಾರೈಕೆ



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಕಾಣಬಹುದು.

ಶ್ರವಣ ಬೆಳಗೊಳದಲ್ಲಿ ಮಸ್ತಕಾಭಿಷೇಕ ನೆರವೇರಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರ್ ಅವರು ಶ್ರವಣಬೆಳಗೊಳಕ್ಕೆ ಎದುರಾಗಿದ್ದ ಸಂಕಷ್ಟವೊಂದನ್ನು ಪರಿಹರಿಸಿದರು. 13 ಗ್ರಾಮಗಳ ಆದಾಯವನ್ನು ಶ್ರವಣ ಬೆಳಗೊಳದ ನಿರ್ವಹಣೆಗೆ ನೀಡಿದ್ದರು ಎಂದು ತಿಳಿಸಿದರು. ಕರ್ನಾಟಕಕ್ಕೆ ಜೈನ ಸಮುದಾಯದ ಕೊಡುಗೆ ಅಪಾರವಾಗಿದೆ. ಧರ್ಮ ರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ದಿಯಾ ಕುಮಾರಿ ಹಾಗೂ ಕುನಾಲ್ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ ಎಂದು ಯದುವೀರ್ ಹೇಳಿದರು.

ಮಾಜಿ ಡಿಸಿಎಂ ಪ್ರಶಂಸೆ: ಈ ವೇಳೆ ಶುಭ ಹಾರೈಸಿ ಮಾತನಾಡಿದ ಮಾಜಿ ಉಪ ಮುಖ್ಯಮಂತ್ರಿಗಳೂ ಆದ ಶಾಸಕ ಡಾ.ಅಶ್ವಥ್ ನಾರಾಯಣ್ ಅವರು, ಪುಣ್ಯ ಹಾಗೂ ಮಂಗಳಕರವಾದ ಈ ಕಾರ್ಯಕ್ರಮ ಮೈಸೂರಿನಲ್ಲಿ ನಡೆಯುತ್ತಿದೆ. ದಿಯಾ ಕುಮಾರಿ ಹಾಗೂ ಕುನಾಲ್ ಅವರು ಲೌಕಿಕ ಬದುಕು ತ್ಯಜಿಸಿ, ಜೈನ ದೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಇವರಿಬ್ಬರ ಈ ನಿರ್ಧಾರ ಮಹತ್ವದ್ದಾಗಿದೆ ಎಂದರು.

ಮೈಸೂರು ಮಹಾರಾಜರು ಒಳ್ಳೆಯ ಆಡಳಿತ ನೀಡಿದ್ದು, ನ್ಯಾಯ, ನೀತಿ, ಧರ್ಮವನ್ನು ಎತ್ತಿ ಹಿಡಿದಿದ್ದಾರೆ. ಎಲ್ಲಾ ಧರ್ಮದ ಆಚರಣೆಗೆ ಮುಕ್ತ ಅವಕಾಶ ನೀಡಿದ್ದಾರೆ. ಇಂತಹ ಪುಣ್ಯ ಭೂಮಿಯಲ್ಲಿ ಮಹತ್ವದ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಅಭಿಪ್ರಾಯಪಟ್ಟರು. ಸಿಹಿ ತಿನ್ನುವುದನ್ನು ಬಿಡಬೇಕು, ಆಹಾರ ಪಥ್ಯದಲ್ಲಿರಬೇಕು ಎಂದು ವೈದ್ಯರು ಎಷ್ಟೇ ಹೇಳಿದರೂ ನಾವು ಅವರ ಮಾತು ಕೇಳುವುದಿಲ್ಲ. ಸುಖಃ ಸಂಪತ್ತು, ಅನುಕೂಲಗಳನ್ನು ಬಿಟ್ಟು ಬದುಕುವುದಿಲ್ಲ. ನ್ಯಾಯವಾದರೂ ಸರಿ, ಅನ್ಯಾಯವಾದರೂ ಸರಿ ಆಸ್ತಿ–ಪಾಸ್ತಿ ಸಂಪಾದನೆ ಮಾಡಲು ಹಾತೊರೆಯುತ್ತೇವೆ. ಇಂತಹ ಸಂದರ್ಭದಲ್ಲಿ ಈ ಇಬ್ಬರು ಜೈನ ದೀಕ್ಷೆ ಪಡೆಯುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಂದೆ– ತಾಯಿ ಬಿಟ್ಟು ಬದುಕಲು ಸಾಧ್ಯವಿಲ್ಲ ಎನ್ನುವ ವಯಸ್ಸಿನಲ್ಲಿ ಕುಟುಂಬ ತೊರೆದು ಈ ಇಬ್ಬರು ಜೈನ ದೀಕ್ಷೆ ಪಡೆಯುತ್ತಿದ್ದಾರೆ. ಅಲ್ಲದೆ ಜೈನ ಧರ್ಮದ ಕಠಿಣ ನಿಯಮ ಪರಿಪಾಲನೆ ಮಾಡಲು ಮುಂದಾಗಿದ್ದಾರೆ. ದಿಯಾ ಕುಮಾರಿ ಹಾಗೂ ಕುನಾಲ್ ಅವರಿಗೆ ಶುಭ ಹಾರೈಸುತ್ತೇನೆ ಎಂದರು.

ಆತಿಥ್ಯ ಸ್ವೀಕಾರ: ಇಂದು ಸಂಜೆ ಜಯನಂದ ನಗರಿ ಮಂಟಪದಲ್ಲಿ ವಿದಾಯ ಸಮಾರೋಪ ನಡೆಯಲಿದೆ. ನಾಳೆಯಿಂದ ದಿಯಾ ಕುಮಾರಿ ಹಾಗೂ ಕುನಾಲ್ ಅವರು ಸಂಬಂಧಿಕರು ಹಾಗೂ ಸ್ನೇಹಿತರ ಮನೆಗಳಿಗೆ ಭೇಟಿ ನೀಡಿ ಆತಿಥ್ಯ ಸ್ವೀಕರಿಸಲಿದ್ದಾರೆ. ಫೆಬ್ರವರಿ 22 ರಂದು ದೀಕ್ಷೆ ಪಡೆಯಲಿದ್ದಾರೆ.


ಇಂದಿನ ಕಾರ್ಯಕ್ರಮದಲ್ಲಿ ಗುಂಡ್ಲುಪೇಟೆ ಶಾಸಕ ಗಣೇಶ್‌ಪ್ರಸಾದ್, ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್, ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಐಪಿಎಸ್ ಅಧಿಕಾರಿ ಗೀತಾ ಪ್ರಸನ್ನ, ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ, ಕೆಪಿಎ ನಿರ್ದೇಶಕ ವಿಷ್ಣುವರ್ಧನ್, ಮಾಜಿ ಶಾಸಕರಾದ ಎಲ್. ನಾಗೇಂದ್ರ ಎಂ.ಕೆ.ಸೋಮಶೇಖರ್, ತೋಂಟದಾರ್ಯ, ಮಾಜಿ ಕಾರ್ಪೊರೇಟರ್ ಪ್ರಶಾಂತ್‌ಗೌಡ, ಬಿಜೆಪಿ ಮುಖಂಡರಾದ ಕಿರಣ್‌ಗೌಡ, ಪ್ರದೀಪ್ ಕುಮಾರ್ ಇತರರಿದ್ದರು.

ಜಂಬೂ ಸವಾರಿ ಮಾದರಿ ವರ್ಣರಂಜಿತ ವರ್ಷಿದಾನ ಮೆರವಣಿಗೆ

ಮುಕ್ತಿ ಜಯೋತ್ಸವಕ್ಕೂ ಮುನ್ನ ಮೈಸೂರಿನಲ್ಲಿ ಅದ್ದೂರಿಯ ವರ್ಷಿದಾನ ಮೆರವಣಿಗೆ ನಡೆಯಿತು. ಸಾಂಸ್ಕೃತಿಕ ಕಲಾ ತಂಡಗಳು, ಸ್ತಬ್ಧಚಿತ್ರ, ಸಾರೋಟುಗಳ ಒಳಗೊಂಡ ವರ್ಷಿದಾನ ಮೆರವಣಿಗೆ ಜಂಬೂ ಸವಾರಿ ಮೆರವಣಿಗೆಯನ್ನು ಕಣ್ಣಿಗೆ ಕಟ್ಟಿತು.

ಮೈಸೂರಿನ ಹಳ್ಳದಕೇರಿಯ ಶ್ರೀ ಸುಮತಿನಾಥ್ ಜೈನ ದೇವಾಲಯದಲ್ಲಿ ಇಂದು ಬೆಳಗ್ಗೆ 9 ಗಂಟೆಗೆ ವರ್ಷಿದಾನ ಮೆರವಣಿಗೆ ಆರಂಭವಾಯಿತು. ನಾಡದೇವತೆ ತಾಯಿ ಚಾಮುಂಡೇಶ್ವರಿ ಭಾವಚಿತ್ರವಿರುವ ವಾಹನ ಮುಂಚೂಣಿಯಲ್ಲಿತ್ತು. ಯಕ್ಷಗಾನ, ಡೊಳ್ಳು ಕುಣಿತ, ಚಿಣ್ಣರ ಕುದುರೆ ಸವಾರಿ, ರಾಜಸ್ಥಾನದ ಮೋಹನ್ ರಾಮ ಮಂದಿರದ ಸ್ತಬ್ಧಚಿತ್ರ, ಜೈನ ದೇವಾಲಯದ ಸ್ತಬ್ಧಚಿತ್ರ, ಮಹಾವೀರರ ಪ್ರತಿಮೆಯ ಸ್ತಬ್ಧಚಿತ್ರ, ಜೈನ ದೇವಾಲಯಗಳ ಸಾಂಪ್ರದಾಯಿಕ ಕಳಸ ಹಾಗೂ ಚಿಹ್ನೆ, ಸಾರೋಟಿನಲ್ಲಿ ವಿಮಲ್ ಸಾಗರ್ ಗುರೂಜಿ ಹಾಗೂ ಮುಕ್ತಿ ವಿಜಯ ಗುರೂಜಿ ಅವರ ಭಾವಚಿತ್ರವಿರುವ ಮೆರವಣಿಗೆ ಅತ್ಯಾಕರ್ಷಕವಾಗಿತ್ತು.

ಭಕ್ತಿ ಸಂಗೀತಕ್ಕೆ ಜೈನ ಸಮುದಾಯದವರು ಕುಣಿದು ಕುಪ್ಪಳಿಸಿದರು, ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಜೈನ ಬಂಧುಗಳು ಸಾಂಪ್ರದಾಯಿಕ ಉಡುಗೆ–ತೊಡುಗೆ ತೊಟ್ಟು ಮೆರವಣಿಗೆಗೆ ಮೆರಗು ನೀಡಿದರು. ಮಹಿಳಾ ಹಾಗೂ ಪುರುಷ ಸನ್ಯಾಸಿಗಳು ಕೂಡ ಮೆರವಣಿಗೆಯಲ್ಲಿ ಸಾಗಿದರು.



ಕಾಡಾಗಿಸುವುದು ಬೇಡ...

ಈ ಹಿಂದೆ ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆ ಮಾಡುವ ಪ್ರಸ್ತಾಪ ಬಂದಾಗ ಅಲ್ಲಿನ ಜನ ಒಗ್ಗಟ್ಟಾಗಿ ಹೋರಾಟ ಮಾಡಿದರು. ಹಸಿರು ಪರಿಸರದ ಕಪ್ಪತ್ತಗುಡ್ಡ 80 ಸಾವಿರ ಎಕರೆ ವಿಸ್ತೀರ್ಣವಿದ್ದು, ಉತ್ತರ ಕರ್ನಾಟಕದ 15 ಜಿಲ್ಲೆಗಳಿಗೆ ಮಾತೃ ಸ್ವರೂಪದಲ್ಲಿದೆ. ಎಪ್ಪತ್ತು ಗಿರಿ ನೋಡುವುದಕ್ಕಿಂತ ಕಪ್ಪತ್ತಗಿರಿ ನೋಡಬೇಕು ಎಂಬ ಮಾತಿದೆ. ಇಲ್ಲಿ ಎಲ್ಲಾ ರೀತಿಯ ಔಷಧೀಯ ಸಸ್ಯ, ಪ್ರಾಣಿ–ಪಕ್ಷಿಗಳಿವೆ. ಅದೇ ಮಾದರಿಯಲ್ಲಿ ಚಾಮುಂಡಿ ಬೆಟ್ಟವೂ ಜೀವ ವೈವಿಧ್ಯತೆಗೆ ಹೆಸರಾಗಿದೆ. ಸಂರಕ್ಷಿತ ಅರಣ್ಯ ಪ್ರದೇಶವೂ ಆಗಿದೆ. ಚಾಮುಂಡಿ ಬೆಟ್ಟ ಸ್ವಚ್ಛ, ಸುಂದರವಾಗಿರುವುದನ್ನು ಜನ ಬಯಸುತ್ತಾರೆ. ನಿಜವಾದ ಭಕ್ತರಾಗಬೇಕು. ನಾವು ಬೆಟ್ಟದ ಸುತ್ತಲೂ ಹೊಲಸು ಮಾಡಬಾರದು. ಹೊಲಸೇ ನರಕ, ಸ್ವಚ್ಛತೆ ಸ್ವರ್ಗ ಎಂದರು.

ಕರ್ನಾಟಕದ ಎಲ್ಲಾ ಸ್ವಾಮೀಜಿಗಳು ಮಾತ್ರವಲ್ಲ, ಇಡೀ ಜಗತ್ತು ಚಾಮುಂಡಿಬೆಟ್ಟದತ್ತ ನೋಡುತ್ತಿದೆ. ವಿದೇಶಿಗರು ಹೆಚ್ಚಾಗಿ ಬೆಟ್ಟಕ್ಕೆ ಬರುತ್ತಿದ್ದಾರೆ. ಚಾಮುಂಡಿ ಬೆಟ್ಟ ಮೈಸೂರಲ್ಲಿದ್ದರೂ, ಅದು ಕರ್ನಾಟಕದ ಆಸ್ತಿ. ಬೆಟ್ಟದ ಸಂರಕ್ಷಣೆಯ ಹೊಣೆ ರಾಜ್ಯದ 7 ಕೋಟಿ ಜನರದ್ದಾಗಿದೆ. ಆ ಕಾರಣದಿಂದ ಬೆಟ್ಟವನ್ನು ಕಾಂಕ್ರೀಟ್ ಕಾಡಾಗಿಸುವುದು ಬೇಡ, ಹುಸಿ ಅಭಿವೃದ್ಧಿ ನಮಗೆ ಬೇಡ. ಇದರಿಂದ ಮೈಸೂರಿನ ನಾಗರಿಕರು ಸಂಘಟಿತರಾಗಿ ಬೆಟ್ಟದ ಉಳಿವಿಗಾಗಿ ಹೋರಾಟ ಮಾಡಿ, ಇಲ್ಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಮುಂದಾಗಬೇಕು. ಜನರಲ್ಲಿ ಜಾಗೃತಿ ಮೂಡಿಸಬೇಕು. ಬೆಟ್ಟದಲ್ಲಿ ಪ್ಲಾಸ್ಟಿಕ್, ಮಾಲಿನ್ಯ, ತ್ಯಾಜ್ಯ ಬೇಡ ಎಂದು ಪಣ ತೊಡಬೇಕು ಎಂದು ಸಲಹೆ ನೀಡಿದರು.

ಹರಿಶಿನ–ಕುಂಕುಮ ಹಚ್ಚಬೇಡಿ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಚಾಮುಂಡಿಬೆಟ್ಟವಿದ್ದು, ಮೈಸೂರಿಗರಿಗೆ ಸುಂದರ ಪರಿಸರ ಆಸ್ವಾದಿಸುವ ಅವಕಾಶ ಒದಗಿಸಿದೆ. ಚಾಮುಂಡಿಬೆಟ್ಟದ ಪರಿಸರ ಸಂರಕ್ಷಣೆ ಮಾಡಬೇಕಾದ ಜವಾಬ್ದಾರಿ ನಮ್ಮೆಲ್ಲರ ದ್ದಾಗಿದೆ. ಬೆಟ್ಟದ ಮೆಟ್ಟಿಲುಗಳಿಗೆ ಹರಿಶಿನ–ಕುಂಕುಮ ಹಚ್ಚುವುದರಿಂದ ಅದರಲ್ಲಿರುವ ರಾಸಾಯನಿಕ ಅಂಶ ಬೆಟ್ಟದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಪರಿಸರವಾದಿಗಳು ಈಗಾಗಲೇ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ರಾಸಾಯನಿಕದಿಂದ ತಯಾರಿಸಿ ರುವ ಹರಿಶಿನ–ಕುಂಕುಮವನ್ನು ಮೆಟ್ಟಿಲುಗಳಿಗೆ ಹಚ್ಚಬಾರದು. ಪ್ಲಾಸ್ಟಿಕ್ ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ನಡಿಗೆಯಲ್ಲಿ ನೀಡಸೋಗೆ ಮಠದ ಶ್ರೀ ನಿಜಗುಣ ಸ್ವಾಮೀಜಿ, ಶ್ರೀ ಜಯದೇವ ಸ್ವಾಮೀಜಿ, ತೊರೆನೂರು ಮಠದ ಶ್ರೀ ಮಲ್ಲೇಶ ಸ್ವಾಮೀಜಿ, ಕೆಸವತ್ತೂರು ಮಠದ ಶ್ರೀ ಬಸವ ರಾಜೇಂದ್ರ ಸ್ವಾಮೀಜಿ, ಪರಿಸರವಾದಿ ಕೃಪಾಕರ್, ಎಂಜಿಪಿ ಸಂಸ್ಥಾಪಕರಾದ ಮೇಜರ್ ಜನರಲ್ ಒಂಬತ್ಕೆರೆ, ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ, ಬಿಜೆಪಿ ಮುಖಂಡ ಡಾ.ಶುಶ್ರೂತ್ ಗೌಡ, ಪಾರಂಪರಿಕ ತಜ್ಞ ಪ್ರೊ.ರಂಗರಾಜ್, ಪರಿಸರಕ್ಕಾಗಿ ನಾವು ಬಳಗದ ಪರಶುರಾಮೇಗೌಡ, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಪ್ರಭಾ ನಂದೀಶ್, ಭಾಗ್ಯ ಶಂಕರ್, ಗೀತಾ, ಶ್ವೇತ, ಅಭಿಷೇಕ್, ಶೈಲಜೇಶ್, ಪಿ.ಕೆ.ಅನಿಲ್ ಕುಮಾರ್, ಗೋಕುಲ್ ಗೋವರ್ಧನ್, ವಿಶ್ವ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಟರ್ಮ್ ಇನ್ಶೂರೆನ್ಸ್ ಕಡ್ಡಾಯ!

ಕೈಗೆಟುಕುವ ಪ್ರೀಮಿಯಂಗಳಲ್ಲಿ ಅತ್ಯುತ್ತಮ ಅವಧಿ ವಿಮಾ ಯೋಜನೆಗಳನ್ನು ನೀಡಲು ಸಾಧ್ಯವಾಗುತ್ತದೆ ಎಂದರು. ವಿಶಾಲವಾದ ಸಾಮಾಜಿಕ ಭದ್ರತಾ ಕ್ರಮದ ಭಾಗವಾಗಿ ಗುತ್ತಿಗೆ ನೌಕರರಿಗೂ ಅವಧಿ ವಿಮಾ ಪ್ರಯೋಜನಗಳನ್ನು ವಿಸ್ತರಿಸುವ ಕಾರ್ಯಸಾಧ್ಯತೆಯನ್ನು ಇಲಾಖೆ ಪರಿಶೀಲಿಸುತ್ತದೆ ಎಂದರು. ಅನುಭವಿ ಮತ್ತು ಅರ್ಹ ಹೊರಗುತ್ತಿಗೆ ನೌಕರರನ್ನು ಗುತ್ತಿಗೆ ಹುದ್ದೆಗಳಿಗೆ ಸ್ಥಳಾಂತರಿಸುವುದನ್ನು ಪರಿಗಣಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಿದ್ದೇನೆ. ಈ ಪ್ರಕ್ರಿಯೆಯಲ್ಲಿ ಮೀಸಲಾತಿ ಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತದೆ ಎಂದರು. ತಾತ್ಕಾಲಿಕ ಹುದ್ದೆಗಳನ್ನು ಭರ್ತಿ ಮಾಡಲು ಹೊಸ ನೇಮಕಾತಿ ಮಾಡುವ ಬದಲು, ಉದ್ಯೋಗದಲ್ಲಿ ನಿರಂತರತೆ ಮತ್ತು ನ್ಯಾಯಯುತತೆಯನ್ನು ಖಚಿತಪಡಿಸಿ ಕೊಳ್ಳಲು ಸಾಬೀತಾದ ಅನುಭವ ಹೊಂದಿರುವ ಅರ್ಹ ಹೊರಗುತ್ತಿಗೆ ಸಿಬ್ಬಂದಿಯನ್ನು ಗುತ್ತಿಗೆ ವರ್ಗಕ್ಕೆ ಸೇರಿಸಿ ಕೊಳ್ಳಬಹುದು ಎಂದು ಅವರು ಹೇಳಿದರು.

ಇಂದಿನಿಂದ ಹುಲಿ ಗಣತಿ

ಹೆಗ್ಗಳಿಕೆಗೆ ಪಾತ್ರವಾಗಿರುವ ಮೈಸೂರು–ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲೂ ಹುಲಿ ಗಣತಿ ಪ್ರಕ್ರಿಯೆ ಆರಂಭಿಸಲಾಗಿದೆ. 872.24 ಚದರ ಕಿಮೀ(ಕೋರ್ ಏರಿಯಾ) ದಟ್ಟವಾದ ಅರಣ್ಯ ಪ್ರದೇಶವಿದ್ದು, ಒಟ್ಟು 1036 ಚದರ ಕಿಮಿ ವ್ಯಾಪ್ತಿ ಹೊಂದಿದೆ. ಶೇ.10ರಷ್ಟು ಅರಣ್ಯ ಪ್ರದೇಶದಲ್ಲಿ ಪ್ರವಾಸೋದ್ಯಮ ಉದ್ದೇಶಿತ ಸಫಾರಿ ಮೂರು ಉಪ ವಿಭಾಗಗಳಾಗಿ ವಿಂಗಡಿ ಸಿರುವ ಬಂಡೀಪುರ ಅರಣ್ಯ ಪ್ರದೇಶದಲ್ಲಿ 13 ರೇಂಜ್‌ಗಳಿವೆ. ಹುಲಿ ಗಣತಿಗಾಗಿ 612 ಗ್ರಿಡ್‌ಗಳನ್ನು ಗುರುತಿಸಲಾಗಿದ್ದು, 1224 ಕ್ಯಾಮರಾ ಟ್ರ್ಯಾಪ್ ಬಳಸಲಾಗಿದೆ. 114 ಬೀಟ್‌ಗಳಿದ್ದು, 112 ಲೈನ್ ಟ್ರ್ಯಾನ್ಸಾಕ್ಟ್ ನಿಗಧಿ ಮಾಡಲಾಗಿದೆ. ಮೂರು ಹಂತದಲ್ಲಿ ನಿಯಮಾನುಸಾರ ಹುಲಿ ಗಣತಿ ಪ್ರಕ್ರಿಯೆ ನಡೆಯಲಿದ್ದು, ಗಣತಿಗಾಗಿ ನಿಯೋಜಿಸಿರುವ 480ಕ್ಕೂ ಹೆಚ್ಚು ಸಿಬ್ಬಂದಿಗೆ ಈಗಾಗಲೇ ರಾಷ್ಟ್ರೀಯ ಹುಲಿ ಪ್ರಾಧಿಕಾರದ ವತಿಯಿಂದ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಗಣತಿ ನಡೆಸುವ ಸಂಬಂಧ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

ನಾಗರಹೊಳೆ: ಮೈಸೂರು–ಕೊಡಗು ಜಿಲ್ಲಾ ವ್ಯಾಪ್ತಿ ಚಾಚಿಕೊಂಡಿರುವ ನಾಗರಹೊಳೆ ರಾಜ್ಯದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶವಾಗಿದೆ. 843 ಚ.ಕಿ.ಮೀ. ವ್ಯಾಪ್ತಿ ಹೊಂದಿದ್ದು, 3 ಉಪ ವಿಭಾಗದಲ್ಲಿ 8 ವನ್ಯಜೀವಿ ವಲಯಗಳಿವೆ. 91 ಗಸ್ತುಗಳಲ್ಲಿ 496 ಗ್ರಿಡ್‌ಗಳಲ್ಲಿ 992 ಕ್ಯಾಮರಾ ಟ್ರ್ಯಾಪ್ ಬಳಸಲಾಗುತ್ತಿದೆ. ಅಲ್ಲದೆ 106 ಲೈನ್ ಟ್ರ್ಯಾನ್ಸಾಕ್ಟ್ ಗುರುತಿಸಲಾಗಿದೆ. ಸುಮಾರು 370ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದು, ಈಗಾಗಲೇ ಅವರಿಗೆ ತರಬೇತಿ ನೀಡಲಾಗಿದೆ.

ಬಿಆರ್‌ಟಿ: ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲೂ ಹುಲಿ ಗಣತಿಗೆ ಸಿದ್ದತೆ ಮಾಡಿ ಕೊಳ್ಳಲಾಗಿದ್ದು, ಗುರುತಿಸಲ್ಪಟ್ಟ ಗಸ್ತು ಹಾಗೂ ಗ್ರಿಡ್‌ಗಳಲ್ಲಿ ಗಣತಿ ನಡೆಸಲಾಗುತ್ತಿದೆ.

ಮಲೆಮಹದೇಶ್ವರ ವನ್ಯಧಾಮ: ರಾಜ್ಯದ 6ನೇ ಹುಲಿ ಸಂರಕ್ಷಿತ ಪ್ರದೇಶವಾಗಿ ಯಾವುದೇ ಕ್ಷಣದಲ್ಲಿ ಘೋಷಣೆಯಾಗಲಿರುವ ಮಲೆಮಹದೇಶ್ವರ ವನ್ಯಧಾಮದಲ್ಲಿ ಹುಲಿ ಗಣತಿಗೆ ಸಿದ್ಧತೆ ಮಾಡಿ ಕೊಳ್ಳಲಾಗಿದೆ. 949.28 ಚ.ಕಿ.ಮೀ ವಿಸ್ತೀರ್ಣದ ಈ ವನ್ಯಧಾಮದಲ್ಲಿ 7 ವಲಯಗಳಿದ್ದು, ಹುಲಿ ಗಣತಿಗಾಗಿ 56 ಗಸ್ತುಗಳಿವೆ. 454 ಗ್ರಿಡ್‌ಗಳಿಂದ 908 ಕ್ಯಾಮರಾ ಟ್ರ್ಯಾಪ್ ಬಳಸಲಾಗಿದೆ. 225 ಸಿಬ್ಬಂದಿಯನ್ನು ಗಣತಿಗೆ ನಿಯೋಜಿಸಲಾಗಿದೆ.

ನಿಖರವಾದ ಮಾಹಿತಿ ಸಂಗ್ರಹ

> ಈ ಬಾರಿ ಅಖಿಲ ಭಾರತ ಹುಲಿ ಗಣತಿ ಪ್ರಕ್ರಿಯೆ ಜ.5ರಿಂದ ಮಾ.26ರವರೆಗೆ ವಿವಿಧ ಹಂತದಲ್ಲಿ ದೇಶದಾದ್ಯಂತ ನಡೆಯುತ್ತಿದೆ. ರಾಜ್ಯದಲ್ಲಿನ ಐದು ಹುಲಿ ಸಂರಕ್ಷಿತ ಪ್ರದೇಶ, ವನ್ಯಧಾಮ ಸೇರಿದಂತೆ 53 ಡಿವಿಷನ್‌ಗಳಲ್ಲಿ ಹುಲಿ ಗಣತಿ ನಡೆಸಲಾಗುತ್ತಿದೆ. ಇದೇ ಮೊದಲ ಬಾರಿಗೆ ಹುಲಿ ಪ್ರತ್ಯಕ್ಷವಾಗಿದ್ದ ಉಪವಿಭಾಗಗಳಲ್ಲೂ ಹುಲಿ ಗಣತಿ ನಡೆಸಲಾಗುತ್ತಿದೆ. ಎಂ–ಸ್ಟ್ರೈಪ್ಸ್ ಆ್ಯಪ್ ಮೂಲಕ ನಿಖರ ಮಾಹಿತಿ ದಾಖಲಿಸುವಂತೆ ಸಿಬ್ಬಂದಿಗೆ ಸೂಚನೆ ನೀಡಿ ತರಬೇತಿ ನೀಡಲಾಗಿದೆ. ರಾಜ್ಯದಲ್ಲಿ ಒಟ್ಟು 3212 ಗಸ್ತು ಪ್ರದೇಶ ದಲ್ಲಿ 6512 ಸ್ಥಳ(ಗ್ರಿಡ್)ಗಳಲ್ಲಿ 13024 ಕ್ಯಾಮರಾ ಟ್ರ್ಯಾಪ್ ಬಳಸಿ ಹುಲಿ ಗಣತಿ ನಡೆಸಲಾಗುತ್ತಿದೆ.
>
> - ಡಾ. ಪಿ.ರಮೇಶ್ ಕುಮಾರ್, ನಿರ್ದೇಶಕರು, ಹುಲಿ ಯೋಜನೆ ಹಾಗೂ ಸಂಚಾಲಕರು ಹುಲಿ ಗಣತಿ

ಸಿದ್ಧತೆ ಮಾಡಿಕೊಳ್ಳಲಾಗಿದೆ

> ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ 13 ವಲಯಗಳಲ್ಲೂ ಹುಲಿ ಗಣತಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈಗಾಗಲೇ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. 114 ಬೀಟ್‌ಗಳಲ್ಲಿ 612 ಗ್ರಿಡ್‌ಗಳಲ್ಲಿ 1224 ಕ್ಯಾಮರಾ ಟ್ರ್ಯಾಪ್ ಹಂತ ಹಂತವಾಗಿ ಬಳಸಿಕೊಂಡು ಗಣತಿ ಪ್ರಕ್ರಿಯೆ ನಡೆಸಲಾಗುತ್ತಿದೆ.
>
> - ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

3 ಹಂತದಲ್ಲಿ ಗಣತಿ: ಹುಲಿ ಗಣತಿ ಪ್ರಕ್ರಿಯೆ 3 ಹಂತದಲ್ಲಿ ನಡೆಯಲಿದೆ. ಮೊದಲನೇ ಹಂತದ ಗಣತಿ ಜ.5ರಿಂದ ಜ.7ರವರೆಗೆ ನಡೆಯಲಿದೆ. ಇದರಲ್ಲಿ ಇಲಾಖೆಯ ಅಧಿಕಾರಿ ಸೇರಿದಂತೆ 3–4 ಮಂದಿಯುಳ್ಳ ಒಂದು ತಂಡ ತಮಗೆ ನಿಗಧಿ ಮಾಡಿರುವ ಗಸ್ತಿನಲ್ಲಿ ಪ್ರತಿದಿನ ಬೆಳಗ್ಗೆ 6 ಗಂಟೆಯಿಂದ 10 ಗಂಟೆವರೆಗೆ 5 ಕಿ.ಮೀ. ಕಾಲ್ನಡಿಗೆಯಲ್ಲಿ ತೆರಳಿ ತಾವು ನೋಡಿದ ಹುಲಿ ಸೇರಿದಂತೆ ಪ್ರತಿಯೊಂದು ಪ್ರಾಣಿ, ಸಸ್ಯ, ಮರದ ಬಗ್ಗೆ ಮಾಹಿತಿ ಸಂಗ್ರಹಿಸಲಿದೆ.

ಎರಡನೇ ಹಂತದ ಗಣತಿ ಕಾರ್ಯದಲ್ಲಿ ನಿಗಧಿತ ದಿನಾಂಕದಂದು ಟ್ರಾನ್ಸೆಕ್ಟ್ ಲೈನ್‌ನಲ್ಲಿ 3 ದಿನ ಬೆಳಗ್ಗೆ 6ರಿಂದ 8 ಗಂಟೆ ಹಾಗೂ ಸಂಜೆ 4 ರಿಂದ 6 ಗಂಟೆವರೆಗೆ ಪ್ರತಿದಿನ 2 ಕಿ.ಮೀ. ಕಾಲ್ನಡಿಗೆಯಲ್ಲಿ ತೆರಳಿ ಮಾರ್ಗದಲ್ಲಿ ಸಿಗುವ ಪ್ರಾಣಿಯ ಹೆಜ್ಜೆ ಗುರುತು, ಲದ್ದಿ, 400 ಮೀಟರ್ ಅಂತರದಲ್ಲಿ ಕಂಡು ಬರುವ ಪ್ರಾಣಿ, ಸಸ್ಯವರ್ಗದ ಮಾಹಿತಿ ಕಲೆ ಹಾಕಲಾಗುತ್ತದೆ. 3ನೇ ಹಂತದ ಗಣತಿಯಲ್ಲಿ ಕ್ಯಾಮರಾ ಟ್ರ್ಯಾಪ್‌ನಲ್ಲಿ ದಾಖಲಾಗಿರುವ ಪ್ರಾಣಿಗಳ ಚಿತ್ರಣವನ್ನು ಪರಿಶೀಲಿಸಿ ದಾಖಲಿಸುವ ಪ್ರಕ್ರಿಯೆ ನಡೆಯುತ್ತದೆ.

10 ಸಾವಿರ ಮೌಲ್ಯದ ಬೆಳ್ಳಿ ಪೂಜಾ ಸಾಮಗ್ರಿ ಕಳವು

ಮೈಸೂರು,ಜ.4(ಪಿಎಂ)– ಮೈಸೂರಿನ ಶ್ರೀರಾಂಪುರದ 2ನೇ ಹಂತದ 2ನೇ ಮುಖ್ಯ ರಸ್ತೆಯ ಮನೆಯೊಂದಕ್ಕೆ ಕನ್ನ ಹಾಕಿರುವ ಖದೀಮರು, 10 ಸಾವಿರ ರೂ. ಮೌಲ್ಯದ 120 ಗ್ರಾಂ ಬೆಳ್ಳಿಯ ಪದಾರ್ಥಗಳನ್ನು ಕದ್ದು ಪರಾರಿಯಾಗಿದ್ದಾರೆ. ಮೇಘನಾ ಎಂಬುವರ ಮನೆಯಲ್ಲಿ ಜ.2ರಂದು ಕಳ್ಳತನ ನಡೆದಿದ್ದು, ಮನೆಯ ಡೋರ್ ಲಾಕ್ ಮುರಿದು ಕೋಣೆಯಲ್ಲಿಟ್ಟಿದ್ದ ಬೆಳ್ಳಿಯ ಪೂಜಾ ಸಾಮಗ್ರಿಗಳನ್ನು ಕಳ್ಳತನ ಮಾಡಲಾಗಿದೆ. ಮೇಘನಾ ಅವರು ನೀಡಿದ ದೂರಿನನ್ವಯ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಷ ಕಳೆದರೂ ಕುವೆಂಪು ಪ್ರತಿಮೆ ಅನಾವರಣ ಭಾಗ್ಯವಿಲ್ಲ

● ಮಾಜಿ ಕಾರ್ಪೊರೇಟರ್ ಕೆ.ವಿ. ಶ್ರೀಧರ್ ಬೇಸರ
● ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಗೆ ಖಂಡನೆ





ಕೆ.ವಿ. ಶ್ರೀಧರ್

ಮೈಸೂರು, ಜ.4(ಎಂಕೆ)–ಮೈಸೂರು ಹೆಬ್ಬಾಳಿನ ಕುವೆಂಪು ವೃತ್ತದಲ್ಲಿ ನಿರ್ಮಾಣಗೊಂಡು ವರ್ಷಗಳೇ ಕಳೆದರೂ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಯನ್ನು ಅನಾವರಣಗೊಳಿಸದೇ ಇರುವುದಕ್ಕೆ ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಇಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಯನ್ನು ಅನಾವರಣಗೊಳಿಸದೆ ಸಾಹಿತ್ಯ ದಿಗ್ಗಜರಿಗೆ ಅಪಮಾನ ಮಾಡಲಾಗುತ್ತಿದೆ. ಪಾಲಿಕೆ ಅಧಿಕಾರಿಗಳು ಹಾಗೂ ಸ್ಥಳಿಯ ಜನಪ್ರತಿನಿಧಿಗಳ ತೀವ್ರ ನಿರ್ಲಕ್ಷದಿಂದಾಗಿ ಸಾಹಿತ್ಯ ಪ್ರಿಯರು ಸೇರಿದಂತೆ ಎಲ್ಲಾ ಜಾತಿ–ಜನಾಂಗದವರಿಗೂ ನೋವುಂಟಾಗಿದೆ ಎಂದು ವಿಷಾದಿಸಿದ್ದಾರೆ.


ಕಳೆದ 20 ವರ್ಷದಿಂದಲೂ ಕುವೆಂಪು ಅವರ ಜನ್ಮ ದಿನಾಚರಣೆಂಯಂದು ವಿವಿಧ ಸಂಘ–ಸಂಸ್ಥೆಗಳಿಂದ ಕುವೆಂಪು ವೃತ್ತದಲ್ಲಿ ಮೊದಲಿದ್ದ ಕುವೆಂಪು ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಆಚರಣೆ ಮಾಡಲಾಗುತ್ತಿತ್ತು. ನಂತರದ ದಿನಗಳಲ್ಲಿ ವೃತ್ತವನ್ನು ಅಭಿವೃದ್ಧಿಪಡಿಸಿ, ಹೊಸದಾಗಿ ಕುವೆಂಪು ಅವರ ಪ್ರತಿಮೆ ನಿರ್ಮಾಣ ಮಾಡಲಾಯಿತು. ಆದರೆ ಸೂಕ್ತ ಸಮಯಕ್ಕೆ ಪ್ರತಿಮೆ ಅನಾವರಣಗೊಳಿಸದಿರುವುದು ಅತೀವ ಬೇಸರವನ್ನುಂಟು ಮಾಡಿದೆ ಎಂದಿದ್ದಾರೆ. ಕಳೆದ 2 ವರ್ಷದಿಂದ ಕುವೆಂಪು ಅವರ ಪ್ರತಿಮೆಗೆ ಬಟ್ಟೆ ಸುತ್ತಿ ನಿಲ್ಲಿಸಲಾಗಿದ್ದು, ಉದ್ಘಾಟನೆ ಮಾಡಲು ಅಧಿಕಾರಿಗಳಿಂದ ಸಾಧ್ಯವಾಗುತ್ತಿಲ್ಲ ಎಂಬುದೇ ಶೋಚನೀಯ. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಮೇರು ಸಾಹಿತಿ. ನಾಡಗೀತೆ, ರೈತಗೀತೆಯನ್ನು ನೀಡಿದ ಕುವೆಂಪು ಅವರ ಪ್ರತಿಮೆಗೆ ಇಂತಹ ಸ್ಥಿತಿ ಒದಗಿರುವುದು ಬೇಸರದ ಸಂಗತಿ. ಕೇಳಿದರೆ ಬೇಜವಾಬ್ದಾರಿ ಉತ್ತರ ನೀಡುವ ಪಾಲಿಕೆ ಅಧಿಕಾರಿಗಳ ವರ್ತನೆ ಸರಿಯಲ್ಲ. ಆದ್ದರಿಂದ ಕೂಡಲೇ ಹೆಬ್ಬಾಳಿನ ಕುವೆಂಪು ವೃತ್ತದಲ್ಲಿರುವ ಕುವೆಂಪು ಪ್ರತಿಮೆ ಅನಾವರಣಗೊಳ್ಳಬೇಕು. ಇಲ್ಲದಿದ್ದರೆ ಪ್ರತಿಭಟನೆಯ ಹಾದಿ ಹಿಡಿಯಬೇಕಾಗುತ್ತದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಕೆ ನೀಡಿದ್ದಾರೆ.

ದೇವಸ್ಥಾನ ಜೀರ್ಣೋದ್ಧಾರಕ್ಕೆ ಧನಸಹಾಯ...



ಮೈಸೂರಿನ ಮೇಟಗಳ್ಳಿಯಲ್ಲಿ ಮಾರಮ್ಮ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮಾಜಿ ಕಾರ್ಪೊರೇಟರ್ ಮಾದೇಶ್ ಅವರು 50,000 ರೂ. ಧನಸಹಾಯ ಮಾಡಿದರು. ಈ ವೇಳೆ ದೇವರಾಜು, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕ ತಮ್ಮೇಗೌಡ, ರವಿ(ಟೆಂಟ್), ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ನಂದನ್ ಮಹದೇಶ, ರಾಮಣ್ಣ, ಸಂತೋಷ ಇನ್ನಿತರರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಕೆಎಸ್‌ಆರ್‌ಟಿಸಿಯ ಎಂಡಿಎಂಎಸ್ ಸೊಸೈಟಿಯ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಸೊಸೈಟಿ ಅಧ್ಯಕ್ಷ ಕೆ.ಲೋಕೇಶ್, ಉಪಾಧ್ಯಕ್ಷೆ ಶ್ರೀಮತಿ ನಾಗಲೀಲಾ, ನಿರ್ದೇಶಕರಾದ ನಾಗಪ್ರಸಾದ್, ಸೋಮಶೇಖರ್, ದೇವರಾಜ್, ಕುಮಾರ್, ಚೆನ್ನೇಗೌಡ, ರಘು, ರಾಮು, ಮಾದೇವಸ್ವಾಮಿ, ಲೋಹಿತ್, ಮಹೇಶ್, ಮಾದೇಶ್, ಎಚ್.ಬಿ.ರಾಜು ಇನ್ನಿತರರು ಉಪಸ್ಥಿತರಿದ್ದರು.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ನೇಮಕಾತಿಗೆ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು,ಜ.4– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಗ್ರಾಮೀಣ ಪುನರ್ವಸತಿ ಯೋಜನೆಯಡಿ, ನಂಜನಗೂಡು ತಾಲೂಕಿನ ನೇರಳೆ ಗ್ರಾಪಂ ವ್ಯಾಪ್ತಿಯಲ್ಲಿ ಒಬ್ಬರು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ರೂ.10,000 ಗೌರವಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಿದೆ. ಅರ್ಹ ಸಮರ್ಥ ವಿಕಲಚೇತನ ವ್ಯಕ್ತಿಗಳು ಅರ್ಜಿ ನಮೂನೆಯನ್ನು ನಂಜನಗೂಡು ತಾಪಂನಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜ.20 ರೊಳಗಾಗಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ರಂಗಸ್ವಾಮಿ ಅವರನ್ನು ಮೊ.ಸಂ:8951113120 ಮೂಲಕ ಸಂಪರ್ಕಿಸಬಹುದು.

ಸಿದ್ದರಾಮಯ್ಯರ ಬದಲಾವಣೆ ಆದಲ್ಲಿ ಸಿಎಂ ಸ್ಥಾನ ದಲಿತರಿಗೆ ಧಕ್ಕಲಿ...

● ಮೈಸೂರಲ್ಲಿ ವಿವಿಧ ಸಂಘಟನೆಗಳ ನಾಯಕರ ಆಗ್ರಹ ● ದಲಿತ ಸಮುದಾಯದ ಯಾವ ನಾಯಕರಾದರೂ ಸರಿಯೇ

ಮೈಸೂರು, ಜ.4(ಎಂಕೆ)– ರಾಜ್ಯದಲ್ಲಿ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿದರೆ ಯಾವುದೇ ಅಭ್ಯಂತರವಿಲ್ಲ. ಅಕಸ್ಮಾತ್ ಬದಲಾವಣೆಯಾದಲ್ಲಿ ದಲಿತ ನಾಯಕರಿಗೆ ಅವಕಾಶ ನೀಡಲೇಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ದಲಿತ ನಾಯಕರಲ್ಲಿ ಯಾರ ಹೆಸರನ್ನ ಘೋಷಣೆ ಮಾಡಿದರೂ ಅವರಿಗೆ ಸಂಪೂರ್ಣ ಬೆಂಬಲ ನೀಡಲು ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ 'ದಲಿತ ಸಿಎಂ' ವಿಚಾರವಾಗಿ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಭಾನುವಾರ ಆಯೋಜಿಸಿದ್ದ ಸಭೆಯಲ್ಲಿ ದಲಿತ ಸಿಎಂ ಸ್ಥಾನಕ್ಕೆ ಸೇವಾ ಹಿರಿತನದ ಆಧಾರದ ಮೇಲೆ ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ. ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ ಅಥವಾ ಇನ್ನಿತರ ಯಾರ ಹೆಸರನ್ನೇ ಘೋಷಣೆ ಮಾಡಿದರು ಎಲ್ಲಾ ದಲಿತ ಹಾಗೂ ಇತರೆ ಸಂಘಟನೆಗಳು ಬೆಂಬಲಿಸಬೇಕೆಂದು ಒಕ್ಕೊರಲ ತೀರ್ಮಾನಕ್ಕೆ ಬರಲಾಯಿತು.

ಸಭೆಯ ನೇತೃತ್ವ ವಹಿಸಿದ್ದ ಮೈಸೂರು ಗಾಂಧಿನಗರದಲ್ಲಿರುವ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಜೋರಾಗಿದ್ದು, ಬದಲಾವಣೆ ಮಾಡುವುದಾದರೆ ದಲಿತರಿಗೆ ಸಿಎಂ ಸ್ಥಾನ ಕೊಡಲೇಬೇಕು ಎಂದು ಹಕ್ಕೊತ್ತಾಯ ಮಾಡುತ್ತಿದ್ದೇವೆ. ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ದಲಿತ ಸಿಎಂ ಘೋಷಣೆ ಮಾಡಲೇಬೇಕು ಎಂದು ಆಗ್ರಹಿಸಿದರು.

ಸಂವಿಧಾನಬಾಹಿರ: ನಾವೆಲ್ಲರೂ ನಂಬಿದ್ದ 'ಅಹಿಂದ' ಸಂಘಟನೆ ಮೂಲಕ ಸಾಮಾಜಿಕ ನ್ಯಾಯ ದೊರೆಯುತ್ತೆ, ನಮಗೂ ಹಕ್ಕು–ಅಧಿಕಾರ ಸಿಗುತ್ತೆ ಎಂದು ಇಡೀ ಶೋಷಿತ ಸಮುದಾಯ 'ಅಹಿಂದ' ವನ್ನು ಅಪ್ಪಿಕೊಂಡು ಬೆಂಬಲ ನೀಡಿದೆ. ಆದರೆ, ದಲಿತ ಸಮುದಾಯದ ಮತ ಬೇಕು, ಅವರ ಹಿತ ಬೇಡ ಎನ್ನುವುದು ಸಂವಿಧಾನದ ಕಗ್ಗೊಲೆ ಮಾತ್ರವಲ್ಲದೆ ಸಂವಿಧಾನಬಾಹಿರವೂ ಆಗಲಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಡಿ ಎಂದು ನಾವ್ಯಾರು ಹೇಳುತ್ತಿಲ್ಲ. ಅವರಿಗೂ ಅವಕಾಶ ಮಾಡಿಕೊಡಿ. ಆದರೆ, ಅದಕ್ಕೂ ಮುನ್ನ ದಲಿತರಿಗೆ ಸಿಎಂ ಸ್ಥಾನ ನೀಡಬೇಕು. ದಲಿತ ಸಿಎಂ ಚರ್ಚೆ ಇವತ್ತಿನದಲ್ಲ. ದಿವಂಗತ ಬಸವಲಿಂಗಪ್ಪ, ಬಿ.ರಾಚಯ್ಯ ಅವರಿಗೆ ವಂಚನೆಯಾಗಿದೆ. ಪ್ರಸ್ತುತ ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ್, ಹೆಚ್.ಸಿ.ಮಹದೇವಪ್ಪ, ಕೆ.ಹೆಚ್. ಮುನಿಯಪ್ಪ ಅವರೆಲ್ಲರಿದ್ದು, ಇವರ್ಯಾರು ಕಾಂಗ್ರೆಸ್ ಹೈಕಮಾಂಡ್‌ನವರ ಕಣ್ಣಿಗೆ ಕಾಣುತ್ತಿಲ್ಲವಾ... ಇವರ್ಯಾರು ನಾಯಕರೇ ಅಲ್ವಾ ಎಂದು ಪ್ರಶ್ನಿಸಿದರಲ್ಲದೆ ಸಾಮಾಜಿಕ ನ್ಯಾಯದ ಪರಿಪಾಲನೆ ದೃಷ್ಟಿಯಿಂದ ದಲಿತರಿಗೆ ಅವಕಾಶ ಮಾಡಿಕೊಡದಿದ್ದರೆ, ನಮ್ಮ ನಡೆ ಮತ್ತು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಂಬರ್ ಒನ್ ಹೀರೋ...!: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ದಿವಂಗತ ಡಿ.ದೇವರಾಜ ಅರಸು ಅವರ ದಾಖಲೆಯನ್ನು ಸರಿಗಟ್ಟುತ್ತಿರುವುದು ಸಂತೋಷದ ವಿಚಾರ. ಅವರೇ ಏನಾದರೂ ತಮ್ಮ ಸ್ಥಾನದಿಂದ ಕೆಳಗೆ ಇಳಿಯಲು ಇಚ್ಚಿಸಿದ್ದಲ್ಲಿ ದಲಿತ ನಾಯಕರಿಗೆ ಅಧಿಕಾರ ಹಸ್ತಾಂತರ ಮಾಡಬೇಕು. ಇದರಿಂದ ಅವರು ದೇಶದಲ್ಲಿಯೇ ನಂಬರ್ ಒನ್ ಹೀರೋ ಮಾತ್ರವಲ್ಲದೆ ಮಾದರಿ ಮುಖ್ಯಮಂತ್ರಿಗಳಾಗುತ್ತಾರೆ ಎಂದರು.

ಸ್ಪಷ್ಟನೆ ನೀಡಿ: 'ಅಹಿಂದ' ದಲ್ಲಿ 'ಅ'(ಅಲ್ಪಸಂಖ್ಯಾತ) ಮತ್ತು 'ದ'(ದಲಿತ) ಪಾತ್ರವೇನು ಎಂಬುದರ ಬಗ್ಗೆ ಮೈಸೂರಲ್ಲಿ ಅಹಿಂದ ಸಮಾವೇಶ ಮಾಡಲು ಮುಂದಾಗಿರುವವರು ಸ್ಪಷ್ಟನೆ ನೀಡಬೇಕು. 'ಅಹಿಂದ' ದಲ್ಲಿ 'ಅ' ಮತ್ತು 'ದ' ಪಾತ್ರ ಏನೂ ಇಲ್ಲವಾದಮೇಲೆ ನಾವೇನು ಜೀತ ಮಾಡಲು ಇದ್ದೇವೆಯೇ. ಹಾಗಾಗಿ ಕಾಂಗ್ರೆಸ್ ಹೈಕಮಾಂಡ್ ಈ ವಿಚಾರವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ, ಸಂವಿಧಾನದ ಮೌಲ್ಯವನ್ನು ಎತ್ತಿ ಹಿಡಿಯಬೇಕು. ಅಲ್ಲದೆ ನಮಗೆ ಹಕ್ಕು–ಅಧಿಕಾರ ನೀಡುವವರ ಪರವಾಗಿ ನಾವು ನಿಲ್ಲುತ್ತೇವೆ ಎಂದು ತಿಳಿಸಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ವಕೀಲ ತಿಮ್ಮಯ್ಯ, ಮಹೇಶ್, ಚಂದ್ರಶೇಖರ್, ಗಂಗಾಧರ್, ಕುಮಾರ್, ವಿಷ್ಣುವರ್ಧನ್, ಪುಟ್ಟಸ್ವಾಮಿ, ದ್ಯಾವಪ್ಪ ನಾಯಕ, ಗೋವಿಂದರಾಜ್, ಮನೋನ್ಮಣಿ, ಸಂತೋಷ್, ಜೆ.ಪ್ರಭು, ಗಾಂಧಿನಗರ ಮಂಜುನಾಥ್, ಜಿ.ಮಹದೇವ, ಮಂಜುಳಾ, ಕೆ.ಗಂಗಾಧರ್, ಸೂರ್ಯಕಾಂತ್, ಮಧುಸೂದನ್, ಅಶೋಕಪುರಂ ರೇವಣ್ಣಸ್ವಾಮಿ, ಮಲ್ಲಿಕಾರ್ಜುನ, ಬಾಬುರಾವ್, ನಿವೃತ್ತ ಅಧಿಕಾರಿ ಬಾಬುರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ 'ದಲಿತ ಸಿಎಂ' ವಿಚಾರವಾಗಿ ಭಾನುವಾರ ನಡೆದ ವಿವಿಧ ಸಂಘಟನೆಗಳ ಸಭೆಯಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು.

ಸಮುದಾಯದ ನಿರ್ಧಾರಕ್ಕೆ ಬದ್ಧ...!

"ಗಾಂಧಿನಗರ ಉರಿಲಿಂಗಿಪೆದ್ದಿ ಮಠ ಕುರಿತು ನಡೆಯುತ್ತಿರುವ ಚರ್ಚೆಗಳಿಗೆ ಸಂಬಂಧಿಸಿದಂತೆ, ನಮಗೆ ಸಮುದಾಯವೇ ದೊಡ್ಡದು. ಸ್ವಾಮೀಜಿಗಳಲ್ಲ. ಭಕ್ತರಿದ್ದರೆ ಮಠ. ಆದ್ದರಿಂದ ಮಠದ ವಿಚಾರವನ್ನು ಸಮುದಾಯದ ಮುಂದೆ ಇಟ್ಟಿದ್ದೇವೆ. ಸಮುದಾಯದ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಒಂದು ಧ್ವನಿಯನ್ನು ಕುಗ್ಗಿಸಬೇಕು ಎಂದೇ ಹುನ್ನಾರ ನಡೆಸಲಾಗುತ್ತಿದೆ. ಆದರೂ ಅಪಮಾನಕ್ಕೆ ಅಂಜದೆ ಹೋರಾಟ ಮಾಡುತ್ತೇವೆ.

–ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉರಿಲಿಂಗಿಪೆದ್ದಿ ಮಠ

ಫೆ.15, 16ರಂದು ಬೆಂಗಳೂರಲ್ಲಿ ಬೃಹತ್ ಸಭೆ...

ಸಿದ್ದರಾಮಯ್ಯ ಅವರನ್ನು ಬದಲಿಸುವುದಾದರೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ನಾನು ಮುಖ್ಯಮಂತ್ರಿಯಾಗುತ್ತೇನೆಂದು ಬಹಿರಂಗವಾಗಿ ಹೇಳುವ ದಲಿತ ನಾಯಕರಿಗೆ ಬೆಂಬಲ ನೀಡಲಾಗುವುದು. ದಲಿತ ಮುಖ್ಯಮಂತ್ರಿಗಾಗಿ ಫೆ.15 ಮತ್ತು 16ರಂದು ಬೆಂಗಳೂರಿನಲ್ಲಿ ಬೃಹತ್ ಸಭೆ ಆಯೋಜಿಸಲಾಗುವುದು. ಕಾಂಗ್ರೆಸ್ ವರಿಷ್ಠರನ್ನು ಆಹ್ವಾನಿಸಲಾಗುವುದು. ಅಲ್ಲದೇ ಸಮುದಾಯದ ಜನಪ್ರತಿನಿಧಿಗಳಿಗೆ ದಲಿತ ಸಿಎಂಗೆ ಬೆಂಬಲ ನೀಡುವಂತೆ ಕೋರುವ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. **–ಎನ್.ಭಾಸ್ಕರ್, ರಾಜ್ಯಾಧ್ಯಕ್ಷ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ**

ಶ್ರೀ ಮಾದಾರ ಚನ್ನಯ್ಯ ಸೇವಾ ಸಮಿತಿಯ ಮೈಸೂರು ಜಿಲ್ಲಾ ಪದಾಧಿಕಾರಿಗಳ ಸಭೆ



ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಜಯಂತ್ಯುತ್ಸವ ಮತ್ತು ಮೈಸೂರು ಜಿಲ್ಲಾ ಪದಾಧಿಕಾರಿಗಳ ಸಭೆ ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಸೇವಾ ಸಮಿತಿ ಅಧ್ಯಕ್ಷ ಸ್ವಾಮಿ ತಿಲಕ್‌ನಗರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಡಾ.ಆನಂದ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮಧುರಾಜ್, ವೆಂಕಟರಾಮು, ಜಿಲ್ಲಾ ಉಪಾಧ್ಯಕ್ಷರಾದ ನರಸಿಂಹಮೂರ್ತಿ, ಬಿ.ಎಸ್.ಸುಬ್ರಹ್ಮಣ್ಯ, ಮೂಗೂರು ಸಿದ್ದರಾಜು, ಕಾರ್ಯದರ್ಶಿ ದೇವು ನಂಜನಗೂಡು, ಮಹದೇವು, ಸುಬ್ರಮಣ್ಯ ಜ್ಯೋತಿನಗರ, ಕುಮಾರ್ ಪಿರಿಯಾಪಟ್ಟಣ, ಶಿವಣ್ಣ ಹುಳಿಮಾವು, ಮಹಾದೇವ, ಹರೀಶ್, ಪ್ರಸನ್ನಕುಮಾರ್, ರಾಜೇಶ್, ಮಂಜು, ದುದ್ದಗೆರೆ ಅರುಣ್‌ಕುಮಾರ್, ಮನು, ಶಿವರಾಜ್ ಹುಣಸೂರು, ರಾಹುಲ್ ಮಾದೇವಯ್ಯ ಇನ್ನಿತರರಿದ್ದರು.

ಮಕ್ಕಳೇ ಅಭಿನಯಿಸಿರುವ 'ರೆಡ್ ಫ್ಲವರ್' ನಾಟಕ ಪ್ರದರ್ಶನ ನಾಳೆ

ಮೈಸೂರು, ಜ.4(ಜಿಎ)–ಪಾಧಾ ಟ್ರಸ್ಟ್, ಧ್ಯಾನ್ ವಿದ್ಯಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜ.6ರಂದು ಸಂಜೆ 6ಗಂಟೆಗೆ ನಗರದ ಕಲಾ ಮಂದಿರದ ಕಿರುರಂಗಮಂದಿರದಲ್ಲಿ ವಿಶೇಷ ಕಾಳಜಿವುಳ್ಳ ಮಕ್ಕಳೇ ಅಭಿನಯಿಸಿರುವ 'ರೆಡ್ ಫ್ಲವರ್' ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಕೆ.ವೀಣಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಕವನ್ನು ಪ್ರವೀಣ್ ಬೆಳ್ಳಿ ನಿರ್ದೇಶಿಸಿದ್ದಾರೆ. ಇದು ಇಂಗ್ಲಿಷ್ ನಾಟಕವಾಗಿದೆ. ವಿಶೇಷ ಕಾಳಜಿ ಅಗತ್ಯವುಳ್ಳ ಮಕ್ಕಳ ನಡವಳಿಕೆ ಸುಧಾರಿಸಲಿ, ಇವರೂ ಸಮಾಜದ ಮುಖ್ಯ ವಾಹಿನಿಗೆ ಬರಲಿ ಎಂಬ ಕಾರಣದಿಂದ ಕಳೆದ ಆಗಸ್ಟ್ ತಿಂಗಳಿನಿಂದಲೇ ತರಬೇತಿ ನೀಡಿ ಪ್ರದರ್ಶನಕ್ಕೆ ಅಣಿಗೊಳಿಸಲಾಗಿದೆ. ಇದು ಸುಮಾರು ಒಂದು ಗಂಟೆ ಅವಧಿಯ ನಾಟಕವಾಗಿದ್ದು, ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಹನ್, ಧ್ಯಾನ್, ಶಮಿತಾ, ಮಾಧುರಿ, ಪ್ರವೀಣ್ ಬೆಳ್ಳಿ ಉಪಸ್ಥಿತರಿದ್ದರು.

13ನೇ ಅಖಿಲ ಭಾರತ ಕನ್ನಡ ನುಡಿ ಸಿರಿ ಸಮ್ಮೇಳನ



ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಸಭಾಂಗಣದಲ್ಲಿ ಆಯೋಜಿಸಿದ್ದ 13ನೇ ಅಖಿಲ ಭಾರತ ಕನ್ನಡ ನುಡಿ ಸಿರಿ ಸಮ್ಮೇಳನವನ್ನು ಕುವೆಂಪು ಭಾಷಾ ಪ್ರಾಧಿಕಾರ ಮಾಜಿ ಸದಸ್ಯೆ ಡಾ.ಎಂ.ಎಸ್.ಶಶಿಕಲಾ ಗೌಡ ಉದ್ಘಾಟಿಸಿದರು.

ಮೈಸೂರು, ಜ.4(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ–ಸಂಸ್ಕೃತಿ ಮತ್ತು ಅಭಿವೃದ್ಧಿ ಟ್ರಸ್ಟ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಚುಟುಕು ಸಾಹಿತ್ಯ ಪರಿಷತ್ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 13ನೇ ಅಖಿಲ ಭಾರತ ಕನ್ನಡ ನುಡಿ ಸಿರಿ ಸಮ್ಮೇಳನ ಭಾನುವಾರ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಕುವೆಂಪು ಭಾಷಾ ಪ್ರಾಧಿಕಾರ ಮಾಜಿ ಸದಸ್ಯೆ ಡಾ.ಎಂ.ಎಸ್.ಶಶಿಕಲಾ ಗೌಡ ಮಾತನಾಡಿ, ಸುಮಾರು 2350 ವರ್ಷಗಳ ಇತಿಹಾಸವಿರುವ ಕನ್ನಡ ನುಡಿಸಿರಿ ಅತ್ಯಂತ ಶ್ರೀಮಂತ ಹಾಗೂ ಸಂಪತ್ಭರಿತವಾದುದು. 'ಇಸಿಲ', 'ಕೂಪಣ', 'ವನವಾಸಿಕ' ಪದಗಳನ್ನು ಗಮನಿಸಿದಾಗ ಇದು ಗೊತ್ತಾಗುತ್ತದೆ. 'ಇಸಿಲ' ಎಂದರೆ ಕೋಟೆ, ಅದೇ ರೀತಿ 'ಕೂಪಣ' ಮುಂದೆ ಕೊಪ್ಪಳವಾದರೆ, 'ವನವಾಸಿಕ' ನಮ್ಮ ಬನವಾಸಿಯಾಯಿತು ಎಂದು ತಿಳಿಸಿದರು.

ಸಂಸ್ಕೃತ, ಹಿಂದಿ ಭಾಷೆಗಳು ದೇವನಾಗರಿ ಲಿಪಿಯಲ್ಲಿದ್ದರೆ, ತಮಿಳಿಗೆ ಸಮಗ್ರ ಲಿಪಿ ಇಲ್ಲ. ತೆಲುಗಿನಲ್ಲಿಯೂ ಕೆಲವೊಂದು ಲೋಪ ಇದೆ. ಮಲೆಯಾಳಂನಲ್ಲಿ ಸಂಸ್ಕೃತ ಹೆಚ್ಚಿದೆ. ಆದರೆ, ಕನ್ನಡಕ್ಕೆ ಮಾತ್ರ ಸಮಗ್ರ ಲಿಪಿಶಾಸ್ತ್ರವಿದೆ. ನಾವು ಮಾತನಾಡಿದಂತೆ ಬರೆಯುತ್ತೇನೆ. ಬಂದಂತೆ ಮಾತನಾಡುತ್ತೇವೆ ಎಂದರು.

ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಕನ್ನಡದಲ್ಲಿರುವಷ್ಟು ಮಹಾಕಾವ್ಯಗಳು ಬೇರೆ ಯಾವ ಭಾಷೆಯಲ್ಲಿಯೂ ಇಲ್ಲ. ವಚನ ಸಾಹಿತ್ಯ, ದಾಸ ಸಾಹಿತ್ಯ, ಲಾವಣಿ ಸೇರಿದಂತೆ ಎಲ್ಲವೂ ಕನ್ನಡ ನಮ್ಮ ಸಾಹಿತ್ಯದಲ್ಲಿವೆ. ಹೀಗಾಗಿ ಗ್ರೀಕ್ ಹಾಗೂ ಲ್ಯಾಟಿನ್ ನಂತರ ಕನ್ನಡವೇ ಪುರಾತನ ಹಾಗೂ ಶ್ರೀಮಂತ ಭಾಷೆ ಎಂದು ಪ್ರತಿಪಾದಿಸಿದರು.


ಸಮ್ಮೇಳನದ ಅಧ್ಯಕ್ಷರಾದ ಸಾಹಿತಿ ರತ್ನ ಹಾಲಪ್ಪ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಚುಟುಕು ಸಾಹಿತ್ಯಕ್ಕೆ ಹೆಚ್ಚಿನ ಮನ್ನಣೆ ಸಿಗುತ್ತಿದೆ. ವಿಶೇಷ ಪುರವಣಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಚುಟುಕುಗಳು ಈಗ ಪ್ರತಿನಿತ್ಯ ಪತ್ರಿಕೆಗಳಲ್ಲಿ ಮಿಂಚುತ್ತಿವೆ. ದಿನ, ವಾರ, ಪಾಕ್ಷಿಕ, ಮಾಸಿಕ ಪತ್ರಿಕೆಗಳು ಚುಟುಕುಗಳಿಗೆ ಹೆಚ್ಚಿನ ಮನ್ನಣೆ ನೀಡುತ್ತಿವೆ. ಇದರಿಂದ ಚುಟುಕು ಸಾಹಿತಿಗಳ ವಿಕಾಸಕ್ಕೆ ಹೆಚ್ಚಿನ ನೆರವು ದೊರೆತಂತಾಗಿದೆ ಎಂದು ಶ್ಲಾಘಿಸಿದರು.

ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರಿನ ಎಂ.ಎನ್.ಯದುಗಿರಿ, ಹೆಚ್.ಎಂ.ಪ್ರಭುಸ್ವಾಮಿ, ಛೇರ್ಯ ರಾಮಕುಮಾರ್, ಪಾರ್ವತಪ್ಪ ಮುಳ್ಳೂರು, ಪಾರ್ವತಮ್ಮ, ಕೊಪ್ಪಳದ ಶಿವಬಸಪ್ಪ ಮಸ್ಕಿ, ರಮೇಶ ಬೋಚನಹಳ್ಳಿ, ಎಂ.ಬದಿಯುದ್ದೀನ್, ಬಸವಲಿಂಗಯ್ಯ ಶಾಸ್ತ್ರಿ ಹಿರೇಮಠ, ಮಹಾಂತೇಶ ನೆಲಾಗಣಿ, ಮಂಡ್ಯದ ಕೆ.ಆರ್.ಕೃಷ್ಣಶೆಟ್ಟಿ, ಚಿತ್ರದುರ್ಗದ ಮೀರಾ ನಾಡಿಗ, ಯಲಬುರ್ಗದ ಹನುಮಗೌಡ ಪಾಟೀಲ, ಎ. ವೆಂಕಟೇಶ, ಬಾಗಲಕೋಟೆಯ ಬಸವರಾಜ ದಾವಣಗೇರಿ, ಕುಕನೂರಿನ ನಿಂಗಪ್ಪ ಹೈದ್ರಿ, ಪೀರಸಾಬ್ ದಫೇದಾರ, ಬಸವರಾಜ ಬೆಲ್ಲದ, ಹುಬ್ಬಳ್ಳಿಯ ಅಮರಾವತಿ ಗಾಣಿಗ, ಹನುಮಸಾಗರದ ಮೈಲಾರಪ್ಪ ಬಿಲಕಾರ ಅವರಿಗೆ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' ಹಾಗೂ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗಜೇಂದ್ರಗಡ ತಳ್ಳಿಹಾಳ ಸಂಸ್ಥಾನ ಕೋಡಿಮಠದ ಶ್ರೀ ಶರಣ ಬಸವೇಶ್ವರ ಸ್ವಾಮೀಜಿ, ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾನಂ ಲೋಕೇಶ್, ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಆರ್.ಭಂಡಾರಿ, ಶ್ರೀಗಂಧ ಸಾಹಿತ್ಯ ಕಲಾ ಬಳಗದ ರಾಜ್ಯಾಧ್ಯಕ್ಷ ನಾ.ಭಾ.ಕೆಂಪರಾಜು, ಸಾಹಿತಿ ಎಂ.ಬಿ. ಜಯಶಂಕರ, ಪಾರ್ವತಪ್ಪ ಮುಳ್ಳೂರು, ಮಹಾಂತೇಶ್ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದೇಶ – ವಿದೇಶ

ಪೊಲೀಸರಿಂದ ತಪ್ಪಿಸಿಕೊಳ್ಳಲು ಸತ್ತ ಹಾವು ಹಿಡಿದು ಬೆದರಿಸಿದ ಆಟೊ ಚಾಲಕ



ಹೈದರಾಬಾದ್: ಕುಡಿದು ವಾಹನ ಚಲಾಯಿಸಿ ಸಿಕ್ಕಿಬಿದ್ದ ಆಟೊ ಚಾಲಕನೊಬ್ಬ ಪೊಲೀಸರಿಂದ ತಪ್ಪಿಸಿಕೊಳ್ಳಲು ಸತ್ತ ಹಾವು ತೋರಿಸಿ ಬೆದರಿಸಿದ್ದಾನೆ.

ಹೈದರಾಬಾದ್‌ನ ಚಂದ್ರವನಗುಟ್ಟ ಟ್ರಾಫಿಕ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಈ ಘಟನೆ ನಡೆದಿದೆ. ಸಂಚಾರಿ ಪೊಲೀಸರು ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ಆಟೊ ಚಾಲಕ ಪಾನಮತ್ತನಾಗಿರುವುದು ಗೊತ್ತಾಗಿದೆ. ಆಟೊವನ್ನು ವಶಕ್ಕೆ ಪಡೆದು, ನಂತರ ಅದರಲ್ಲಿರುವ ವಸ್ತುಗಳನ್ನು ಹೊರಕ್ಕೆ ತೆಗೆಯುವಂತೆ ಸೂಚಿಸಿದ್ದಾರೆ. ಈ ವೇಳೆ ಚಾಲಕ ಸತ್ತ ಹಾವನ್ನು ಕೈಯಲ್ಲಿ ಹಿಡಿದು ಪ್ರಕರಣ ದಾಖಲಿಸದಂತೆ ಪೊಲೀಸ್ ಸಿಬ್ಬಂದಿಗೆ ಬೆದರಿಕೆ ಹಾಕಿದ್ದಾನೆ. ನಂತರ ಸ್ಥಳದಿಂದ ಪರಾರಿಯಾಗಿದ್ದಾನೆ.

ಸಾಮಾಜಿಕ ಜಾಲತಾಣದಲ್ಲಿ ವೀಡಿಯೊ ಹರಿದಾಡುತ್ತಿದೆ. ವಿಡಿಯೊದಲ್ಲಿ ಕೈಯಲ್ಲಿ ಹಾವನ್ನು ಸುತ್ತಿಕೊಂಡು ಓಡಾಡುತ್ತ, ಇದನ್ನು ತೆಗೆದುಕೊಳ್ಳಿ, ನನ್ನ ವಾಹನವನ್ನು ವಾಪಸ್ ನೀಡಿ ಎಂದು ಚಾಲಕ ಹೇಳುತ್ತಿರುವ ದೃಶ್ಯವಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವೆನೆಜುವೆಲಾಕ್ಕೆ ಸ್ಟಾರ್‌ಲಿಂಕ್ ಮೂಲಕ ಉಚಿತ ಇಂಟರ್‌ನೆಟ್ ನೀಡಿದ ಮಸ್ಕ್



ವಾಷಿಂಗ್ಟನ್: ಅಮೆರಿಕದ ದಾಳಿಗೆ ಒಳಗಾಗಿ ಅಧ್ಯಕ್ಷರನ್ನೂ ಕಳೆದುಕೊಂಡು ಕಂಗೆಟ್ಟಿರುವ ವೆನೆಜುವೆಲಾಕ್ಕೆ ಸ್ಪೇಸ್ ಎಕ್ಸ್ ಒಡೆತನದ ಸ್ಟಾರ್‌ಲಿಂಕ್ ಮೂಲಕ ಉಚಿತ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೇವೆ ಒದಗಿಸಿ ಬಿಲಿ ಯನೆರ್ ಇಲಾನ್ ಮಸ್ಕ್ ಬೆಂಬಲ ಸೂಚಿಸಿದ್ದಾರೆ.

ಸ್ಟಾರ್ ಲಿಂಕ್ ಈ ಕುರಿತು ಪೋಸ್ಟ್‌ನಲ್ಲಿ, ನಿರಂತರ ಸಂಪರ್ಕಸಾಧಿಸಲು ವೆನೆಜುವೆಲಾ ಜನರಿಗೆ ಫೆಬ್ರವರಿ 3ರವರೆಗೆ ಸ್ಟಾರ್ ಲಿಂಕ್ ಉಚಿತ ಬ್ರಾಡ್‌ಬ್ಯಾಂಡ್ ಸೇವೆ ನೀಡಲಿದೆ ಎಂದಿದೆ. ಈ ಪೋಸ್ಟ್ ಅನ್ನು ಮರು ಹಂಚಿಕೊಂಡಿರುವ ಇಲಾನ್ ಮಸ್ಕ್ ವೆನೆಜುವೆಲಾ ಜನರಿಗೆ ಬೆಂಬಲವಾಗಿ ಎಂದು ಬರೆದುಕೊಂಡಿದ್ದಾರೆ. ನಿಕೊಲಸ್ ಮಡೂರೊ ಅಂತರರಾಷ್ಟ್ರೀಯ ಮಾದಕ ವಸ್ತು ಕಳ್ಳಸಾಗಾಣಿಕೆ ಜಾಲದ ಪ್ರಮುಖ ಸೂತ್ರಧಾರ ಎಂದು ಆರೋಪಿಸಿ ದಾಳಿ ನಡೆಸಿದ್ದ ಅಮೆರಿಕ ಮಡೂರೊ ದಂಪತಿಯನ್ನು ವಿಚಾರಣೆಗಾಗಿ ನ್ಯೂಯಾರ್ಕ್‌ಗೆ ಕರೆತರಲಾಗಿದೆ. ಅಮೆರಿಕದ ಆರೋಪವನ್ನು ವೆನೆಜುವೆಲಾ ತಳ್ಳಿಹಾಕಿದ್ದು, ಅಮೆರಿಕವು ದೇಶದ ಭಾರಿ ತೈಲ ನಿಕ್ಷೇಪದ ಮೇಲೆ ಕಣ್ಣಿಟ್ಟಿದೆ. ಮಡೂರೊ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ದೇಶದಲ್ಲಿ ರಾಜಕೀಯ ಅಸ್ಥಿರತೆ ಸೃಷ್ಟಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿದೆ.

ಇನ್ನು ವಿಮಾನದಲ್ಲಿ ಪವರ್ ಬ್ಯಾಂಕ್ ಬಳಸುವಂತಿಲ್ಲ



ನವದೆಹಲಿ: ವಿಮಾನದಲ್ಲಿ ಪ್ರಯಾಣಿಸುವಾಗ ಇನ್ನು ಮುಂದೆ ಪವರ್ ಬ್ಯಾಂಕ್‌ಗಳ ಬಳಕೆ ಮತ್ತು ಅವುಗಳನ್ನು ಚಾರ್ಜ್ ಮಾಡುವುದನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ ನಿಷೇಧಿಸಿದೆ. ಪವರ್ ಬ್ಯಾಂಕ್‌ಗಳಲ್ಲಿರುವ ಲಿಥಿಯಂ ಬ್ಯಾಟರಿಗಳಿಂದ ಅಗ್ನಿ ಅವಘಡಗಳು ಸಂಭವಿಸುವ ಕಾರಣದಿಂದ ಈ ಹೊಸ ನಿಯಮ ಜಾರಿಗೆ ತರಲಾಗಿದೆ. ಕಳೆದ ಅಕ್ಟೋಬರ್‌ನಲ್ಲಿ ದೆಹಲಿಯ ಇಂದಿರಾಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟಿದ್ದ ಇಂಡಿಗೊ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಪವರ್ ಬ್ಯಾಂಕ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕ್ಯಾಬಿನ್ ಸಿಬ್ಬಂದಿ ತಕ್ಷಣವೇ ಕ್ರಮ ಕೈಗೊಂಡಿದ್ದರಿಂದ ದೊಡ್ಡ ಅನಾಹುತ ತಪ್ಪಿತ್ತು. ಘಟನೆ ಬಳಿಕ ಎಚ್ಚೆತ್ತುಕೊಂಡ ಡಿಜಿಸಿಎ, ಪವರ್ ಬ್ಯಾಂಕ್‌ಗಳನ್ನು ಹ್ಯಾಂಡ್‌ಬ್ಯಾಗ್‌ನಲ್ಲಿ ಇರಿಸಿಕೊಳ್ಳಬಹುದೇ ವಿನಃ, ಮೇಲ್ಭಾಗದಲ್ಲಿ ಲಗೇಜ್ ಇಡುವ ಕ್ಯಾಬಿನ್‌ನಲ್ಲೂ ಇಡುವಂತಿಲ್ಲ. ಪವರ್ ಬ್ಯಾಂಕ್ ಬಳಕೆ ಮಾಡುವುದು ಮತ್ತು ಸೀಟ್ ಪಕ್ಕದಲ್ಲಿರುವ ಚಾರ್ಜಿಂಗ್ ಪಾಯಿಂಟ್‌ನಿಂದ ಅದನ್ನು ಚಾರ್ಜಿಂಗ್‌ಗೆ ಇಡುವಂತಿಲ್ಲ ಎಂದು ಸೂಚಿಸಿದೆ.

ವೆನೆಜುವೆಲಾ ಮೇಲೆ ಅಮೆರಿಕ ದಾಳಿ: 40 ಮಂದಿ ಸಾವು



ವೆನಿಜುವೆಲಾ: ಅಮೆರಿಕ ಸೇನೆ ನಡೆಸಿದ ಭಾರಿ ಪ್ರಮಾಣದ ವಾಯು ದಾಳಿಯಲ್ಲಿ ವೆನೆಜುವೆಲಾದ ಸೇನಾ ಸಿಬ್ಬಂದಿ, ನಾಗರಿಕರು ಸೇರಿದಂತೆ 40 ಮಂದಿ ಮೃತಪಟ್ಟಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಮೆರಿಕ ದಾಳಿಯಿಂದ ಆರಂಭದಲ್ಲಿ ಕರಾಕಸ್‌ನ ಕರಾವಳಿ ಪ್ರದೇಶವಾದ ಕ್ಯಾಟಿಯಾ ಲಾ ಮಾರ್‌ನಲ್ಲಿ ನಾಗರಿಕರೊಬ್ಬರು ಮೃತಪಟ್ಟಿರುವ ಬಗ್ಗೆ ವರದಿಯಾಗಿತ್ತು. ಇದಾದ ಕೆಲವೇ ಹೊತ್ತಿನಲ್ಲಿ ಬೇರೆ ಬೇರೆ ಭಾಗಗಳಲ್ಲಿ ಇನ್ನಷ್ಟು ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ ಎಂದು ಹೇಳಿದ್ದಾರೆ. ಶನಿವಾರ ಮುಂಜಾನೆ ಅಮೆರಿಕದ ಯುದ್ಧ ವಿಮಾನವೊಂದು ಮೂರು ಅಂತಸ್ತಿನ ಅಪಾರ್ಟ್‌ಮೆಂಟ್‌ಗೆ ಅಪ್ಪಳಿಸಿದ ಪರಿಣಾಮ ಹಲವರು ಕೊನೆಯುಸಿರೆಳೆದಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ವಿವರಿಸಿದ್ದಾರೆ. ಕರಾಕಸ್ ಮೇಲೆ ಶುಕ್ರವಾರ ಮಧ್ಯರಾತ್ರಿ ಅಮೆರಿಕದ ಸೇನಾ ವಿಮಾನಗಳು ಹಾರಾಟ ನಡೆಸಿದ್ದವು. ಇದರ ಬೆನ್ನಲ್ಲೇ ಕನಿಷ್ಠ 7 ಸ್ಫೋಟಗಳು ಸಂಭವಿಸಿದ್ದವು ಎಂದು ವರದಿಯಾಗಿದೆ.

100 ಕೋಟಿ ಬೆಲೆಯ 19 ಲಕ್ಷ ಗಾಂಜಾ ಗಿಡ ನಾಶ



ಅಗರ್ತಲಾ: ತ್ರಿಪುರಾದ ಸಿಪಾಹಿಜಾಲಾ ಜಿಲ್ಲೆಯ ವಿವಿಧೆಡೆ ಬೆಳೆಯಲಾಗಿದ್ದ, 100 ಕೋಟಿ ಮೌಲ್ಯದ ಒಟ್ಟು 19 ಲಕ್ಷ ಗಾಂಜಾ ಗಿಡಗಳನ್ನು ನಾಶಪಡಿಸಲಾಗಿದೆ.

ರಾಜ್ಯ ಪೊಲೀಸರು, ಗಡಿ ಭದ್ರತಾ ಪಡೆ ಹಾಗೂ ತ್ರಿಪುರಾ ರಾಜ್ಯ ರೈಫಲ್ಸ್ ತಂಡಗಳು ಶನಿವಾರ ಜಂಟಿ ಕಾರ್ಯಾಚರಣೆ ನಡೆಸಿವೆ. ಉತ್ತರ ಕಲಂಚೌರಾ, ದಕ್ಷಿಣ ಕಲಂಚೌರಾ, ಆನಂದಪುರ ಹಾಗೂ ಘಾಟಿಗಢದಲ್ಲಿರುವ ಒಟ್ಟು 650 ಎಕರೆ ಅರಣ್ಯ ಪ್ರದೇಶದಲ್ಲಿ ಇದೇ ಮೊದಲು ಗಾಂಜಾ ಬೆಳೆಯನ್ನು ಪತ್ತೆ ಹಚ್ಚಲು ಪೊಲೀಸರು ಡ್ರೋನ್‌ಗಳನ್ನು ಬಳಸಿದ್ದಾರೆ. ಇನ್ನೂ ಸಂಪೂರ್ಣವಾಗಿ ಬೆಳೆಯದ 19 ಲಕ್ಷ ಗಾಂಜಾ ಗಿಡಗಳನ್ನು ನಾಶಗೊಳಿಸಲಾಗಿದೆ. ಗಾಂಜಾ ವಿರೋಧಿ ಕಾರ್ಯಾಚರಣೆಯು ಮುಂದುವರಿಯಲಿದೆ ಎಂದು ಸಿಪಾಹಿಜಾಲಾ ಎಸ್‌ಪಿ ರಾಜೀವ್ ಸೂತ್ರಧಾರ್ ತಿಳಿಸಿದರು. 650 ಎಕರೆ ಅರಣ್ಯ ಪ್ರದೇಶದಲ್ಲಿ ಸ್ಥಳೀಯರು ಗಾಂಜಾ ಬೆಳೆದಿದ್ದಾರೆ. ಒಂದೇ ದಿನ ರಾಜ್ಯದಲ್ಲಿ ಇಷ್ಟು ಪ್ರಮಾಣದ ಗಾಂಜಾ ಬೆಳೆಯನ್ನು ನಾಶಗೊಳಿಸಿರುವುದು ಇದೇ ಮೊದಲು. ಇಲ್ಲಿ ಬೆಳೆದ ಗಾಂಜಾವನ್ನು ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಹೆಚ್ಚು ಬೆಲೆಗೆ ಮಾರಾಟವಾಗುವ ಸ್ಥಳಗಳಿಗೆ ರವಾನಿಸಲಾಗುತ್ತದೆ ಎಂದು ಪೊಲೀಸರು ತಿಳಿಸಿದರು.

ಮೈಸೂರು ಮಿತ್ರ ಸೋಮವಾರ 5 ಜನವರಿ 2026

ಲಾರಿ ಚಾಲಕನ ಹತ್ಯೆ ಪ್ರಕರಣ ಮಹಿಳೆ ಸೇರಿ ಐವರ ಬಂಧನ



ಮಡಿಕೇರಿ, ಜ.4–ಲಾರಿ ಚಾಲಕನನ್ನು ಥಳಿಸಿ ಹತ್ಯೆ ಮಾಡಿದ ಬಳಿಕ ಅಪಘಾತದಲ್ಲಾದ ಸಾವು ಎಂದು ಬಿಂಬಿಸಲು ಪ್ರಯತ್ನಿಸಿದ ಘಟನೆಗೆ ಸಂಬಂಧಿಸಿದಂತೆ ಮಹಿಳೆ ಸೇರಿದಂತೆ ಒಟ್ಟು ಐವರು ಆರೋಪಿಗಳನ್ನು ಗೋಣಿಕೊಪ್ಪ ಪೊಲೀಸರು ಬಂಧಿಸಿದ್ದಾರೆ.

ಪೂರ್ಣಚಂದ್ರ ತೇಜಸ್ವಿ, ಕಾವ್ಯ, ಅಶೋಕ್, ಕುಮಾರ್ ಹಾಗೂ ಮಹೇಂದ್ರ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಡಿ.31ರಂದು ಗೋಣಿಕೊಪ್ಪ ಹರಿಶ್ಚಂದ್ರಪುರ ನಿವಾಸಿ ಲಾರಿ ಚಾಲಕ ನವಾಜ್ ತನ್ನ ಕಾರಿನಲ್ಲಿ ಕುಂದ ಗ್ರಾಮಕ್ಕೆ ನಡುರಾತ್ರಿ ವೇಳೆ ತೆರಳಿದ್ದ. ಕುಂದ ಗ್ರಾಮದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಬಾಡಿಗೆ ಮನೆಯಲ್ಲಿದ್ದ ಮಹಿಳೆ ಕಾವ್ಯಳ ಮನೆಯ ಕದ ತಟ್ಟಿ ಮಹಿಳೆಯನ್ನು ಹೊರ ಬರುವಂತೆ ಕರೆದಿದ್ದ ಎನ್ನಲಾಗಿದೆ. ಈ ವೇಳೆ ಕಾವ್ಯಳ ಪತಿ ಪೂರ್ಣಚಂದ್ರ ತೇಜಸ್ವಿ ಮನೆಯ ಬಾಗಿಲನ್ನು ತೆರೆದು ನವಾಜ್‌ನನ್ನು ಬಂದಿರುವ ಕಾರಣ ಕೇಳಿದಾಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಗಲಾಟೆ ವಿಕೋಪಕ್ಕೆ ತಿರುಗಿ, ಕಾವ್ಯಳ ಪತಿ ಪೂರ್ಣಚಂದ್ರ ತೇಜಸ್ವಿ ಅಕ್ಕಪಕ್ಕದ ಕಾರ್ಮಿಕರನ್ನು ಸಹಾಯಕ್ಕಾಗಿ ಕರೆದು, ನವಾಜ್‌ನ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ.

ಗಲಾಟೆಯ ಗಂಭೀರತೆ ಅರಿತ ನವಾಜ್ ಓಡಿ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಮೀಪದ ಹಳ್ಳದಲ್ಲಿ ಬಿದ್ದಿದ್ದಾನೆ. ಈ ವೇಳೆ ಪೂರ್ಣಚಂದ್ರ ಮತ್ತು ಇತರ ಕಾರ್ಮಿಕರು ನವಾಜ್‌ನ ಮೇಲೆ ದೊಣ್ಣೆಯಿಂದ ತೀವ್ರ ಹಲ್ಲೆ ನಡೆಸಿದ್ದಾರೆ. ಪ್ರಜ್ಞೆ ತಪ್ಪಿದ ನವಾಜ್ ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ. ಇದರಿಂದ ಗಾಬರಿಯಾಗಿ ನಾಲ್ವರು ಸೇರಿ ನವಾಜ್‌ನನ್ನು ಎತ್ತಿಕೊಂಡು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಕಾರಿನ ಬಳಿ ಮಲಗಿಸಿ ಆತನ ಕಾರನ್ನು ರಸ್ತೆ ಬದಿಯ ಚರಂಡಿಗೆ ತಳ್ಳಿ ಪ್ರಕರಣವನ್ನು ಅಪಘಾತವಾಗಿದೆ ಎಂದು ಬಿಂಬಿಸುವ ಪ್ರಯತ್ನ ಮಾಡಿದ್ದರು. ಬಳಿಕ ನವಾಜ್ ಆಸ್ಪತ್ರೆಗೆ ದಾಖಲಾಗಿದ್ದರೂ ಮಾರಣಾಂತಿಕ ಹಲ್ಲೆಗೆ ಒಳಗಾಗಿದ್ದ ಪರಿಣಾಮ ಆತ ಮೃತಪಟ್ಟಿದ್ದ. ಮೇಲ್ನೋಟಕ್ಕೆ ಇದೊಂದು ಕೊಲೆ ಎಂದು ತಿಳಿಯುತ್ತಿದ್ದಂತೆಯೇ ಕಾರ್ಯ ಪ್ರವೃತ್ತರಾದ ಪೊಲೀಸರು ಕಾವ್ಯ ಸೇರಿದಂತೆ ಐವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಿದ್ದಾರೆ.

ಡಿವೈಎಸ್‌ಪಿ ಮಹೇಶ್ ಕುಮಾರ್, ಮಾರ್ಗದರ್ಶನದಲ್ಲಿ ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ್ ಮುಧೋಳ್, ಠಾಣಾಧಿಕಾರಿ ಪ್ರದೀಪ್ ಕುಮಾರ್, ಪೊನ್ನಂಪೇಟೆ ಠಾಣಾಧಿಕಾರಿ ನವೀನ್ ಕುಮಾರ್ ಹಾಗೂ ಸಿಬ್ಬಂದಿ ತನಿಖಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಪ್ರಕೃತಿಯೊಂದಿಗೆ ಮಾನವನ ಭಾವನಾತ್ಮಕ ಸಂಬಂಧ ವೃದ್ಧಿಸಲಿ



ವಾಸವಿ ಸಪ್ತಾಹದ ಅಂಗವಾಗಿ ಶನಿವಾರ ಏರ್ಪಡಿಸಿದ್ದ 181ನೇ ಮಹಾ ಆರತಿ ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಕುಶಾಲನಗರ, ಜ.4–ಪ್ರಕೃತಿಯೊಂದಿಗೆ ಮಾನವನ ಭಾವನಾತ್ಮಕ ಸಂಬಂಧ ವೃದ್ಧಿಸಬೇಕಿದೆ. ಆಗ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಪಟ್ಟಣದ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ಟ್ರಸ್ಟ್, ಆರ್ಯವೈಶ್ಯ ಮಂಡಳಿ ವತಿಯಿಂದ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ದೇವಸ್ಥಾನದ ಬ್ರಹ್ಮ ಕಲಶೋತ್ಸವ, ವಾಸವಿ ಸಪ್ತಾಹದ ಅಂಗವಾಗಿ ಶನಿವಾರ ಏರ್ಪಡಿಸಿದ್ದ 181ನೇ ಮಹಾ ಆರತಿ ಕಾರ್ಯಕ್ರಮದಲ್ಲಿ ನದಿದಂಡೆಯಲ್ಲಿ ಗಿಡನೆಟ್ಟು ಮಾತನಾಡಿದ ಸಂಸದರು, ಇತ್ತೀಚಿನ ದಿನಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ಪ್ರಕೃತಿಯ ಮೇಲೆ ದಾಳಿ ಮಾಡಲಾಗುತ್ತಿದೆ. ಮನುಷ್ಯನ ದುರಾಸೆಯಿಂದ ಪ್ರಕೃತಿಯನ್ನು ಅವನತಿಯ ಕಡೆಗೆ ಕೊಂಡೊಯ್ಯುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿ, ರಾಜ್ಯದಲ್ಲಿ ಕಾವೇರಿ ಮಾತೆಗೆ ತಾಯಿ ಸ್ಥಾನ ಕಲ್ಪಿಸಿದ್ದು ಎಲ್ಲರೂ ಕೂಡ ಕಾವೇರಿ ರಕ್ಷಣೆಗೆ ಪಣ ತೊಡಬೇಕಿದೆ. ಇಲ್ಲಿನ ನದಿ ತಟದ ಆರತಿ ಕ್ಷೇತ್ರ ಅಭಿವೃದ್ಧಿಗೆ ಅಗತ್ಯ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ದಿವ್ಯಸಾನ್ನಿಧ್ಯ ವಹಿಸಿದ್ದ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಕಾವೇರಿ ನದಿಗೆ ಮಹಾ ಆರತಿ ಮಾಡುತ್ತಿರುವ ಹಿನ್ನೆಲೆಯಲ್ಲಿ ನದಿ ಸ್ವಲ್ಪ ಸ್ವಚ್ಛವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಮರ, ಗಿಡ, ಕಲ್ಲು, ಮಣ್ಣು, ನದಿಗಳಿಗೆ ದೇವರ ಸ್ಥಾನಕೊಟ್ಟಿದೆ. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಪ್ರಕೃತಿ ಮೇಲೆ ದಾಳಿ ನಡೆಯುತ್ತಿದ್ದು, ಇದರಿಂದ ಆಚಾರ, ಆರೋಗ್ಯದ ಮೇಲೆ ವ್ಯತ್ಯಾಸ ಕಂಡುಬರುತ್ತಿದೆ ಎಂದರು. ಕೇಂದ್ರ ಸರ್ಕಾರ ಗಂಗಾನದಿಯ ಸ್ವಚ್ಛತೆಗೆ ಆದ್ಯತೆ ನೀಡುತ್ತಿದೆ. ಅದೇ ರೀತಿ ಕಾವೇರಿಯನ್ನು ಸ್ವಚ್ಛತೆಯಾಗಿ ಇಟ್ಟುಕೊಳ್ಳಲು ಪ್ರತಿಯೊಬ್ಬರೂ ಕಂಕಣ ಬದ್ಧರಾಗಬೇಕು. ನದಿ ಸಂರಕ್ಷಣೆಗೆ ಕಾನೂನು ಜಾರಿಗೆ ತಂದು ಜನರಲ್ಲಿ ಜಾಗೃತಿ ಮಾಡಬೇಕು ಎಂದರು. ಶಾಸಕ ಡಾ.ಮಂತರ್ ಗೌಡ, ಮಾಜಿ ಶಾಸಕ ಅಪ್ಪಚ್ಚುರಂಜನ್ ಮಾತನಾಡಿದರು.

ಕಾವೇರಿ ನದಿ ಸ್ವಚ್ಛತಾ ಆಂದೋಲನದ ಸಂಚಾಲಕ ಎಂ.ಎನ್.ಚಂದ್ರಮೋಹನ್ ಮಾತನಾಡಿ, ಪ್ರತಿಯೊಬ್ಬರೂ ನದಿಗೆ ಮಾಲೀಕರಾದಾಗ ಮಾತ್ರ ನದಿ ಸಂರಕ್ಷಣೆ ಸಾಧ್ಯ. ಎಲ್ಲಾ ಸಂಘ ಸಂಸ್ಥೆಗಳ ಮೂಲಕ ಆರತಿ ಕಾರ್ಯಕ್ರಮ ಜರುಗುವಂತಾಗಬೇಕಿದೆ. ನದಿ ಸಂರಕ್ಷಣೆಗೆ ಕಾನೂನು ರೂಪುಗೊಳ್ಳಬೇಕಿದೆ ಎಂದು ಆಗ್ರಹಿಸಿದರು.

ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಟ್ರಸ್ಟ್ ಹಾಗೂ ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ವಾಸವಿ ಕನ್ನಿಕಾ ಪರಮೇಶ್ವರಿ ಟ್ರಸ್ಟ್ ಕಾರ್ಯದರ್ಶಿ ಪ್ರವೀಣ್, ಶ್ರೀ ಗಣಪತಿ ದೇವಸ್ಥಾನ ಸೇವಾ ಸಮಿತಿ ಮಾಜಿ ಅಧ್ಯಕ್ಷ ವಿ.ಎನ್. ವಸಂತಕುಮಾರ್, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ಕಾಂಗ್ರೆಸ್, ಬಿಜೆಪಿ ಮುಖಂಡರುಗಳು, ಸಮಿತಿ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು ಪಾಲ್ಗೊಂಡಿದ್ದರು. ನಂತರ ಅತಿಥಿಗಳು ಕಾವೇರಿ ನದಿಗೆ ಸಾಮೂಹಿಕವಾಗಿ ಆರತಿ ಬೆಳಗಿದರು.


ಕಿಗ್ಗಾಲುವಿನ ಎಂ.ಎಸ್.ನಿಧಿಗೆ ತರಾಸು ಪ್ರಶಸ್ತಿ



ನಾಪೋಕು, ಜ.4(ದುಗ್ಗಳ)–ಕೊಡಗಿನ ಕಿಗ್ಗಾಲು ಗ್ರಾಮದ ನಿವಾಸಿ ಎಂ.ಎಸ್.ನಿಧಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಪಡೆದು ಈ ಬಾರಿಯ ತ.ರಾ.ಸು. ಪ್ರಶಸ್ತಿ ಪುರಸ್ಕೃತಳಾಗಿ ಜಿಲ್ಲೆಗೆ ಕೀರ್ತಿಯನ್ನು ತಂದಿದ್ದಾಳೆ.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಶ್ರೀ ಕಲಾ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಧಿ ಎಂ.ಎಸ್. ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಬೆಂಗಳೂರಿನ ಜನ್ಮ ಭೂಮಿ ಸಾಂಸ್ಕೃತಿಕ ನಾಗರಿಕ ವೇದಿಕೆಯಿಂದ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನೀಡುವ ತರಾಸು ಪ್ರಶಸ್ತಿಯನ್ನು ಕೊಡಗಿನ ಎಂ.ಎಸ್.ನಿಧಿ ಪಡೆದುಕೊಂಡಿದ್ದಾರೆ. ಬೆಂಗಳೂರಿನ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ನಿಧಿ ಎಂ.ಎಸ್. ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿಯ ಕಿಗ್ಗಾಲು ಗ್ರಾಮದ ನಿವಾಸಿ ಮೊಟ್ಟೆಮನೆ ಶ್ರೀಧರ್ ಮತ್ತು ರೈನಾ ದಂಪತಿಯ ಪುತ್ರಿ.

ದಬ್ಬಡ್ಕ ಬಿ. ರಮೇಶ ನಿಧನ



ನಾಪೋಕು, ಜ.4(ದುಗ್ಗಳ)–ಮೂಲತಃ ಚೆಟ್ಟಿಮಾನಿಯ ನಿವಾಸಿ ಪ್ರಸ್ತುತ ಮಡಿಕೇರಿ ಗೌಳಿಬೀದಿಯಲ್ಲಿ ನೆಲೆಸಿದ್ದ ದಬ್ಬಡ್ಕ ಬಿ. ರಮೇಶ (67) ಶನಿವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಡಿಕೇರಿಯ ಗೌಡ ರುದ್ರ ಭೂಮಿಯಲ್ಲಿ ನೆರವೇರಿಸಲಾಯಿತು.

ಒತ್ತಡಕ್ಕೊಳಗಾಗದೆ ನಿರಾಳ ಮನಸ್ಸಿನಿಂದ ಉತ್ತಮ ಕೆಲಸ ಮಾಡಿ



ವಿವಿಧ ಇಲಾಖೆಯಲ್ಲಿ ಉತ್ತಮ ಸಾಧನೆ ಮಾಡಿದ ಸಾಧಕ ನೌಕರರನ್ನು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಸನ್ಮಾನಿಸಿದರು.

ವಿರಾಜಪೇಟೆ, ಜ.4– ಸಮಸ್ಯೆಗಳ ಒತ್ತಡಕ್ಕೊಳಗಾಗದೆ ನಿರಾಳ ಮನಸ್ಸಿನಿಂದ ಉತ್ತಮ ಕೆಲಸ ಮಾಡುವಂತೆ ಶಾಸಕ ಎ.ಎಸ್.ಪೊನ್ನಣ್ಣ ಕಿವಿಮಾತು ಹೇಳಿದ್ದಾರೆ.

ಇಲ್ಲಿನ ಅಂಬೇಡ್ಕರ್ ಭವನದಲ್ಲಿ ನಡೆದ ತಾಲೂಕು ಸರ್ಕಾರಿ ನೌಕರರ ಸಂಘದ ಮಹಾಸಭೆ ಹಾಗೂ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರ ಸೇವೆ ಸುಲಭವಾದದ್ದಲ್ಲ. ಜನಸಾಮಾನ್ಯರ ಕೆಲಸ ಕಾರ್ಯದಲ್ಲಿರುವಾಗ ಜನರ ಟೀಕೆ ಇದ್ದೇ ಇರುತ್ತದೆ ಇದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಕಾರ್ಯ ನಿರ್ವಹಿಸಿಕೊಂಡು ಹೋಗಬೇಕೆಂದರು.

ಜನರ ಸಮಸ್ಯೆ ಬಗೆಹರಿಸಲು ಸಾಧ್ಯವಾಗದೆ ಹೋದಾಗ ಸಹಜವಾಗಿ ಆರೋಪಗಳು ಬರುತ್ತದೆ. ಅದರಿಂದ ಇಲಾಖೆಗಳಲ್ಲಿ ಎಲ್ಲವನ್ನು ಅರಿತುಕೊಂಡು ನಿಭಾಯಿಸಿಕೊಂಡು ಹೋಗಬೇಕು. ಜೊತೆಗೆ ಸೇವೆಯಲ್ಲಿ ತಮ್ಮ ತಮ್ಮಲ್ಲಿ ಮನಸ್ತಾಪ, ನೋವುಗಳು ಕಾಡುತ್ತದೆ. ಬಡ್ತಿ ವರ್ಗಾವಣೆ ವಿಚಾರದಲ್ಲಿ ಅದನ್ನು ಸಹಜ ರೀತಿಯಲ್ಲಿ ಅರ್ಥೈಸಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ವಿವಿಧ ಇಲಾಖೆಯಲ್ಲಿ ಉತ್ತಮ ಸಾಧನೆ ಮಾಡಿದ ಸಾಧಕ ನೌಕರರನ್ನು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿದರು. ಸಂಘದ ಅಧ್ಯಕ್ಷ ಕೆ.ಎಂ. ತಿಮ್ಮಯ್ಯ ಅಧ್ಯಕ್ಷತೆ ವಹಿಸಿದ್ದರು.

ವಿರಾಜಪೇಟೆ ಸರ್ವೆ ಇಲಾಖೆಯ ನಿರ್ದೇಶಕ ಬಾನಂಗಡ ಅರುಣ ತಮ್ಮ ಪ್ಲಾಂಟೇಶನ್ ಜಾಗದಲ್ಲಿ ಸರ್ಕಾರಿ ನೌಕರರು ಮತ್ತು ಸ್ಥಳೀಯರಿಗೆ ಮನೆ ನಿರ್ಮಾಣಕ್ಕೆ ಆಗತ್ಯವಾದ 7–10 ಸೆಂಟ್ ಜಾಗ ಪರಿವರ್ತನೆಗೆ ಕಾನೂನು ತೊಡಕಾಗಿದೆ. ಈ ಸಂಬಂಧ ಬರುವ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಾಗದಿರುವ ಸಮಸ್ಯೆ ಬಗ್ಗೆ ವಿವರಿಸಿದರು.

ಸಂಘದ ಖಜಾಂಚಿ ಎನ್.ಎಸ್. ಬಸವರಾಜು ಲೆಕ್ಕ ಪತ್ರವನ್ನು ಮಂಡಿಸಿದರು. ಕಾರ್ಯದರ್ಶಿ ಬಿ.ಟಿ.ದೇವರಾಜ್ ಶಾಸಕರಿಗೆ ಮನವಿ ಸಲ್ಲಿಸಿದರು.

ವೇದಿಕೆಯಲ್ಲಿ ರಾಜ್ಯ ಪರಿಷತ್ ಸದಸ್ಯ ಈ ಸುರೇಂದ್ರ ಮತ್ತು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಕ್ಷಕಿಯರಾದ ಡಿ.ಚಂದನ ಮತ್ತು ಸಿ.ಸಿ. ಭಾರತಿ ಕಾರ್ಯಕ್ರಮ ನಿರೂಪಿಸಿದರು.

ನಿರಾಶ್ರಿತ ವೃದ್ಧೆಗೆ ಸೂರು ಕಲ್ಪಿಸಿ ಮಾನವೀಯತೆ ತೋರಿದ ಲತೀಫ್



ಮಡಿಕೇರಿ, ಜ.4– ಮಾನವೀಯತೆ ಎಂಬುದು ದುರ್ಲಭವಾಗಿರುವ ಇಂದಿನ ದಿನದಲ್ಲಿ ತನ್ನ ಸ್ವಂತ ವೆಚ್ಚದಲ್ಲಿ ಸೂರು ಕಲ್ಪಿಸಿಕೊಟ್ಟು ಮಾನವೀಯತೆ ತೋರಿರುವ ಪ್ರಸಂಗವೊಂದು ಸೋಮವಾರಪೇಟೆ ತಾಲೂಕಿನಲ್ಲಿ ಬೆಳಕಿಗೆ ಬಂದಿದೆ.

ಅನಾರೋಗ್ಯಪೀಡಿತ ಪುತ್ರನೊಂದಿಗೆ ಆಶ್ರಯವಿಲ್ಲದೆ ಅತಿ ಬಡತನದಲ್ಲಿ ಜೀವನ ಸಾಗಿಸುತ್ತಿದ್ದ ವಯೋವೃದ್ಧೆಯೊಬ್ಬರಿಗೆ ಜಿ.ಪಂ ಮಾಜಿ ಸದಸ್ಯ ಪಿ.ಎಂ.ಲತೀಫ್ ಮನೆ ನಿರ್ಮಿಸಿಕೊಡುವ ಮೂಲಕ ಮಾನವೀಯತೆಯ ದ್ಯೋತಕವಾಗಿದ್ದಾರೆ.

ಮಳೆಗಾಲದ ಮಹಾಮಳೆಗೆ ಸೋಮವಾರಪೇಟೆ ತಾಲೂಕಿನ ಗರಗಂದೂರು ಗ್ರಾಮದ ಮಲ್ಲಿಕಾರ್ಜುನ ಕಾಲೋನಿಯ ನಿವಾಸಿ ವಯೋವೃದ್ಧೆ ಭೈರಿ ಅಜ್ಜಿ ಅವರ ಮನೆ ನೆಲಸಮಗೊಂಡು ಅತಂತ್ರ ಸ್ಥಿತಿಗೆ ಸಿಲುಕಿಕೊಂಡು ಪ್ಲಾಸ್ಟಿಕ್ ಹೊದಿಕೆಯ ಗುಡಿಸಿನಲ್ಲಿ ಜೀವನ ಸಾಗಿಸುತ್ತಿದ್ದರು. ಇಳಿ ವಯಸ್ಸಿನ ಭೈರಿ ಹಾಗೂ ಅನಾರೋಗ್ಯ ಪೀಡಿತ ಪುತ್ರ ವಿಶ್ವನಾಥ್ ಸಂಕಷ್ಟದ ಬದುಕು ಸಾಗಿಸುತ್ತಿರುವ ಚಿತ್ರಣ ಸಾಮಾಜಿಕ ಜಾಲತಾಣ ದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು.

ಇದನ್ನು ಗಮನಿಸಿದ ಪಿ.ಎಂ.ಲತೀಫ್ ಮಲ್ಲಿಕಾರ್ಜುನ ಕಾಲೋನಿಗೆ ಭೇಟಿ ನೀಡಿ ಕಣ್ಣೀರು ಹಾಕಿದ ಭೈರಿ ಅಜ್ಜಿಗೆ ಧೈರ್ಯ ತುಂಬಿ, ಆಕೆಗೆ ಕೊಟ್ಟ ಮಾತಿನಂತೆ 6 ತಿಂಗಳಲ್ಲಿ ಮನೆ ನಿರ್ಮಿಸಿಕೊಟ್ಟು, ಶಾಸಕ ಡಾ.ಮಂತರ್ ಗೌಡರ ಮೂಲಕ ಅಜ್ಜಿಗೆ ಮನೆ ಹಸ್ತಾಂತರಿಸಿದರು. ಅವರ ಸೇವಾ ಮನೋಭಾವವನ್ನು ಶಾಸಕರು ಹಾಗೂ ಗ್ರಾಮಸ್ಥರು ಶ್ಲಾಘಿಸಿದರು. ಸುಸಜ್ಜಿತವಾಗಿರುವ ನೂತನ ಮನೆಯನ್ನು ಪ್ರವೇಶ ಮಾಡಿದ ಭೈರಿ ಅಜ್ಜಿ ಹಾಗೂ ಪುತ್ರ ವಿಶ್ವನಾಥ್ ಭಾವುಕರಾದರು.

ಕೊಳವೆ ಬಾವಿ ಕೊರೆಯುವ ಸಾಮಗ್ರಿ ಬೆಲೆ ಏರಿಕೆ: ಪ್ರತಿಭಟನೆ



ಕೊಳವೆ ಬಾವಿ ಕೊರೆಯುವ ಸಾಮಗ್ರಿಗಳ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ಆರಂಭಿಸಲಾಯಿತು.

ಚಾಮರಾಜನಗರ, ಜ.4– ಕೊಳವೆ ಬಾವಿ ಕೊರೆಯುವ ಸಾಮಗ್ರಿಗಳ ಬೆಲೆ ಏರಿಕೆ ಖಂಡಿಸಿ ನಗರದಲ್ಲಿ ಚಾಮರಾಜನಗರ ಜಿಲ್ಲೆ, ತಾಳವಾಡಿ, ನಂಜನಗೂಡು, ತಿ.ನರಸಿಪುರ ತಾಲೂಕು ಬೋರ್ ಲಾರಿ ಮಾಲೀಕರು ಮತ್ತು ಏಜೆಂಟರು ಮುಷ್ಕರ ಆರಂಭಿಸಿದ್ದಾರೆ.

ನಗರದ ಹೊರವಲಯದ ಕೊಳ್ಳೇಗಾಲ ರಸ್ತೆಯ ಜಾಲಹುಂಡಿ ಬಳಿಯ ಜಮೀನೊಂದರಲ್ಲಿ ಬೋರ್‌ವೆಲ್ ಲಾರಿಗಳು ಹಾಗೂ ಸಾಮಗ್ರಿಗಳನ್ನು ಸಾಗಿಸುವ ಸುಮಾರು 30ಕ್ಕೂ ಹೆಚ್ಚು ಲಾರಿಗಳನ್ನು ನಿಲ್ಲಿಸಿ, ಲಾರಿ ಮಾಲೀಕರು ಮತ್ತು ಚಾಲಕರು ಪ್ರತಿಭಟನೆ ನಡೆಸಿದರು.

ಬೋರ್‌ವೆಲ್ ಕೊರೆಯಲು ಬಳಸುವ ಬಿಟ್, ಹ್ಯಾಮರ್, ರಾಡುಗಳು ಸೇರಿದಂತೆ ಇನ್ನಿತರ ಪದಾರ್ಥಗಳ ಬೆಲೆ ಇತ್ತೀಚಿನ ದಿನಗಳಲ್ಲಿ ಏರಿಕೆ ಮಾಡಲಾಗಿದೆ. ಇದರಿಂದ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು, ಹನೂರು ತಾಲೂಕು ವ್ಯಾಪ್ತಿ ಸೇರಿದಂತೆ ನೆರೆಯ ತಮಿಳುನಾಡು ರಾಜ್ಯದ ತಾಳವಾಡಿ, ಈರೋಡ್, ಸೇಲಂ ಸುತ್ತ ಮುತ್ತಲ ಗ್ರಾಮಗಳು ಹಾಗೂ ನಗರ ಪ್ರದೇಶದಲ್ಲಿ ಬೋರ್‌ವೆಲ್ ಕೊರೆಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದರಿಂದ ಬೋರ್‌ವೆಲ್ ಕೊರೆಯುವ ಉದ್ಯಮ ಮಾಡುತ್ತಿರುವ ಕಾರ್ಮಿಕರು, ಲಾರಿ ಚಾಲಕರು ಹಾಗೂ ಮಾಲೀಕರ ಜೀವನಕ್ಕೆ ತೊಂದರೆಯಾಗುತ್ತಿದೆ ಎಂದು ದೂರಿದರು.

ದಿನದಿಂದ ದಿನಕ್ಕೆ ಬೆಲೆ ಏರಿಕೆ ಆಗುತ್ತಿರುವುದರಿಂದ ಬೋರ್‌ವೆಲ್ ಉದ್ಯಮ ನಡೆಸುವುದೇ ಕಷ್ಟಕರವಾಗಿದೆ. ಕೂಡಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬೆಲೆ ಏರಿಕೆ ಮಾಡದೇ ಹಿಂದಿನ ಬೆಲೆಯನ್ನೇ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಚಾಮರಾಜನಗರ ಜಿಲ್ಲೆ ಸೇರಿದಂತೆ ತಾಳವಾಡಿ, ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕಿನ ಲಾರಿ ಚಾಲಕರು, ಮಾಲೀಕರು ಹಾಗೂ ಏಜೆಂಟರು ಪಾಲ್ಗೊಂಡಿದ್ದರು.

ಗುಂಡ್ಲುಪೇಟೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಕಣ್ಣಿನ ತಪಾಸಣಾ ಶಿಬಿರವನ್ನು ನ್ಯಾಯಾಧೀಶ ಬಸವರಾಜ ತಳವಾರ್ ಉದ್ಘಾಟಿಸಿದರು.


ಗುಂಡ್ಲುಪೇಟೆ, ಜ.4(ಸೋಮ್.ಜಿ)– ಆಧುನಿಕ ಜೀವನ ಶೈಲಿ ಹಾಗೂ ರಾಸಾಯನಿಕ ಬಳಸಿ ಬೆಳೆದ ಆಹಾರ ಸೇವನೆಯಿಂದ ಇತ್ತೀಚಿನ ದಿನಗಳಲ್ಲಿ ಜನತೆ ಕಣ್ಣಿನ ತೊಂದರೆ ಎದುರಿಸುವಂತಾಗಿದೆ ಎಂದು ಹಿರಿಯ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶ ಬಸವರಾಜ ತಳವಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ, ಅರವಿಂದ ಕಣ್ಣಿನ ಆಸ್ಪತ್ರೆ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ಡಿಜಿಟಲ್ ದಿನಗಳಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಮೊಬೈಲ್, ಟಿವಿ, ಲ್ಯಾಪ್‌ಟಾಪ್ ಬಳಕೆ ಮಾಡುತ್ತಿದ್ದು, ಕಣ್ಣಿನ ಮೇಲೆ ಒತ್ತಡ ಬೀಳುತ್ತಿದೆ. ಇದರಿಂದ ಕಣ್ಣಿನ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆರ್ಥಿಕವಾಗಿ ಸ್ಥಿತಿವಂತರು ಪಟ್ಟಣದ ಆಸ್ಪತ್ರೆಗಳಲ್ಲಿ ಹಣ ಕೊಟ್ಟು ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಗ್ರಾಮೀಣ ಹಾಗೂ ಬಡ ಜನತೆ ಆರ್ಥಿಕ ಸೌಕರ್ಯವಿಲ್ಲದ ಕಾರಣ ಕಣ್ಣಿನ ಆರೋಗ್ಯದ ಕಡೆ ಗಮನಹರಿಸಲು ಸಾಧ್ಯವಾಗದೇ ನಿರ್ಲಕ್ಷ್ಯ ವಹಿಸುತ್ತಾರೆ. ಇದರಿಂದಾಗಿ ಕಾಲ ಕಾಲಕ್ಕೆ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸೆ ಪಡೆಯದಿದ್ದರೆ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಬಡವರ ಪರವಾಗಿ ಉತ್ತಮ ಕೆಲಸ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಹೆಚ್ಚು ಕೆಲಸ ಮಾಡುವ ಶಕ್ತಿ ಸಿಗಲಿ ಎಂದು ಹಾರೈಸಿದರು.

ಅರವಿಂದ ಕಣ್ಣಿನ ಆಸ್ಪತ್ರೆ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಿ.ವಿಜಯಕಾಂತ್ ಮಾತನಾಡಿ, ರೆಟಿನೋಪತಿ ಹಾಗೂ ಸಕ್ಕರೆ ಕಾಯಿಲೆಯಿಂದ ಜನರಿಗೆ ಕಣ್ಣಿನ ಸಮಸ್ಯೆ ಹೆಚ್ಚಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ವೆಚ್ಚ ಹೆಚ್ಚಾಗುತ್ತಿದ್ದು, ಬಡ ಜನತೆ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭ ಸಂಘ ಸಂಸ್ಥೆಗಳು ಬಡ ಜನರ ಪರವಾಗಿ ನಿಂತು ಶಿಬಿರಗಳನ್ನು ಆಯೋಜಿಸಿ ಗ್ರಾಮೀಣ ಭಾಗದ ಬಡ ಜನತೆಯ ಕಣ್ಣಿನ ರಕ್ಷಣೆಗೆ ಮುಂದಾಗುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆ ಮಾಜಿ ಅಧ್ಯಕ್ಷ ನಾಗೇಂದ್ರ, ಗ್ರಾಪಂ ನೌಕರರ ಸಂಘದ ಜಿಲ್ಲಾಧ್ಯಕ್ಷ ಬರಗಿ ಸಿದ್ದರಾಜು, ಶಿಬಿರದ ಆಯೋಜಕ ಎಂ. ಶ್ರೀನಾಥ್, ಅನುಗ್ರಹ ಫೌಂಡೇಷನ್ ಸಂಯೋಜಕ ರಮೇಶ್, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಕೆ.ಎನ್.ಮಹದೇವಸ್ವಾಮಿ, ಜಿಲ್ಲಾ ಸಂಚಾಲಕ ರಾ.ಬಾಬು, ಎಂ.ಮಲ್ಲು, ವೀರಭದ್ರಪ್ಪ, ಭೈರೇಶ್, ಪ್ರಸಾದ್, ವೇಣು ಇದ್ದರು.

ಚಿಕ್ಕಲ್ಲೂರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ



ಚಿಕ್ಕಲ್ಲೂರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿದರು.

ಚಾಮರಾಜನಗರ, ಜ.4– ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರಿನ ಸಿದ್ದಪ್ಪಾಜಿ ದೇವಾಲಯಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಭಾನುವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಸಾರ್ವಜನಿಕರ ಕುಂದುಕೊರತೆ ವಿಚಾರಿಸಿ ಅಹವಾಲು ಆಲಿಸಿ ಮಾತನಾಡಿದ ಅವರು, ಬಸವಣ್ಣನವರ ಸಾಮಾಜಿಕ ಚಳವಳಿಯ ಹೊರಣ ಈ ಪ್ರದೇಶದಲ್ಲಿನ ನೀಲಗಾರರ ಪರಂಪರೆಯಲ್ಲಿ ಅಡಗಿದೆ. ರಾಚಪ್ಪಾಜಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ ಅವರು ಸಮಾಜದಲ್ಲಿ ಜಾಗೃತಿ ಮೂಡಿಸಿ ಬದಲಾವಣೆಗೆ ಶ್ರಮಿಸಿದ್ದಾರೆ. ಈ ನಿಟ್ಟಿನಲ್ಲಿ ಅವರು ಆರಂಭಿಸಿದ ಚಳವಳಿಯ ಕಿಡಿ ಆರದಂತೆ ನಾವು ನೋಡಿಕೊಳ್ಳಬೇಕಿದೆ ಎಂದರು.

ವಚನಕಾರರು, ಸಾಧಕರು ಮನುಕುಲದ ಉದ್ಧಾರಕ್ಕೆ ತ್ಯಾಗ ಮಾಡಿದ್ದಾರೆ. ಎಲ್ಲಾ ಸಮುದಾಯಗಳು ಒಟ್ಟಾಗಿ ಸಹೋದರರಂತೆ ಸೌಹಾರ್ದವಾಗಿ ಬದುಕುವ ಮೂಲಕ ವಚನಕಾರರ, ಸಾಧಕರ ಸಂದೇಶವನ್ನು ಕಾರ್ಯರೂಪಕ್ಕೆ ತರಬೇಕಿದೆ ಎಂದರು.

ಐತಿಹಾಸಿಕ ಸಂಗತಿಗಳನ್ನು ರಕ್ಷಿಸಲು ಹಾಗೂ ಭಕ್ತರಿಗೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಪ್ರಾಧಿಕಾರ ರಚನೆಯ ಉದ್ದೇಶವಾಗಿದೆ. ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಲಭ್ಯ ಒದಗಿಸುವುದೇ ಪ್ರಾಧಿಕಾರದ ಆದ್ಯತೆಯಾಗಿದೆ. ಚಿಕ್ಕಲ್ಲೂರು ಕ್ಷೇತ್ರ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಪಡಿಸುವುದು, ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗು ವುದು ಎಂದರು. ಈ ವೇಳೆ ಜಿಲ್ಲೆಯ ವಿವಿಧ ಮುಖಂಡರು ಇದ್ದರು.

ಡಿವೈಡರ್‌ಗೆ ಲಾರಿ ಡಿಕ್ಕಿ; ಚಾಲಕನಿಗೆ ಗಾಯ



ನಜ್ಜುಗುಜ್ಜಾಗಿರುವ ಲಾರಿ ಕಾಣಬಹುದು.

ಚಾಮರಾಜನಗರ, ಜ.4– ದಟ್ಟ ಮಂಜು ಹಿನ್ನೆಲೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಗಾಯಗೊಂಡು, ಲಾರಿ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿರುವ ಘಟನೆ ತಾಲೂಕಿನ ವೆಂಕಟಯ್ಯನ ಛತ್ರ ಗ್ರಾಮದ ಬಳಿ ಭಾನುವಾರ ಮುಂಜಾನೆ ನಡೆದಿದೆ.

ಘಟನೆಯಲ್ಲಿ ಚಾಲಕ ರಾಜಶೇಖರ್‌ಗೆ ಗಾಯವಾಗಿದ್ದು, ಚಿಕಿತ್ಸೆಗಾಗಿ ನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ತಮಿಳುನಾಡಿನ ತೂತುಕುಡಿಯಿಂದ ರದ್ದಿ ಪತ್ರಿಕೆಗಳನ್ನು ತುಂಬಿಕೊಂಡು ಟಾಟಾ (ಟಿಎನ್–46, ಡಬ್ಲ್ಯೂ 4676) ಈಚರ್‌ನಲ್ಲಿ ಬರುತ್ತಿದ್ದ ವೇಳೆ ಭಾನುವಾರ ಮುಂಜಾನೆ ದಟ್ಟ ಮಂಜು ಆವರಿಸಿದ್ದರಿಂದ ಚಾಲಕನಿಗೆ ರಸ್ತೆ ಸರಿಯಾಗಿ ಗೋಚರವಾಗದೇ ಗ್ರಾಮದ ಮುಖ್ಯ ರಸ್ತೆಯಲ್ಲಿದ್ದ ಡಿವೈಡರ್‌ಗೆ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಲಾರಿ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಚಾಲಕ ರಾಜಶೇಖರ್‌ಗೆ ಗಾಯವಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಸಂಚಾರ ಪೊಲೀಸ್ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ, ರಸ್ತೆ ಮಧ್ಯದಲ್ಲಿದ್ದ ಲಾರಿಯನ್ನು ತೆರವುಗೊಳಿಸಿ ಸುಗುಮ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಗ್ರಾಮಸ್ಥರ ಆಕ್ರೋಶ: ಗ್ರಾಮದಲ್ಲಿ ಅವೈಜ್ಞಾನಿಕವಾಗಿ ಡಿವೈಡರ್ ನಿರ್ಮಿಸಲಾಗಿದೆ. ಇದರಿಂದ ಆಗ್ಗಾಗ್ಗೆ ಅಪಘಾತಗಳು ನಡೆಯುತ್ತಿದ್ದು, ಹಲವರು ಗಾಯಗೊಂಡಿದ್ದಾರೆ. ಒಂದೆರೆಡು ಮಂದಿ ಸಾವನ್ನಪ್ಪಿದ್ದಾರೆ. ಹೀಗಾಗಿ ಗ್ರಾಮದ ರಸ್ತೆಯಲ್ಲಿರುವ ಡಿವೈಡರ್ ತೆರವುಗೊಳಿಸಬೇಕು. ಗ್ರಾಮದಲ್ಲಿ ವಾಹನ ಸಂಚಾರ ವೇಗಮಿತಿ ನಿಗದಿಗೊಳಿಸಿ, ಸಂಚಾರ ನಿಯಮ ಪಾಲನೆ ಮಾಡುವಂತೆ ವಾಹನ ಸವಾರರು, ಚಾಲಕರಿಗೆ ನಿರ್ದೇಶಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಅವಘಡಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದರು.

ಇಬ್ಬರು ಸರಗಳ್ಳರ ಬಂಧನ



ಗುಂಡ್ಲುಪೇಟೆ, ಜ.4(ಸೋಮ್.ಜಿ)– ಮಹಿಳೆಯ ಚಿನ್ನದ ಮಾಂಗಲ್ಯ ಸರ ಅಪಹರಿಸಿದ್ದ ಇಬ್ಬರು ಸರಗಳ್ಳರನ್ನು ಬಂಧಿಸುವಲ್ಲಿ ಗುಂಡ್ಲುಪೇಟೆ ಪಟ್ಟಣ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ನಂಜನಗೂಡಿನಲ್ಲಿ ವಾಸವಿದ್ದ ತಮಿಳುನಾಡು ಮೂಲದ ವಾಂಜಿನಾಥನ್ ಹಾಗೂ ಪ್ರಭಾರಕನ್ ಬಂಧಿತ ಆರೋಪಿಗಳು. ಇವರಿಂದ ಚಿನ್ನದ ಸರ ಸೇರಿದಂತೆ ಸುಮಾರು 8 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 2 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಶನಿವಾರ ಸಂಜೆ ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಎದುರಿನ ರಸ್ತೆಯಲ್ಲಿ ಪಲ್ಸರ್ ಬೈಕ್‌ನಲ್ಲಿ ಬಂದ ಸರಗಳ್ಳರು ವಾಯು ವಿಹಾರ ಮುಗಿಸಿ ಮನೆಗೆ ಹೋಗುತ್ತಿದ್ದ ಭಾರತಿ ಎಂಬುವರ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಗಳ ಪತ್ತೆಗೆ ಎಸ್‌ಪಿ ಮುತ್ತುರಾಜ್ ಮಾರ್ಗದರ್ಶನದಲ್ಲಿ ಪಟ್ಟಣದ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ತೆರಕಣಾಂಬಿ ಠಾಣೆ ಎಸ್‌ಐ ಮಹೇಶ್ ಹಾಗೂ ಸಂತೆಮರಹಳ್ಳಿ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಸಾಗರ್ ನೇತೃತ್ವದ ಪೊಲೀಸ್ ಸಿಬ್ಬಂದಿ ಒಳಗೊಂಡ 2 ತನಿಖಾ ತಂಡವನ್ನು ರಚಿಸಲಾಗಿತ್ತು. ಬಳಿಕ ಕಾರ್ಯಾಚರಣೆ ಕೈಗೊಂಡಿದ್ದ ಪೊಲೀಸರು ಭಾನುವಾರ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಆರೋಪಿಗಳನ್ನು ಬಂಧಿಸಿ ಬೈಕ್‌ಗಳು ಹಾಗೂ ಚಿನ್ನಾಭರಣ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಆರೋಪಿಗಳು ಈ ಹಿಂದೆ ಮೊಬೈಲ್, ಮನೆಗಳ್ಳತನ ಹಾಗೂ ಸರಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂದು ಪಟ್ಟಣ ಠಾಣೆ ಪೊಲೀಸರು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿ ಪುಟ್ಟರಾಜು, ಶಿವರಾಜ್, ಕಿಶೋರ್, ಬಂಟಪ್ಪ, ಮಹೇಶ್, ನಟೇಶ ಹಾಗೂ ಇತರರಿದ್ದರು.

ದಿನದರ್ಶಿಕೆ ಬಿಡುಗಡೆ



ಯಳಂದೂರು ತಾಲೂಕಿನ ಭೀಮಚೇತನ ಗ್ರಾಮೀಣಾಭಿವೃದ್ಧಿ ಸೇವಾ ಟ್ರಸ್ಟ್ ದಿನದರ್ಶಿಕೆಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಬಿಡುಗಡೆಗೊಳಿಸಿದರು. ಈ ವೇಳೆ ಮುಖಂಡ ಸಿದ್ದರಾಜು, ಟ್ರಸ್ಟ್ ಅಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಸಿ.ಸ್ವಾಮಿ, ಖಜಾಂಚಿ ಮಹದೇವಸ್ವಾಮಿ, ನಿರ್ದೇಶಕರಾದ ಪುಟ್ಟರಾಜು, ಜೈಗುರು, ಮಹೇಶ್, ಮಹದೇವಸ್ವಾಮಿ, ಮಹದೇವಯ್ಯ, ಜೆ.ಶ್ರೀನಿವಾಸ್, ಲಿಂಗರಾಜಮೂರ್ತಿ, ರೂಪೇಶ್, ರೇವಣ್ಣ, ಪರಶಿವಮೂರ್ತಿ ಸೇರಿದಂತೆ ಇತರರಿದ್ದರು.

ಕ್ಯಾಲೆಂಡರ್ ಬಿಡುಗಡೆ

ಗುಂಡ್ಲುಪೇಟೆ ತಾಲೂಕಿನ ಹಾಲಹಳ್ಳಿಯಲ್ಲಿ ಮಹಾಲಕ್ಷ್ಮಿ ಗ್ರೂಪ್ ಮಾಲೀಕ ಎನ್.ನಂದಕುಮಾರ್ ಹೊರ ತಂದಿರುವ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಬಿಡುಗಡೆಗೊಳಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಹೆಚ್.ಎಸ್.ದಿನೇಶ್, ಹೆಚ್.ಸಿ. ಪುರುಷೋತ್ತಮ್ ಇತರರಿದ್ದರು.



ಮೈಸೂರು ಮಿತ್ರ ಸೋಮವಾರ 5 ಜನವರಿ 2026

'ನಿಧಿ'ಗಾಗಿ ಬಲಿಯಾಗಲಿದ್ದ ಮಗು: ಅಧಿಕಾರಿಗಳಿಂದ ಕೊನೆ ಕ್ಷಣದಲ್ಲಿ ಬಚಾವ್!



ಬೆಂಗಳೂರು: ಗುಪ್ತ ನಿಧಿಗಾಗಿ ಗಂಡು ಮಗುವನ್ನು ಬಲಿ ಕೊಡಲು ಯತ್ನಿಸುತ್ತಿದ್ದ ವೇಳೆ ಮಾಹಿತಿ ಪಡೆದ ಅಧಿಕಾರಿಗಳು ಮಗುವನ್ನು ರಕ್ಷಿಸಿದ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಡೆದಿದೆ.

ನಿನ್ನೆ ವ್ಯಕ್ತಿಯೊಬ್ಬರ ಮನೆಯಲ್ಲಿ ಗುಪ್ತ ನಿಧಿಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು. ಮನೆಯ ಒಂದು ಸ್ಥಳದಲ್ಲಿ ಗುಂಡಿ ತೋಡಲಾಯಿತು. ಒಂದೂವರೆ ವರ್ಷದ ಮಗುವನ್ನು ಬಲಿಕೊಡಲು ಸಿದ್ಧಗೊಳಿಸಲಾಗಿತ್ತು. ಈ ಬಗ್ಗೆ ಅಪರಿಚಿತರು ಮಕ್ಕಳ ಕಲ್ಯಾಣ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಕೂಡಲೇ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸರು ಮನೆಗೆ ತಲುಪಿದ್ದಾರೆ. ಕೋಣೆಯ ಒಂದು ಸ್ಥಳದಲ್ಲಿ ಗುಂಡಿ ತೋಡಿ ಪ್ರಾರ್ಥನೆ ಮಾಡಲಾಗುತ್ತಿತ್ತು. ಪೊಲೀಸರು ಬಂದಾಗ ಆಚರಣೆಯನ್ನು ನಿಲ್ಲಿಸಲಾಯಿತು. ಬಲಿಕೊಡಲು ಸಜ್ಜಾಗಿದ್ದ ಮಗುವನ್ನು ವಶಪಡಿಸಿಕೊಳ್ಳಲಾಗಿದೆ. ಮಗುವನ್ನು ಮಕ್ಕಳ ಕಲ್ಯಾಣ ಕೇಂದ್ರಕ್ಕೆ ಕರೆದೊಯ್ಯಲಾಗಿದ್ದು, ಘಟನೆಯ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಭೀಕರ ಅಗ್ನಿಅವಘಡ

ರೈಲು ನಿಲ್ದಾಣದ ಪಾರ್ಕಿಂಗ್‌ನಲ್ಲಿದ್ದ 500 ದ್ವಿಚಕ್ರವಾಹನಗಳು ಸುಟ್ಟು ಭಸ್ಮ!



ತ್ರಿಶೂರ್: ಕೇರಳದ ತ್ರಿಶೂರ್ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಪ್ರದೇಶದಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಬೆಂಕಿಯ ಕೆನ್ನಾಲಿಗೆಗೆ ಪಾರ್ಕಿಂಗ್ ಪ್ರದೇಶದಲ್ಲಿದ್ದ ಸುಮಾರು 500 ದ್ವಿಚಕ್ರ ವಾಹನಗಳು ಸುಟ್ಟು ಭಸ್ಮವಾಗಿವೆ.

ಭಾನುವಾರ ಇಲ್ಲಿನ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಪ್ರದೇಶದಲ್ಲಿ ಸಂಭವಿಸಿದ ಬೆಂಕಿಯ ನಂತರ ಸುಮಾರು 500 ದ್ವಿಚಕ್ರ ವಾಹನಗಳು ಸುಟ್ಟು ಭಸ್ಮವಾಗಿವೆ ಎಂದು ಅಗ್ನಿಶಾಮಕ ಮತ್ತು ರಕ್ಷಣಾ ಸೇವಾ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 6.20 ರ ಸುಮಾರಿಗೆ ಪೇಯ್ಡ್-ಪಾರ್ಕಿಂಗ್ ಶೆಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬೆಳಿಗ್ಗೆ 6.40 ರ ಸುಮಾರಿಗೆ ತುರ್ತು ಕರೆ ಬಂದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕವರ್‌ನೊಂದಿಗೆ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನದ ಮೇಲೆ ಬಿದ್ದ ವಿದ್ಯುತ್ ತಂತಿಯಿಂದ ಬಂದ ಕಿಡಿ ಬೆಂಕಿಗೆ ಕಾರಣ ಎಂದು ಶಂಕಿಸಲಾಗಿದೆ. ಶೆಡ್‌ನಲ್ಲಿ ಸುಮಾರು 500 ದ್ವಿಚಕ್ರ ವಾಹನಗಳು ನಿಂತಿದ್ದವು ಮತ್ತು ಅವುಗಳಲ್ಲಿ ಹೆಚ್ಚಿನವು ಸುಟ್ಟು ಭಸ್ಮವಾಗಿವೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ವಿಚಾರ ತಿಳಿದಕೂಡಲೇ ಐದು ಅಗ್ನಿಶಾಮಕ ದಳಗಳನ್ನು ನಿಯೋಜಿಸಲಾಯಿತು ಮತ್ತು ಬೆಳಿಗ್ಗೆ 7.45 ರ ಸುಮಾರಿಗೆ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಯಿತು. ಬೆಂಕಿ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳಿಗೆ ಹರಡದಂತೆ ಮತ್ತು ಹೆಚ್ಚಿನ ಹಾನಿಯಾಗದಂತೆ ತಡೆಯಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂತೆಯೇ ಅಗ್ನಿ ಅವಘಡ ಸಂಭವಿಸಿದ ಸ್ಥಳದ ಬಳಿ ರೈಲ್ವೆಹಳಿಯಲ್ಲಿ ಒಂದು ಲೋಕೋಮೋಟಿವ್ ನಿಲ್ಲಿಸಲಾಗಿದ್ದರೂ, ಅದಕ್ಕೆ ಯಾವುದೇ ದೊಡ್ಡ ಹಾನಿಯಾಗಿಲ್ಲ ಎಂದು ರೈಲ್ವೆ ದೃಢಪಡಿಸಿದೆ ಎಂದು ಹೇಳಿದ್ದಾರೆ.

ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ, ಟಿನ್ ಶೀಟ್‌ಗಳಿಂದ ಆವೃತವಾದ ಸಂಪೂರ್ಣ ಶೆಡ್ ಬೆಂಕಿಯಲ್ಲಿ ಹಾನಿಯಾಗಿದೆ. ಬೆಂಕಿಗೆ ನಿಖರವಾದ ಕಾರಣವನ್ನು ಕಂಡುಹಿಡಿಯಲು ಪೊಲೀಸರು ಮತ್ತು ರೈಲ್ವೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಅಗ್ನಿಶಾಮಕ ಘಟನೆಗೆ ಸಂಬಂಧಿಸಿದಂತೆ ತ್ರಿಶೂರ್ ಪಶ್ಚಿಮ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಎಫ್‌ಐಆರ್ ಪ್ರಕಾರ, ಸುಮಾರು 500 ದ್ವಿಚಕ್ರ ವಾಹನಗಳು ಬೆಂಕಿಯಲ್ಲಿ ಸುಟ್ಟುಹೋಗಿವೆ, ಜೊತೆಗೆ ರೈಲ್ವೆ ನಿಲ್ದಾಣದ ಪಶ್ಚಿಮ ಭಾಗದಲ್ಲಿ ಪಾರ್ಕಿಂಗ್ ಸೌಲಭ್ಯವನ್ನು ನಿರ್ವಹಿಸುವ ಗುತ್ತಿಗೆಯನ್ನು ಹೊಂದಿರುವ ಅಶ್ವಥಿ ಎಂಟರ್‌ಪ್ರೈಸಸ್‌ಗೆ ಸೇರಿದ ಪಾರ್ಕಿಂಗ್ ಶುಲ್ಕ ಮುದ್ರಣ ಯಂತ್ರವೂ ಸುಟ್ಟುಹೋಗಿದೆ.

ಸಾಲು ಮರದ ತಿಮ್ಮಕ್ಕನವರಂತೆ ಗಿಡಗಳ ನೆಟ್ಟು ಪರಿಸರ ಉಳಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ



ಬೆಂಗಳೂರು : ಮುಖ್ಯಮಂತ್ರಿಯಾಗಿ 8ನೇ ಬಾರಿಗೆ ಚಿತ್ರ ಸಂತೆಯಲ್ಲಿ ಭಾಗವಹಿಸುತ್ತಿದ್ದೇನೆ ಎನ್ನುವುದು ಖುಷಿಯ ವಿಚಾರ. ಕಲಾವಿದರನ್ನು ಪ್ರೋತ್ಸಾಹಿಸುವುದು, ಅವರ ಚಿತ್ರಗಳ ಪ್ರದರ್ಶನ ಹಾಗೂ ಅವುಗಳ ಮಾರಾಟಕ್ಕೆ ವೇದಿಕೆ ಸೃಷ್ಟಿ ಮಾಡುವ ಕೆಲಸವನ್ನು ಚಿತ್ರಕಲಾ ಪರಿಷತ್ತು ಅರವತ್ತು ವರ್ಷಗಳಿಂದ ಮಾಡುತ್ತಾ ಬಂದಿದೆ. ಚಿತ್ರಸಂತೆ ತನ್ನ 23ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸದ ಸಂಗತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ ಆವರಣದಲ್ಲಿ ಇಂದು ನಡೆದ 23ನೇ ಚಿತ್ರಸಂತೆ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಮಾರು 22 ರಾಜ್ಯಗಳು, ನಾಲ್ಕು ಕೇಂದ್ರಾಡಳಿತ ಪ್ರದೇಶಗಳ ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಸಾಧಕರ ವಸ್ತುಸಂಗ್ರಹಾಲಯಕ್ಕೆ ಬೇಡಿಕೆಯಿದ್ದು, ಸರ್ಕಾರ ಅದನ್ನು ಸಕಾರಾತ್ಮಕವಾಗಿ ಸ್ವೀಕಾರ ಮಾಡಲಿದೆ ಎಂದರು.

ಪರಿಸರ ಉಳಿಸಿ, ಬೆಳೆಸಿ: ಈ ಬಾರಿಯ ಚಿತ್ರಸಂತೆಯ ಧ್ಯೇಯ ವಾಕ್ಯ ಪರಿಸರಕ್ಕೆ ಸಮರ್ಪಿಸಲಾಗಿದೆ. ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅದಕ್ಕಾಗಿ ಪರಿಸರದ ಬಗ್ಗೆ ಜ್ಞಾನ ಅಗತ್ಯ. ಈ ಕುರಿತು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಂಗಳೂರು ಸೇರಿದಂತೆ ದೇಶದ ಅನೇಕ ರಾಜಧಾನಿಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗಿದ್ದು, ದೆಹಲಿಯಲ್ಲಿ ಬದುಕಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗುತ್ತಿದೆ. ಪರಿಸರದ ರಕ್ಷಣೆ ಇಂದಿನ ಅಗತ್ಯವಾಗಿದೆ ಎಂದರು.

ಪ್ರತಿ ವರ್ಷ ಮೂರರಿಂದ ಐದು ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಯಾವುದೇ ಪ್ರದೇಶದಲ್ಲಿ ಶೇ. 30ರಷ್ಟು ಕಾಡು ಇರಬೇಕು. ನಮ್ಮಲ್ಲಿ ಶೇಕಡ 20ರಷ್ಟು ಅರಣ್ಯ ಪ್ರದೇಶವಿದೆ. ಇದನ್ನು ಹೆಚ್ಚು ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಎಂದರು.

ಸಾಲು ಮರದ ತಿಮ್ಮಕ್ಕನವರಂತೆ ಗಿಡ ನೆಟ್ಟು ಬೆಳೆಸಿ: ಸಾಲು ಮರದ ತಿಮ್ಮಕ್ಕನವರಂತೆ ಸಾರ್ವಜನಿಕರು ಗಿಡಗಳನ್ನು ನೆಡಬೇಕು. ಮಕ್ಕಳನ್ನು ಸಾಕಿದಂತೆ ಗಿಡಮರಗಳನ್ನು ಅವರು ಸಾಕಿದ್ದ ಕಾರಣ ಹಲವು ಪ್ರಶಸ್ತಿಗಳು ದೊರೆಯಿತು. ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಾವೆಲ್ಲರೂ ಗಿಡ ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಪರಿಸರ ರಕ್ಷಣೆಗಾಗಿ ಹೋರಾಟವನ್ನೇ ಕೈಗೊಂಡ ಅನೇಕರು ನಮ್ಮ ನಡುವೆಯೇ ಇದ್ದಾರೆ. ಗಿಡ ನೆಡಲು ಬಹಳ ಖರ್ಚು ಆಗುವುದಿಲ್ಲ. ಮನಸ್ಸು ಮಾಡಬೇಕಷ್ಟೆ. ಸರ್ಕಾರ ಕೂಡ ಈ ದಿಕ್ಕಿನಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿದೆ ಎಂದರು.

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಿರ್ಲಕ್ಷ್ಯದಿಂದ ಲಾರಿಯನ್ನು ರಿವರ್ಸ್ ತೆಗೆದ ಚಾಲಕ

ಬೈಕ್ ಸವಾರ ಸ್ಥಳದಲ್ಲೇ ಸಾವು



ಮೃತ ಬಸವರಾಜು



ಲಾರಿ ಚಕ್ರಕ್ಕೆ ಸಿಲುಕಿರುವ ಬೈಕ್ ಸವಾರ

ಹೆಚ್.ಡಿ.ಕೋಟೆ: ಚಾಲಕನ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಲಾರಿಯನ್ನು ರಿವರ್ಸ್ ಚಾಲನೆ ಮಾಡಿದ್ದರಿಂದ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಗಂಡತೂರು ಬಳಿ ಸಂಭವಿಸಿದೆ.

ತಾಲೂಕಿನ ಹೊಸಹಳ್ಳಿ ಗ್ರಾಮದ ಬುಡಕಟ್ಟು ಸಮುದಾಯದ ಬಸವರಾಜು(27) ಮೃತ ದುರ್ದೈವಿ.

ತಾಲೂಕಿನಲ್ಲಿ ಖರೀದಿಸಿದ ಶುಂಠಿ ತುಂಬಿಕೊಂಡು ಹೋಗುತ್ತಿದ್ದ ಕೇರಳದ ಮೂಲದ ಲಾರಿ ತಾಲೂಕಿನ ಗಂಡತೂರು ಮುಖ್ಯ ರಸ್ತೆ ಬಸವೇಶ್ವರ ದೇವಸ್ಥಾನದ ಹತ್ತಿರ ನಿಂತಿತ್ತು. ಬಸವರಾಜು ಬೈಕ್‌ನಲ್ಲಿ ದೇವಸ್ಥಾನದ ಹತ್ತಿರ ಬರುತ್ತಿದ್ದ ವೇಳೆ ಲಾರಿಯ ಹಿಂಭಾಗ ಬೈಕ್ ನಿಲ್ಲಿಸಿ ಅಲ್ಲಿ ಸಿಕ್ಕಿದ ಸ್ನೇಹಿತನ ಜೊತೆ ಮಾತನಾಡುತ್ತಿದ್ದರು. ಈ ವೇಳೆ ಲಾರಿಯ ಚಾಲಕ ರಿವರ್ಸ್ ತೆಗೆದಿದ್ದು, ಹಿಂಬದಿ ನಿಂತಿದ್ದ ಬೈಕ್ ಸವಾರನ ಮೇಲೆ ಹರಿದಿದೆ. ಅಲ್ಲಿದ್ದ ಗ್ರಾಮಸ್ಥರು ಹಿಂಬದಿ ಬೈಕ್ ಇದೆ ಎಂದು ಕೂಗಿದರೂ ಲಾರಿ ಚಾಲಕನ ಅಜಾಗ್ರತೆಯಿಂದ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದು, ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.

ಸ್ಥಳೀಯರ ಸಹಕಾರದಿಂದ ಲಾರಿ ಚಕ್ರಕ್ಕೆ ಸಿಲುಕಿದ ಯುವಕನನ್ನು ಹೊರ ತೆಗೆಯಲಾಯಿತು. ಆದರೆ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಗ್ರಾಮಸ್ಥರು ಅಂತರಸಂತೆ ಪೊಲೀಸ್‌ರಿಗೆ ಮಾಹಿತಿ ನೀಡಿ ಮೃತರ ಕುಟುಂಬದವರಿಗೆ ತಿಳಿಸಿದರು. ತಕ್ಷಣ ಸ್ಥಳಕ್ಕೆ ಆಗಮಿಸಿದ ಅಂತರ ಸಂತೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಹೆಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಅಂತರಸಂತೆ ಪೊಲೀಸರು ಲಾರಿಯನ್ನು ವಶಕ್ಕೆ ಪಡೆದು, ತಲೆಮರೆಸಿಕೊಂಡಿರುವ ಚಾಲಕನನ್ನ ಪತ್ತೆ ಹಚ್ಚಲು ಮುಂದಾಗಿದ್ದಾರೆ.

ಸರಗೂರಲ್ಲಿ ವೈಭವದ ಹನುಮ ಜಯಂತಿ ಶೋಭಾಯಾತ್ರೆ

ಮೊಳಗಿದ ಹನುಮ ಘೋಷಣೆ, ಕೇಸರಿಮಯವಾಗಿದ್ದ ಪಟ್ಟಣ





ಸರಗೂರಿನಲ್ಲಿ ಭಾನುವಾರ ಶ್ರೀ ಹನುಮಜಯಂತಿ ಆಚರಣಾ ಸಮಿತಿಯಿಂದ ಹನುಮ ಜಯಂತಿ ಉತ್ಸವದ ಶೋಭಾಯಾತ್ರೆ ವಿಜೃಂಭಣೆಯಿಂದ ಜರುಗಿತು. ಈ ವೇಳೆ ಶೋಭಾಯಾತ್ರೆಯಲ್ಲಿ ವಿವಿಧ ಕಲಾತಂಡಗಳು ಪ್ರದರ್ಶನ ನೀಡಿದವು.

ಸರಗೂರು, ಜ.4– ಹಿಂದೂ ಸಂಘಟನೆಗಳ ಜಾಗೃತಿಗಾಗಿ ಪಟ್ಟಣದ ಶ್ರೀ ಹನುಮ ಜಯಂತಿ ಆಚರಣಾ ಸಮಿತಿ ಭಾನುವಾರ ಆಯೋಜಿಸಿದ್ದ ಹನುಮ ಜಯಂತಿ ಶೋಭಾಯಾತ್ರೆ ವಿಜೃಂಭಣೆಯಿಂದ ಜರುಗಿತು. ದಾರಿಯುದ್ದಕ್ಕೂ ಭಗವಾನ್ ಹನುಮನ ಘೋಷಣೆ ಮೊಳಗಿದವು.

ಶೋಭಾಯಾತ್ರೆ ಅಂಗವಾಗಿ ಪಲ್ಲಕ್ಕಿಯಲ್ಲಿ ಕೂರಿಸಿದ್ದ ಹನುಮಂತನ ಭಾವಚಿತ್ರಕ್ಕೆ ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ, ಪಡುವಲು ವಿರಕ್ತಮಠದ ಮಹಾದೇವ ಸ್ವಾಮೀಜಿ, ಭರತೇಶ್ ಗುರೂಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಸರಗೂರು ತಾಲೂಕು ಅಧ್ಯಕ್ಷ ಕೆ.ಎಂ.ವೀರಭದ್ರಪ್ಪ, ಡಾ.ರಾಜೇಂದ್ರ ಮಹಾಸ್ವಾಮಿಗಳ ಭಕ್ತ ಬಳಗದ ಗೌರವಾಧ್ಯಕ್ಷ ಡಿ.ಜಿ.ಶಿವರಾಜು, ಬಸವ ಬಳಗದ ಅಧ್ಯಕ್ಷ ಹಂಚೀಪುರ ಗಣಪತಿ, ಮುಖಂಡರಾದ ಜಯಪ್ರಕಾಶ್, ಆಚರಣಾ ಸಮಿತಿ ಅಧ್ಯಕ್ಷ ನವೀನ್‌ಕುಮಾರ್ ಸೇರಿದಂತೆ ಮುಖಂಡರು ಪುಷ್ಪಾರ್ಚನೆ ಮಾಡುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಪಟ್ಟಣದ ಕೆಇಬಿ ಕಚೇರಿಯಿಂದ ಹೊರಟ ಶೋಭಾಯಾತ್ರೆ ಮೆರವಣಿಗೆಯು ಹೆಚ್.ಬಿ. ರಸ್ತೆ ಮಾರ್ಗವಾಗಿ ಬಸ್ ನಿಲ್ದಾಣ, ಮಹಾವೀರ ವೃತ್ತ, ಚಿಕ್ಕದೇವಮ್ಮನ ವೃತ್ತ, ಮೂಲಕ 2ನೇ ಮುಖ್ಯ ರಸ್ತೆಯಲ್ಲಿ ಸಾಗಿ ಸಂತೆಮಾಳದ ಮಾಸ್ತಮ್ಮನ ದೇವಸ್ಥಾನದಲ್ಲಿ ಸಮಾವೇಶಗೊಂಡಿತು.

ಪಟ್ಟಣದ ಪ್ರಮುಖ ಬೀದಿಗಳು ಕೇಸರಿಮಯವಾಗಿತ್ತು. ಹನುಮನ ಭಕ್ತರ ಕೈಯಲ್ಲಿ ಕೇಸರಿ ಬಾವುಟಗಳು ರಾರಾಜಿಸಿದವು. ಇದಲ್ಲದೆ ಭಕ್ತರು ಹನುಮನ ಧ್ಯಾನ, ಶ್ಲೋಕಗಳನ್ನು ಪಠಣ ಮಾಡಿ, ವಿವಿಧ ಘೋಷಣೆ ಕೂಗುತ್ತಾ ದಾರಿಯುದ್ದಕ್ಕೂ ಜೈಕಾರ ಹಾಕಿದರು. ವಾದ್ಯಗೋಷ್ಠಿಗಳು ಮೊಳಗಿದವು. ಹಳೆ ಹೆಗ್ಗುಡಿಲು ನೀಲಕಂಠ ತಂಡದಿಂದ ವೀರಗಾಸೆ ನೃತ್ಯ ಪ್ರದರ್ಶನವಾಯಿತು. ಅಲ್ಲಲ್ಲಿ ಮಜ್ಜಿಗೆ, ಪಾನಕ ವಿತರಿಸಲಾಯಿತು. ಇದರೊಂದಿಗೆ ಭಾವೈಕ್ಯತೆಗಾಗಿ ಮುಸ್ಲಿಂ ಬಾಂಧವರೂ ಹನುಮ ಭಕ್ತರಿಗೆ ಮಜ್ಜಿಗೆ ವಿತರಣೆ ಮಾಡಿದ್ದು, ವಿಶೇಷವಾಗಿತ್ತು.

ಮುಖಂಡರಾದ ಜಯಪ್ರಕಾಶ್ ಮಾತನಾಡಿ, ಎಲ್ಲರೂ ಒಗ್ಗೂಡಿ ಹನುಮನ ಜಯಂತಿ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಸದೃಢ, ಸಮಾನತೆ ಭಾರತವನ್ನು ನಿರ್ಮಾಣ ಮಾಡುವ ಜವಾಬ್ದಾರಿ ಯುಕವಕರ ಮೇಲಿದೆ. ಹೀಗಾಗಿ ಎಲ್ಲರೂ ಶ್ರಮಿಸಬೇಕು. ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಎಚ್ಚರವಹಿಸಿದರೆ ಒಳಿತು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ವಿನಯ್, ನೂರಾಳಸ್ವಾಮಿ, ಉಮಾ ರಾಮಚಂದ್ರ, ಮಾಜಿ ಮೇಯರ್ ಶಿವಕುಮಾರ್, ಮೈಸೂರು ರಕ್ಷಣಾ ವೇದಿಕೆಯ ಅಧ್ಯಕ್ಷ ಮೈಕಾ ಪ್ರೇಮ್ ಕುಮಾರ್, ಮುಖಂಡರಾದ ಮೊತ್ತ ಬಸವರಾಜಪ್ಪ, ಬಿಜೆಪಿ ಟೌನ್ ಅಧ್ಯಕ್ಷ ಚನ್ನಪ್ಪ, ಸಿ.ಕೆ.ಗಿರೀಶ್, ಹಂಚೀಪುರ ಗುರುಸ್ವಾಮಿ, ಮುಖಂಡರಾದ ದಡದಹಳ್ಳಿ ಡಿ.ಜಿ.ಶಿವರಾಜು, ಭಜರಂಗಿ ರಾಮು, ಗುರುಸ್ವಾಮಿ, ರವಿಕುಮಾರ್, ಮಂಜುನಾಥ್, ಗೋಬಿರಂಗ ಸ್ವಾಮಿ, ಶಿವಕುಮಾರ್, ಚಿಕ್ಕದೇವಮ್ಮ ಬೆಟ್ಟದ ಪಾರುಪತ್ತೇದಾರ ಶಾಂತಿಪುರ ಮಹದೇವ ಸ್ವಾಮಿ, ನಂಜಪ್ಪ, ಬಸವರಾಜು, ಆನಂದ ಮೈಲಾರಿ, ಉಮೇಶ್, ಅಭಿ, ರಮೇಶ್, ನವೀನ್, ಶ್ರೀವತ್ಸ ಶೇಷ, ಶ್ರೀನಾಥ್, ಬಂಕವಾಡಿ ಶ್ರೀಪಾಲ್ ಸ್ಯಾಂಡಿ, ಆರ್ಯ ಮಹೇಶ್, ಪೇಂಟ್‌ನಾಗರಾಜು, ಬಿಡುಗಲು ರಾಜು, ಫೈನಾನ್ಸ್ ಎಸ್.ಎ.ನಾಗೇಂದ್ರ, ಎಸ್.ಎಚ್.ರಮೇಶ್, ಜಯಂತ್, ಮುತ್ತಣ್ಣ, ಸಂತೋಷ್, ರೂಪೇಶ್, ಮಹೇಶ್, ಕನ್ನಡ ಪ್ರಮೋದ್ ಸೇರಿದಂತೆ ಪಟ್ಟಣ ಪಂಚಾಯಿತಿ ಸದಸ್ಯರು, ಸಮಿತಿ ಸದಸ್ಯರು, ಮುಖಂಡರು ಹಾಜರಿದ್ದರು. ಶೋಭಾಯಾತ್ರೆ ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸರಗೂರು ಸಿಪಿಐ ಪ್ರಸನ್ನಕುಮಾರ್, ಪಿಎಸ್ಐ ಆರ್.ಕಿರಣ್, ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಮೂಗೂರು ಜಾತ್ರೆಯಲ್ಲಿ ವೈಭವದ ಹೂವಿನ ಪಲ್ಲಕ್ಕಿ ಉತ್ಸವ

ನಡೆಯದ ತೆಪ್ಪೋತ್ಸವ, ಭಕ್ತರಲ್ಲಿ ಮತ್ತೆ ನಿರಾಸೆ





ತೆಪ್ಪೋತ್ಸವದ ದಿನ ಭಾನುವಾರ ರಾತ್ರಿ ನಡೆದ ಅಲಂಕೃತ ಹೂವಿನ ಪಲ್ಲಕ್ಕಿ ಉತ್ಸವ.

ಮೂಗೂರು, ಜ.4– ಇಲ್ಲಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಹೂವಿನ ಪಲ್ಲಕ್ಕಿ ಉತ್ಸವ ಭಾನುವಾರ ರಾತ್ರಿ ಮೂಗೂರಿನಲ್ಲಿ ಸಹಸ್ರಾರು ಮಂದಿ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ತೆಪ್ಪೋತ್ಸವ ಅಂಗವಾಗಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ಉತ್ಸವ ಮೂರ್ತಿಯನ್ನು ಆಭರಣಗಳಿಂದ ಶೃಂಗಾರಗೊಳಿಸಿ ವಿವಿಧ ಬಗೆಯ ಹೂಗಳಿಂದ ಅಲಂಕೃತವಾದ ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ರಾತ್ರಿ 8ರ ಸಮಯದಲ್ಲಿ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ಪೂಜೆ ಸಲ್ಲಿಸಿದ ನಂತರ ಹೂವಿನ ಪಲ್ಲಕ್ಕಿ ಉತ್ಸವು ಆಕರ್ಷಕ ಪೂಜಾ ಕುಣಿತ, ಕಲಾ ತಂಡಗಳಿಂದ ವಾದ್ಯಗೋಷ್ಠಿಯಲ್ಲಿ ಪ್ರಮುಖ ಬೀದಿಗಳಲ್ಲಿ ಸಾಗಿತು. ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ನೂತನ ಕಲ್ಯಾಣಿ ಬಳಿ ಅಮ್ಮನವರಿಗೆ ಪೂಜೆ ಸಲ್ಲಿಸಲಾಯಿತು.

ಗ್ರಾಮದಲ್ಲಿ ನೂತನ ಕಲ್ಯಾಣಿ ನಿರ್ಮಿಸಿ 4 ವರ್ಷಗಳು ಕಳೆದರೂ ಗ್ರಾಮಸ್ಥರ ನಿರಾಸಕ್ತಿಯಿಂದ ಗ್ರಾಮದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯಬೇಕಿದ್ದ ತೆಪ್ಪೋತ್ಸವ ಈ ಬಾರಿಯೂ ನಡೆಯದ ಹಿನ್ನೆಲೆಯಲ್ಲಿ ಶ್ರೀ ತ್ರಿಪುರ ಸುಂದರಿ ಅಮ್ಮ ನವರ ಭಕ್ತರಲ್ಲಿ ಮತ್ತೆ ನಿರಾಸೆ ಮೂಡಿಸಿದೆ. ಈಗಿನ ಕಲ್ಯಾಣಿಯಲ್ಲಿಯೇ ಪರ್ಯಾಯ ಯೋಜನೆ ರೂಪಿಸಿ ತೆಪ್ಪೋತ್ಸವ ಮಾಡಲು ಹಿಂದೆ ಸರಿದ ತಾಲೂಕು ಆಡಳಿತ ಮುಂದಿನ ಬಾರಿಯಾದರೂ ತೆಪ್ಪೋತ್ಸವ ನಡೆಸಲು ಮುಂದಾಗುವರೇ ಎಂಬುದನ್ನು ತಿಬ್ಬಾದೇವಿ ಅಮ್ಮ ನವರೇ ಕಾದು ನೋಡಬೇಕಿದೆ.

ಗ್ರಾಮದಲ್ಲಿ ಸೋಮವಾರ ಜರುಗಲಿರುವ ರಥೋತ್ಸವದ ಅಂಗವಾಗಿ ಗ್ರಾಮದಲ್ಲಿ ಭಾನುವಾರ ಸಂಜೆ ತಿ.ನರಸೀಪುರ ಪೊಲೀಸ್ ಇನ್‌ಸ್ಪೆಕ್ಟರ್ ಧನಂಜಯ ಅವರ ನೇತೃತ್ವದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪೊಲೀಸ್ ಪಥಸಂಚಲನ ನಡೆಸಿದರು.

ಸ್ವಚ್ಛತೆಗೆ ಒತ್ತು ನೀಡಿದ ಗ್ರಾಪಂ: ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ರೇಣುಕ ಅವರ ಕಾರ್ಯಕ್ಷಮತೆಯಿಂದ ಗ್ರಾಮದಲ್ಲಿ ಜರುಗಲಿರುವ ಜಾತ್ರೆ ಸಂದರ್ಭದಲ್ಲಿ ಸ್ಥಳೀಯ ಗ್ರಾಪಂ ಆಡಳಿತ ನಿರಂತರವಾಗಿ ಸ್ವಚ್ಛತೆಗೆ ಈ ಬಾರಿ ಹೆಚ್ಚಿನ ಒತ್ತು ನೀಡಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಾರೆ.

ಇಂದು ಗಾವಡಗೆರೆಯಿಂದ ಮಹದೇಶ್ವರಬೆಟ್ಟಕ್ಕೆ ಪಾದಯಾತ್ರೆ



ಹುಣಸೂರು.ಜ.4– ತಾಲೂಕಿನ ಗಾವಡಗೆರೆಯಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ 10ನೇ ವರ್ಷದ ಪಾದಯಾತ್ರೆಯನ್ನು ಜ.5ರಿಂದ ಹಮ್ಮಿಕೊಳ್ಳಲಾಗಿದೆ ಎಂದು ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ ತಿಳಿಸಿದ್ದಾರೆ.

ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಠದ ಭಕ್ತರು ಬೆಟ್ಟದ ಬಳಗದವರು ಸೇರಿ ಪ್ರತಿ ವರ್ಷದಂತೆ ಪಾದಯಾತ್ರೆ ಮಾಡಲಿದ್ದು ಪ್ರಾರಂಭದಲ್ಲಿ ಸಾವಿರಕ್ಕೂ ಹೆಚ್ಚು ಭಕ್ತರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದು ಪಾದಯಾತ್ರೆಯ ಉದ್ದಕ್ಕೂ 4 ಸಾವಿರಕ್ಕೂ ಹೆಚ್ಚು ಭಕ್ತರು ಪಾದಯಾತ್ರೆಯಲ್ಲಿ ಸೇರಿಕೊಳ್ಳಲಿದ್ದಾರೆ ಎಂದರು.

ಈ ಪಾದಯಾತ್ರೆಯ ಉದ್ದೇಶವೇನೆಂದರೆ ಒತ್ತಡಗಳ ಬದುಕು ದೂರವಾಗಿ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಮನುಷ್ಯ ವ್ಯಾಪ್ರ ಬಿಟ್ಟು ಮನಸ್ಸಿಗೆ ಸಂತೋಷ ತಂದುಕೊಡುವ ಪಾದಯಾತ್ರೆಯಾಗಿದೆ ಕ್ರಿಯೆ, ಕಾಯ, ವಾಚ, ಮನಸ್ಸು ಸಿದ್ಧಿ ಪಡೆಯಲು ಮನೆತನ ಉದ್ಧಾರವಾಗಿ ಈ ಭಾಗದ ಕೃಷಿಕ ಸಮಾಜಕ್ಕೆ ರೈತರಿಗೆ ಫಲಪ್ರದವಾಗಲಿ ನಿಮ್ಮ ಬಾಳು ಬೆಳಗಲಿ ಎಂದು ಎಲ್ಲಾ ರೀತಿಯ ಅನುಕೂಲವಾಗಲಿ ಎಂದು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ರಾತ್ರಿ ವಾಸ್ತವ್ಯ ಸ್ಥಳಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಊಟದ ವ್ಯವಸ್ಥೆ, ಆಯಾಯ ಬಾಗದಲ್ಲಿ ಅಚ್ಚುಕಟ್ಟಾಗಿ ಮಾಡಲಾಗುವುದು ಎಂದರು.

ಪಾದಯಾತ್ರೆಯ ವ್ಯವಸ್ಥಾಪಕರು ಮಠದ ಮೇಲ್ವಿಚಾರಕಿ ಶಿಲ್ಪಾ ಮಂಜುನಾಥ್, ಸಂಚಾಲಕರಾದ ಮಲ್ಲೇಶ್, ವಿಜಯ್, ಮಂಜುನಾಥ್, ಆದರ್ಶ, ದೀಪು, ಶಿವಕುಮಾರ್, ಜಗದೀಶ್, ವಹಿಸಲಿದ್ದು ಪ್ರತಿ ನಿತ್ಯದ ಊಟ ಹಾಗೂ ಇನ್ನಿತರ ಸೌಕರ್ಯಗಳನ್ನು ನೋಡಿಕೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9945613736, 9481820946, 9731935117, ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದು.

ವರುಣ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳ ಪಟ್ಟಿ ಬಿಡುಗಡೆ



ಮಹದೇವಸ್ವಾಮಿ

ತಿ.ನರಸೀಪುರ, ಜ.4– ವರುಣ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ನೂತನ ಪದಾಧಿಕಾರಿಗಳ ಪಟ್ಟಿಯನ್ನು ಬಿಜೆಪಿಯ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹಾಗೂ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣರವರ ಆದೇಶದ ಮೇರೆಗೆ ನೂತನ ಅಧ್ಯಕ್ಷ ನಗರ್ಲೆ ಎನ್.ಎಂ. ಮಹದೇವಸ್ವಾಮಿ ಬಿಡುಗಡೆ ಮಾಡಿದರು.

ಉಪಾಧ್ಯಕ್ಷರಾಗಿ ಶಂಕರ್, ಟಿ.ನರಸೀಪುರ ಪುರಸಭೆಯ ಸದಸ್ಯ ರೂಪಾ ಪರಮೇಶ್, ಗಿರೀಶ್ .ವಿ, ಡಣನಾಯಕನಪುರ ಡಿ.ಎಲ್.ಮಹದೇವಪ್ಪ, ನರಸಿಂಹ ಮೂರ್ತಿ, ರಾಜಪ್ಪ ಪ್ರಧಾನ ಕಾರ್ಯದರ್ಶಿಗಳಾಗಿ ಆಲಗೂಡು ವೆಂಕಟಮಶೆಟ್ಟಿ, ಹದಿನಾರು ನಂಜುಂಡಸ್ವಾಮಿ, ಕಾರ್ಯದರ್ಶಿಗಳಾಗಿ ಎಂಸಿ ಹುಂಡಿ ಕಾಂತಮ್ಮ, ರಾಜೇಶ್ವರಿ ಅಶೋಕ್, ಮಹದೇವಸ್ವಾಮಿ, ಮಹದೇವು, ಗುರುಸ್ವಾಮಿ, ಕೋಶಾಧ್ಯಕ್ಷರಾಗಿ ಕೆಇಬಿಎಂ ಸಿದ್ದಲಿಂಗಸ್ವಾಮಿ, ಕಾರ್ಯಾಲಯದ ಕಾರ್ಯದರ್ಶಿಯಾಗಿ ಎಂಸಿ ಲೋಕೇಶ್, ಎಸ್ಸಿ ಮೋರ್ಚಾ ಅಧ್ಯಕ್ಷರಾಗಿ ಕಾರ್ಯ ರಾಜೇಂದ್ರ ಪ್ರಧಾನ ಕಾರ್ಯದರ್ಶಿಯಾಗಿ ಹುಳಿಮಾವು ಶಿವು, ಎಸ್‌ಟಿ ಮೋರ್ಚಾ ಅಧ್ಯಕ್ಷರಾಗಿ ಆಲಗೂಡು ಪ್ರಕಾಶ್ ಅವರುಗಳು ನೇಮಕವಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ತಾಯೂರು ಲಕ್ಷ್ಮಣ, ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ಮಂಜು, ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ್, ಯುವ ಮೋರ್ಚಾ ಅಧ್ಯಕ್ಷರಾಗಿ ಕೆಂಪಯ್ಯನಹುಂಡಿ ಜಯಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರು, ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಬೈರಾಪುರ ಲಕ್ಷ್ಮಿ, ಪ್ರಧಾನ ಕಾರ್ಯದರ್ಶಿಯಾಗಿ ಹೊಸಕೋಟೆ ಪುಷ್ಪಲತಾ, ರೈತ ಮೋರ್ಚಾ ಅಧ್ಯಕ್ಷರಾಗಿ ಪುಟ್ಟೇಗೌಡನಹುಂಡಿ ಮಹೇಶ್, ಪ್ರಧಾನ ಕಾರ್ಯದರ್ಶಿಯಾಗಿ ತುಂಬಲ ನಂದೀಶ್, ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷರಾಗಿ ಡೊನಾಲ್ಡ್, ಪ್ರಧಾನ ಕಾರ್ಯದರ್ಶಿಯಾಗಿ ಸುಶೀಲಮ್ಮ ಕಾಲೋನಿ ಮೈಕಲ್, ಮಾಧ್ಯಮ ಪ್ರಮುಖರಾಗಿ ಕಿರಗಸೂರು ಮಹಾದೇವಸ್ವಾಮಿ, ರಂಗಸಮುದ್ರ ಶೇಖರ್ ಅವರು ನೇಮಕಗೊಂಡಿದ್ದಾರೆ.

ಗರ್ಗೇಶ್ವರಿಗೆ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಶಂಕರ್, ಬೈರಾಪುರ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ನಂದೀಶ್, ಹದಿನಾರು ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಮಹಾದೇವಯ್ಯ, ತಗಡೂರು ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಮಹೇಶ್, ದೊಡ್ಡ ಕೌಲಂದ ಶಕ್ತಿ ಕೇಂದ್ರ ಅಧ್ಯಕ್ಷರಾಗಿ ಮಲ್ಲಣ್ಣ, ತಾಂಡವಪುರ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಮಹಾದೇವಪ್ಪ, ವರುಣ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಶ್ರೀಧರ್, ಹಾರೋಹಳ್ಳಿ ಮೆಲ್ಲಹಳ್ಳಿ ಶಕ್ತಿಕೇಂದ್ರದ ಅಧ್ಯಕ್ಷರಾಗಿ ಎಂ.ಎನ್.ವೆಂಕಟೇಶ್ ಅವರು ಆಯ್ಕೆಯಾಗಿದ್ದಾರೆ ಎಂದು ಮಹದೇವಸ್ವಾಮಿ ತಿಳಿಸಿದರು.

ನಂಜನಗೂಡಿನ ಯಾವುದಾದರೂ ವೃತ್ತಕ್ಕೆ ಅಮರಶಿಲ್ಪಿ ಜಕಣಾಚಾರಿ ಹೆಸರಿಡಲು ಒತ್ತಾಯ



ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಂಜನಗೂಡು: ದೇಶದ ವಾಸ್ತುಶಿಲ್ಪ, ಕಲಾ ಕ್ಷೇತ್ರಕ್ಕೆ ಅಮರ ಶಿಲ್ಪಿ ಜಕಣಾಚಾರಿ ಅವರ ಕೊಡುಗೆ ಅಪಾರವಾಗಿದೆ. ಅವರ ಹೆಸರನ್ನು ನಂಜನಗೂಡಿನಲ್ಲಿ ಶಾಶ್ವತವಾಗಿ ನೆನೆಸುವಂತೆ ಮಾಡುವ ಸಲುವಾಗಿ ನಂಜನಗೂಡಿನ ಯಾವುದಾದರೂ ಒಂದು ವೃತ್ತಕ್ಕೆ ಅಮರಶಿಲ್ಪಿ ಜಕಣಾಚಾರಿ ಅವರ ಹೆಸರಿಡಬೇಕು ಎಂದು ವಿಶ್ವಕರ್ಮ ಸಮುದಾಯ ತಾಲೂಕು ಅಧ್ಯಕ್ಷ ಚಂದ್ರು ಒತ್ತಾಯಿಸಿದರು.

ನಗರದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸದಾ ಕಾಲಕ್ಕೂ ಜೀವಂತವಾಗಿರುವ ದೇಶದ ವಾಸ್ತುಶಿಲ್ಪ ಕಲೆಗೆ ಜಕಣಾಚಾರಿ ಅವರ ಕೊಡುಗೆ ಅಪಾರ, ಬೇಲೂರು ಚನ್ನಕೇಶವ ದೇವಾಲಯ, ಹಳೇಬೀಡು ಸೋಮನಾಥೇಶ್ವರ ದೇವಾಲಯಗಳಲ್ಲಿ ಜಕಣಾಚಾರ್ಯ ಅವರ ಶಿಲ್ಪ ಕೌಶಲ್ಯ ಇಡೀ ವಿಶ್ವಕ್ಕೆ ಚಿರಪರಿಚಿತವಾಗಿದೆ, ಜೊತೆಗೆ ತಮ್ಮದೇ ಆದ ಕೆತ್ತನೆಯ ಶೈಲಿ ಮೂಲಕ ಶಿಲ್ಪ ಕಲೆಗಳಿಗೆ ಜೀವತುಂಬಿ ವೃತ್ತಿಯ ಮೌಲ್ಯವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಅಮರಶಿಲ್ಪಿ ಜಕಣಾಚಾರಿಗೆ ಸಲ್ಲುತ್ತದೆ, ಅವರ ಶಿಲ್ಪ ಕೌಶಲ್ಯ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರುವಂತೆ ಜಾಗೃತಿಗೊಳಿಸುವ ಸಲುವಾಗಿ ನಗರದ ಯಾವುದಾದರೂ ಒಂದು ವೃತ್ತಕ್ಕೆ ಅವರ ಹೆಸರನ್ನು ನಾಮಕರಣಗೊಳಿಸಿ ಎಂದರು.

ವಿಶ್ವಕರ್ಮ ಸಮಾಜ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದು, ಸಮಾಜದ ಏಳಿಗೆಗಾಗಿ ರಾಜಕೀಯ ಮುಖಂಡರು ಸಮುದಾಯದವರಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡಬೇಕು ಜೊತೆಗೆ ಸಮುದಾಯದ ವಿದ್ಯಾಭ್ಯಾಸದ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಮಾರಂಭದಲ್ಲಿ ಶಿರಸ್ತೆದಾರರಾದ ವಿರೂಪಾಕ್ಷ, ರಾಜು, ವಿಶ್ವಕರ್ಮ ಸಮುದಾಯ ಉಪಾಧ್ಯಕ್ಷ ಶ್ರೀಕಂಠ, ಮುಖಂಡರಾದ ಗೋಪಾಲಕೃಷ್ಣ, ಅನಂತು, ನಾಗರಾಜಚಾರ್, ರಮೇಶ್, ವಿನಯ್, ಶಶಿ, ರಾಜು, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಅರಣ್ಯ ಇಲಾಖೆ ವಾಹನ ಚೇಸ್ ಮಾಡಿದ ಗಜರಾಜ : ವಿಡಿಯೋ ವೈರಲ್

ಸರಗೂರು,ಜ4– ಗಸ್ತಿನಲ್ಲಿದ್ದ ಅರಣ್ಯ ಇಲಾಖೆಯ ಜೀಪನ್ನು ಕಾಡಾನೆ ಚೇಸ್ ಮಾಡಿ ಘರ್ಜಿಸಿದೆ. ರೈಲು ಕಂಬಿ ಬ್ಯಾರಿಕೇಡ್ ಇದ್ದರೂ ಗಜರಾಜ ಅರಣ್ಯ ಇಲಾಖೆ ವಾಹನ ಅಟ್ಟಾಡಿಸುವ ದೃಶ್ಯದ ವಿಡಿಯೋ ವೈರಲ್ ಆಗಿದೆ. ಸರಗೂರು ತಾಲೂಕು ದಡದಹಳ್ಳಿ ಕಾಲೋನಿಯ ಅರಣ್ಯ ಅಂಚಿನಲ್ಲಿ ಘಟನೆ ನಡೆದಿದೆ. ಬ್ಯಾರಿಕೇಡ್ ಬಳಿ ಸಾಗುತ್ತಿದ್ದ ಒಂಟಿ ಸಲಗ ಅರಣ್ಯ ಇಲಾಖೆ ಸಿಬ್ಬಂದಿಗಳು ಇರುವ ವಾಹನ ನೋಡುತ್ತಲೇ ಘರ್ಜಿಸುತ್ತಾ ಧಾವಿಸಿದೆ.ಬ್ಯಾರಿಕೇಡ್ ಇದ್ದರೂ ರೋಷದಿಂದ ವಾಹನದತ್ತ ನುಗ್ಗುವ ಯತ್ನ ನಡೆಸಿದೆ.ಬ್ಯಾರಿಕೇಡ್ ಇದ್ದ ಕಾರಣ ದಾಳಿ ನಡೆಸಲು ಸಾಧ್ಯವಾಗಿಲ್ಲ. ಗಜರಾಜನ ಆಕ್ರೋಷವನ್ನ ಸಿಬ್ಬಂದಿಯೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದು ಸಧ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ರಾಜ್ಯ ಬುಡಕಟ್ಟು ಹಕ್ಕಿಪಿಕ್ಕಿ ಜನಾಂಗದ ಸಂಘ ಅಸ್ತಿತ್ವಕ್ಕೆ


ರಾಜ್ಯಾಧ್ಯಕ್ಷರಾಗಿ ಪಿ.ಎಸ್.ನಂಜುಂಡಸ್ವಾಮಿ ಆಯ್ಕೆ



ಹುಣಸೂರು: ತಾಲೂಕಿನ ಪಕ್ಷಿರಾಜಪುರ ಗ್ರಾಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಬುಡಕಟ್ಟು ಹಕ್ಕಿಪಿಕ್ಕಿ ಸಮುದಾಯದ ಮುಖಂಡರು ಸಭೆ ಸೇರಿ ರಾಜ್ಯ ಬುಡಕಟ್ಟು ಹಕ್ಕಿಪಿಕ್ಕಿ ಜನಾಂಗದ ಸಂಘವನ್ನು ರಚಿಸಿದ್ದು, ಸಂಘದ ನೂತನ ಪದಾಧಿಕಾರಿಗಳನ್ನು ಸಹ ಆಯ್ಕೆ ಮಾಡಲಾಯಿತು.

ರಾಜ್ಯಾಧ್ಯಕ್ಷರಾಗಿ 1ನೇ ಪಕ್ಷಿರಾಜಪುರದ ಪಿ.ಎಸ್.ನಂಜುಂಡಸ್ವಾಮಿ, ರಾಜ್ಯ ಗೌರವಾಧ್ಯಕ್ಷರಾಗಿ ಮಣಿಕುಮಾರ್, ಮೈಸೂರು ಜಿಲ್ಲಾಧ್ಯಕ್ಷರಾಗಿ ಸುದೇಶ್ ಕುಮಾರ್, ಮೈಸೂರು ಜಿಲ್ಲಾ ಮಹಿಳಾ ಅಧ್ಯಕ್ಷರಾಗಿ ಸೋನಿ, ಶಿವಮೊಗ್ಗ ಜಿಲ್ಲಾ ಅಧ್ಯಕ್ಷರಾಗಿ ಜಗ್ಗು, ಉಪಾಧ್ಯಕ್ಷರಾಗಿ ರಾಜ, ಹುಣಸೂರು ತಾಲೂಕು ಅಧ್ಯಕ್ಷರಾಗಿ ಮೋಹನ್, ಉಪಾಧ್ಯಕ್ಷರಾಗಿ 1ನೇ ಪಕ್ಷಿರಾಜಪುರದ ಅಡಿರಾಮುಡು, ಪ್ರಧಾನ ಕಾರ್ಯದರ್ಶಿಯಾಗಿ ಟಿಕ್ಕೋ ಅರುಣ್, ಜಂಟಿ ಕಾರ್ಯದರ್ಶಿಯಾಗಿ ಮೋಹನ್, ಖಜಾಂಚಿಯಾಗಿ ಬ್ರಿಜು ಆಯ್ಕೆಯಾಗಿದ್ದಾರೆ.

ಬಸವಣ್ಣ ನಿಧನ




ತಿ.ನರಸೀಪುರ, ಜ.4– ಪಟ್ಟಣ ಪಂಚಾಯಿತಿಯ ಮಾಜಿ ಅಧ್ಯಕ್ಷರು ಹಾಗೂ ಕುರುಬ ಸಮುದಾಯದ ಯಜಮಾನರಾದ ದಿವಂಗತ ಮೊಳ್ಳೆ ಮಾದೇಗೌಡರ ಪುತ್ರ ಬಸವಣ್ಣ(73) ಭಾನುವಾರ ಸಂಜೆ ನಿಧನರಾದರು.

ಪತ್ನಿ ಪುರಸಭೆಯ ಮಾಜಿ ಸದಸ್ಯ ಪಾರ್ವತಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರನನ್ನು ಅಗಲಿದ್ದು, ಇವರ ಅಂತ್ಯಕ್ರಿಯೆಯನ್ನು ಸೋಮವಾರ ಬೆಳಗ್ಗೆ 11 ಗಂಟೆಗೆ ಕುರುಬ ಸಮಾಜದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಬಿ.ಮರಯ್ಯ ಅಂತಿಮ ದರ್ಶನ ಪಡೆದರು. ಇವರ ನಿಧನಕ್ಕೆ ಕುರುಬ ಸಮಾಜದ ಯಜಮಾನ ಕೆ.ನಂಜುಂಡಸ್ವಾಮಿ, ಪುರಸಭೆಯ ಮಾಜಿ ಅಧ್ಯಕ್ಷ ಎನ್.ಎಸ್.ಬಸವರಾಜು, ಸದಸ್ಯರಾದ ಬಾದಾಮಿ ಮಂಜು, ಮಹಿಳಾ ಘಟಕದ ಅಧ್ಯಕ್ಷೆ ಲತಾ ಜಗದೀಶ್, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಕೆಎಸ್‌ಆರ್‌ಟಿಸಿ ರಾಜು, ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.


ಯಜಮಾನ್ ಎಂ.ವಿ.ನಾಗರಾಜ ಶ್ರೇಷ್ಠಿ



ತಿ.ನರಸೀಪುರ, ಜ.4– ಪಟ್ಟಣದ ಆರ್ಯವೈಶ್ಯ ಮಂಡಲಿಯ ಮಾಜಿ ಕಾರ್ಯದರ್ಶಿ, ಸಮುದಾಯದ ಯಜಮಾನರಾಗಿದ್ದ ಎಂ.ವಿ.ನಾಗರಾಜ ಶ್ರೇಷ್ಠಿ ಶನಿವಾರ ರಾತ್ರಿ ನಿಧನರಾದರು. ಪಟ್ಟಣದ ಚಿಕ್ಕ ಅಂಗಡಿ ಬೀದಿಯಲ್ಲಿ ಚಿನ್ನ ಬೆಳ್ಳಿ ಅಂಗಡಿ ನಾಗಪ್ಪ ಎಂದೇ ಖ್ಯಾತರಾಗಿದ್ದ ಇವರು ಆರ್ಯ ವೈಶ್ಯ ಮಂಡಲಿಯ ಕಾರ್ಯದರ್ಶಿಯಾಗಿ, ವಾಸವಿ ಲಯನ್ಸ್ ವಿದ್ಯಾ ನಿಕೇತನದ ಸಂಸ್ಥಾಪಕ ಅಧ್ಯಕ್ಷರಾಗಿ ಹಾಗೂ ಸಮುದಾಯದ ಮುಖಂಡರಾಗಿ ಸೇವೆ ಸಲ್ಲಿಸಿದ್ದರು. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ನಡೆಯಿತು.

ಲಯನ್ಸ್ ಸಂಸ್ಥೆ ಕಾರ್ಯದರ್ಶಿ ಎಂ.ಎನ್. ಪ್ರಕಾಶ್ ಸೇರಿದಂತೆ ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ನಿಧನಕ್ಕೆ ಆರ್ಯ ವೈಶ್ಯ ಮಂಡಳಿಯ ಪದಾಧಿಕಾರಿಗಳು, ವಾಸವಿ ಲಯನ್ಸ್ ವಿದ್ಯಾನಿಕೇತನ, ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು, ಸದಸ್ಯರು ಪಟ್ಟಣದ ಪ್ರಮುಖರು ಸಂತಾಪ ಸೂಚಿಸಿದ್ದಾರೆ.

ನರಸೀಪುರದಲ್ಲಿ ಸಾವಿತ್ರಿ ಬಾಯಿ ಫುಲೆ ಜನ್ಮದಿನ ಆಚರಣೆ



ತಿ.ನರಸೀಪುರದ ಕಬಿನಿ ಅತಿಥಿ ಗೃಹದಲ್ಲಿ ಅಕ್ಷರದ ಮಾತೆ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನವನ್ನು ದಲಿತ ಸಂಘಟನೆಗಳ ಒಕ್ಕೂಟದಿಂದ ಆಚರಿಸಲಾಯಿತು. ಆಲಗೂಡು ಶಿವಕುಮಾರ್, ಬನ್ನಹಳ್ಳಿ ಸೋಮಣ್ಣ, ಯಾಚೇನಹಳ್ಳಿ ಸೋಮಶೇಖರ್, ಕರೋಹಟ್ಟಿ ನಾಗೇಶ ಇದ್ದರು.

ತಿ.ನರಸೀಪುರ, ಜ.4–ಮಹಿಳೆಯರು ಸೇರಿದಂತೆ ಶೋಷಿತರು ಹಾಗೂ ಹಿಂದುಳಿದ ವರ್ಗಗಳ ಜನರಿಗೂ ಶಿಕ್ಷಣವನ್ನು ನಿರಾಕರಿಸಿದ್ದ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸಿ, ಸಾರ್ವತ್ರಿಕ ಶಿಕ್ಷಣವನ್ನು ಆರಂಭಿಸಿದ ಸಾವಿತ್ರಿ ಬಾಯಿ ಫುಲೆ ಅವರ ಜನ್ಮ ದಿನವನ್ನು ಶಿಕ್ಷಣ ದಿನವನ್ನಾಗಿ ರಾಜ್ಯ ಸರ್ಕಾರ ಘೋಷಿಸಬೇಕು. ಪಬ್ಲಿಕ್ ಸ್ಕೂಲ್ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಕೈ ಬಿಡಬೇಕು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಒತ್ತಾಯಿಸಿದರು.


ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ ಅಕ್ಷರದ ಮಾತೆ ಶ್ರೀ ಸಾವಿತ್ರಿ ಬಾಯಿ ಫುಲೆ ಅವರ ಜನ್ಮ ದಿನವನ್ನು ಆಚರಿಸಿ ಮಾತನಾಡಿದ ಅವರು ಬಹುಸಂಖ್ಯಾತ ಸಮುದಾಯಕ್ಕೆ ಶಿಕ್ಷಣವನ್ನು ನಿರಾಕರಿಸಿದ್ದ 1850ರ ಕಾಲಘಟ್ಟದಲ್ಲಿ ಸ್ವಂತ ಶಿಕ್ಷಣ ಸಂಸ್ಥೆಯನ್ನು ತೆರೆದು ಹೆಣ್ಣು ಮಕ್ಕಳು ಹಾಗೂ ಶೋಷಿತ ಸಮುದಾಯಗಳಿಗೆ ಶಿಕ್ಷಣ ನೀಡಿದ ಫುಲೆ ದಂಪತಿಗಳ ಸಾಧನೆ ಹೆಗ್ಗುರುತಾಗಿದೆ ಎಂದರು.

ಬಡವರು ಮತ್ತು ಮಧ್ಯಮ ವರ್ಗದ ಜನರೇ ಹೆಚ್ಚಿರುವ ದಲಿತರು ಹಾಗೂ ಹಿಂದುಳಿದ ವರ್ಗಗಳ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವ ಸರ್ಕಾರಿ ಶಾಲೆಗಳನ್ನು ಪಬ್ಲಿಕ್ ಸ್ಕೂಲ್ ಹೆಸರಿನಲ್ಲಿ ಕ್ರೋಢೀಕರಿಸುತ್ತೇವೆ ಎಂದು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕು. ಮನುವಾದಿ ವ್ಯವಸ್ಥೆಯ ನಿರಂತರ ನಿಂದನೆ, ಹೀಯಾಳಿಕೆ ಹಾಗೂ ಅಸಹನೆಯನ್ನು ಲೆಕ್ಕಿಸದೇ ಶಿಕ್ಷಣ ಕಲಿಸಿದ ಸಾವಿತ್ರಿ ಬಾಯಿ ಫುಲೆ ಅವರ ಜನ್ಮ ದಿನವನ್ನು ಶಿಕ್ಷಣದ ದಿನವನ್ನಾಗಿ ಘೋಷಣೆ ಮಾಡಬೇಕು ಎಂದು ಆಲಗೂಡು ಶಿವಕುಮಾರ್ ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವಿಭಾಗಿಯ ಸಂಚಾಲಕ ಬನ್ನಹಳ್ಳಿ ಸೋಮಣ್ಣ, ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಸಂಘಟನಾ ಸಂಚಾಲಕರಾದ ಕರೋಹಟ್ಟಿ ನಾಗೇಶ, ಆಲಗೂಡು ನಾಗರಾಜ್ ಮೂರ್ತಿ, ಕಿರಗಸೂರು ರಜನಿ, ಮುಖಂಡರಾದ ಮಾದಾಪುರ ಉಮೇಶ, ಬನ್ನಹಳ್ಳಿ ದೊರೆಸ್ವಾಮಿ ಹಾಗೂ ಚೌಹಳ್ಳಿ ಮಹದೇವಸ್ವಾಮಿ ಹಾಗೂ ಇತರರಿದ್ದರು.

ರಾಷ್ಟ್ರಕವಿ ಕುವೆಂಪುಗೆ ಭಾರತ ರತ್ನದೊಂದಿಗೆ 'ವಿಶ್ವ ರತ್ನ' ಪ್ರಶಸ್ತಿ ನೀಡಿ

ಕುವೆಂಪು ಜಯಂತಿಯಲ್ಲಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಕೇಂದ್ರಕ್ಕೆ ಆಗ್ರಹ



ಕೆ.ಆರ್.ನಗರ ಪಟ್ಟಣದ ಪಿ.ಎಲ್.ಡಿ.ಬ್ಯಾಂಕ್ ಸಮುದಾಯ ಭವನದಲ್ಲಿ ತಾಲೂಕು ಒಕ್ಕಲಿಗ ನೌಕರರ ಸ್ನೇಹ ಬಳಗದ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರಕವಿ ಕುವೆಂಪು ಜಯಂತಿ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು.

ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಸ್ಪರ್ಧೆ...

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ನಾನು ಆಕಸ್ಮಿಕವಾಗಿ ಕೆ.ಆರ್.ನಗರದಿಂದ ರಾಜಕಾರಣಕ್ಕೆ ಬಂದೆ. ನಾನು ಬದುಕಿರುವವರೆಗೂ ನನ್ನನ್ನು ಬಿಟ್ಟರೆ ನನ್ನ ಕುಟುಂಬದವರಾಗಲೀ, ಮಕ್ಕಳಾಗಲೀ ಯಾವುದೇ ಸಹಕಾರ ಸಂಘ ಅಥವಾ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಳೆದ ಚುನಾವಣೆಯಲ್ಲಿ ನಾನು ಬೆಳ್ಳಗಿರುವುದೆಲ್ಲಾ ಹಾಲು ಎಂದು ನಂಬಿದೆ. ಆದರೆ, ಕೆಲವರು ಜೊತೆಯಲ್ಲಿದ್ದುಕೊಂಡೇ ಮೋಸ ಮಾಡಿದರು. ನಿಷ್ಠಾವಂತ ಕಾರ್ಯಕರ್ತರು ಇನ್ನೂ ಕೂಡ ಇದ್ದು ಅವರಿಗಾಗಿ ಮತ್ತೆ ನಾನು ಚುನಾವಣೆಗೆ ಸ್ಪರ್ಧಿಸಲು ತೀರ್ಮಾನಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಇಡೀ ದೇಶವನ್ನು ಹೊಯ್ಸಳ ಬಿಟ್ಟರೆ ನಮ್ಮ ಮಾಜಿ ಪ್ರಧಾನಿ ಎಚ್ .ಡಿ.ದೇವೇಗೌಡರು ಮಾತ್ರ ಕರ್ನಾಟಕದವರಾಗಿ ಆಳ್ವಿಕೆ ಮಾಡಿದ್ದು ಎಂದು ತಮ್ಮ ಅಭಿಮಾನದ ಮಾತುಗಳನ್ನಾಡಿದ ಸಾ.ರಾ.ಮಹೇಶ್, ನಾನು ಅಧಿಕಾರಕ್ಕಾಗಿ ಆಸೆ ಪಡುವುದಿಲ್ಲ. ನಮ್ಮ ಕಾರ್ಯಕರ್ತರ ಹಿತ ಕಾಯುವುದು ನನಗೆ ಮುಖ್ಯವಾಗಿದ್ದು ಯಾರೂ ಕೂಡ ಚಂಚಲರಾಗಬೇಡಿ. ಕುವೆಂಪುರವರ ಸ್ವಾಭಿಮಾನವನ್ನು ವಿಶ್ವ ಮಾನವ ಸಂದೇಶವನ್ನು ಪಾಲಿಸಿ. ಇಂದಿನ ಮಕ್ಕಳಿಗೆ ಶಿಕ್ಷಣ ಹಾಗೂ ಪ್ರತಿಭೆ ಮುಖ್ಯವಾಗಿದ್ದು ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ತಮ್ಮ ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿ ಕೊಂಡು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಎಂದು ಕಿವಿಮಾತು ಹೇಳಿದರು.

ಕೆ.ಆರ್.ನಗರ, ಜ.4–ಮೈಸೂರಿನಲ್ಲಿ ನೆಲಸಿ, ಇಡೀ ಜಗತ್ತನ್ನೇ ಕೈಯಲ್ಲಿ ಹಿಡಿದು ವಿಶ್ವ ಮಾನವರಾದ ರಾಷ್ಟ್ರಕವಿ ಕುವೆಂಪು ಅವರಿಗೆ 'ಭಾರತ ರತ್ನ' ಪ್ರಶಸ್ತಿ ಕೊಡುವುದರ ಜೊತೆಗೆ ಹೊಸದಾಗಿ 'ವಿಶ್ವ ರತ್ನ' ಪ್ರಶಸ್ತಿಯನ್ನು ಕೊಡಲೇಬೇಕು ಎಂದು ಕೇಂದ್ರ ಸರ್ಕಾರವನ್ನು ವಿಶ್ರಾಂತ ಕುಲಪತಿಗಳು ಹಾಗೂ ಅಂತರರಾಷ್ಟ್ರೀಯ ವಿಜ್ಞಾನಿ ಪ್ರೊ. ಕೆ.ಎಸ್.ರಂಗಪ್ಪ ಒತ್ತಾಯಿಸಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ತಾಲೂಕು ಒಕ್ಕಲಿಗ ನೌಕರರ ಸ್ನೇಹ ಬಳಗದ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಳ್ಳಿಯಿಂದ ಬಂದು ವಿಶ್ವಮಾನವರಾಗುವುದು ಸುಲಭದ ಮಾತಲ್ಲ, ನಮ್ಮ ಕನ್ನಡಿಗರ ಅದೃಷ್ಟ ಸಾಹಿತ್ಯ ಕ್ಷೇತ್ರವನ್ನು ಎಲ್ಲರ ಪ್ರತೀಕವಾಗಿಟ್ಟಿದ್ದಾರೆ. ಕುವೆಂಪು ಅವರು ಬದುಕು–ಬರಹದ ಮುಖೇನ ಸಂದೇಶ ಸಾರಿದುದು ಎಂದು ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ನೆನಪಿಸುವ ನುಡಿಗಳನ್ನು ನುಡಿದರು.

ಗ್ರಾಮೀಣ ಪ್ರದೇಶದಲ್ಲಿ ಪ್ರತಿಭೆಗಳು ಹೆಚ್ಚಾಗಿದ್ದು, ಅವರುಗಳನ್ನು ಗುರುತಿಸಿ ಪ್ರತಿಭೆ ಹೊರ ತೆಗೆಯಬೇಕಿದೆ. ಅಂತಹ ಪ್ರತಿಭಾವಂತರ ಅವಶ್ಯಕತೆ ದೇಶಕ್ಕೆ ಅಗತ್ಯವಾಗಿದ್ದು ಅವರ ಸಂಖ್ಯೆ ಹೆಚ್ಚಾದಷ್ಟು ದೇಶ ಅಭಿವೃದ್ಧಿ ಕಾಣಲಿದೆ. ಬುದ್ಧಿವಂತರಿಂದ ವಿಜ್ಞಾನ ಬೆಳೆದಿದ್ದು, ಅದಕ್ಕೆ ಪೂರಕವಾಗಿ ನಮ್ಮ ಮಕ್ಕಳನ್ನು ಬೆಳೆಸಬೇಕು ಎಂದರು.

ನಮ್ಮ ದೇಶದ ಮಕ್ಕಳ ಬುದ್ಧಿಶಕ್ತಿ ಮತ್ತು ಸಂಸ್ಕೃತಿ ಯಾವ ದೇಶಗಳಲ್ಲೂ ಇಲ್ಲ. ಸರಿಯಾದ ರೀತಿಯಲ್ಲಿ ಅದನ್ನು ಬಳಕೆ ಮಾಡಿಕೊಳ್ಳಬೇಕು. ಇಂತಹ ಕೆಲಸವನ್ನು ಒಕ್ಕಲಿಗ ನೌಕರರ ಸ್ನೇಹ ಬಳಗ ಮಾಡುತ್ತಿದೆ ಎಂದು ಪ್ರಸಂಶೆ ವ್ಯಕ್ತಪಡಿಸಿದರಲ್ಲದೆ ರಾಜ್ಯದ ಎಲ್ಲಾ ಶಾಸಕರು ಮಾಜಿ ಸಚಿವ ಸಾರಾ ಮಹೇಶ್ ಅವರಂತೆ ಕ್ಷೇತ್ರವನ್ನು ನೋಡಿಕೊಂಡು ಜನರ ಕಷ್ಟ–ಸುಖಗಳಿಗೆ ಸ್ಪಂದಿಸಬೇಕು. ಆಗ ಮಾತ್ರ ಕ್ಷೇತ್ರದ ಜನರು ಸುಭಿಕ್ಷವಾಗಿರಲು ಸಾಧ್ಯ ಆದ್ದರಿಂದ ಸಾ.ರಾ.ಮಹೇಶ್ ಅವರ ಅಭಿವೃದ್ಧಿ ಕೆಲಸಗಳು ರಾಜ್ಯಕ್ಕೆ ಮಾದರಿಯಾಗಿದ್ದು ಅವರು ಮಾಡಿದ ಕೆಲಸಗಳು ಅಜರಾಮರವಾಗಿ ಉಳಿದಿವೆ ಎಂದರು.

ಬಳಿಕ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಒಕ್ಕಲಿಗ ಸಮುದಾಯದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ 2024–25ನೇ ಸಾಲಿನ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 84 ವಿದ್ಯಾರ್ಥಿಗಳಿಗೆ ಹಾಗೂ 40 ಮಂದಿ ನಿವೃತ್ತ ನೌಕರರಿಗೆ ಹಾಗೂ ಹಲವು ವರ್ಷಗಳಿಂದ ಸಮಾಜ ಸೇವೆ ಮಾಡುತ್ತಿರುವ ರಾಜ್ಯಶಾಸ್ತ್ರ ಉಪನ್ಯಾಸಕ ಕೆ.ಎಲ್.ರಮೇಶ್ ಅವರನ್ನು ಅಭಿನಂದಿಸಲಾಯಿತು. ಕುವೆಂಪು ಅವರ ವಿಚಾರಧಾರೆ ಕುರಿತು ಉಪ ಪ್ರಾಂಶುಪಾಲರು ಮತ್ತು ಲೇಖಕಿ ಆಶಾನಂದೀಶ್ ಅವರು ಮಾತನಾಡಿದರು. ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕಾನಂದ, ನವನಗರ ಬ್ಯಾಂಕಿನ ಅಧ್ಯಕ್ಷ ಕೆ.ಎನ್.ಬಸಂತ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿದರು.

ಖ್ಯಾತ ಮೂಳೆ ತಜ್ಞ ಡಾ.ಸಾ.ರಾ. ಧನುಷ್, ತಾಲೂಕು ಒಕ್ಕಲಿಗರ ಸಂಘ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ, ಗೌರವ ಸಲಹೆಗಾರರಾದ ಡಾ. ಎಸ್. ಪಿ.ಯೋಗಣ್ಣ, ಎಸ್.ಪಿ.ತಮ್ಮಯ್ಯ, ನಿರ್ದೇಶಕ ಮಂಜುಗೌಡ, ಮೈಮುಲ್ ನಿರ್ದೇಶಕ ಎ.ಟಿ. ಸೋಮಶೇಖರ್, ಜಿ.ಪಂ.ಮಾಜಿ ಸದಸ್ಯ ಎಂ.ಟಿ.ಕುಮಾರ್, ಹುಣಸೂರು ತಹಸೀಲ್ದಾರ್ ಎಂ.ಎಸ್. ಯದುಗಿರೀಶ್, ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ಖ್ಯಾತ ಮೂಳೆ ತಜ್ಞ ಡಾ.ಕೆ.ಆರ್.ಗೌತಮ್, ಪುರಸಭೆ ಮಾಜಿ ಸದಸ್ಯ ಕೆ.ಎಲ್.ಜಗದೀಶ್, ಪಿಎಲ್.ಡಿ ಬ್ಯಾಂಕ್ ನಿರ್ದೇಶಕ ಹರಿಚಿದಂಬರ್, ತಾಲೂಕು ಒಕ್ಕಲಿಗ ನೌಕರರ ಸ್ನೇಹಬಳಗದ ಅಧ್ಯಕ್ಷ ಲಕ್ಕಿಕುಪ್ಪೆ ಶಂಕರೇಗೌಡ ಉಪಾಧ್ಯಕ್ಷ ಟಿ.ಪಿ. ನಂದೀಶ್, ಕಾರ್ಯದರ್ಶಿ ಹೆಚ್.ಎಸ್. ಈಶ್ವರ್, ಯೋಗೇಶ್, ಶ್ರೀರಾಂಪುರ ಹರೀಶ್, ದೊಡ್ಡಮೂಗೇಗೌಡ, ರಾಜು, ರಂಗನಾಥ, ಪಾಲಾಕ್ಷ, ಮಾರುತಿ, ಮನೋಹರ್, ಶೀಗೇವಾಳು ಕುಮಾರ್, ನಿವೃತ್ತ ಶಿಕ್ಷಕ ದೇವೇಂದ್ರ ಕುಮಾರ್ ಸೇರಿದಂತೆ ಅನೇಕ ನೌಕರರ ಬಳಗದ ಪದಾಧಿಕಾರಿಗಳು, ಸದಸ್ಯರು, ವಿವಿಧ ಮುಖಂಡರು ಇದ್ದರು.

ಸಾ.ರಾ.ಮಹೇಶ್ ಚಾಮುಂಡೇಶ್ವರಿಯಲ್ಲಿ ಅಭ್ಯರ್ಥಿಯಾದರೆ ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ನನ್ನದು

ಚಾಮುಂಡೇಶ್ವರಿ ಕ್ಷೇತ್ರದ ಮತದಾರರು ಹಾಗೂ ಜೆಡಿಎಸ್ ಕಾರ್ಯಕರ್ತರು ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಆಗಿ ಎಂದು ಒತ್ತಡ ಹಾಕುತ್ತಿದ್ದಾರೆ. ಇನ್ನೇನು ಮಾಡೋದು ನೀವು ನೋಡಿದ್ರೆ ಸೋಲಿಸ್ತೀರಿ. ಹಾಗಾಗಿ ನಾನು ಕೂಡ ಅಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿ ಆಗಲೇಬೇಕೆಂದು ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಒತ್ತಡ ಕೂಡ ಹಾಕಿದ್ದೇನೆ. ಅವರು ಅಭ್ಯರ್ಥಿಯಾದರೆ ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ನನ್ನದು.

- ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಈ ಬಾರಿ ಭತ್ತದ ಇಳುವರಿ ಹೆಚ್ಚಾಗುವ ಸಾಧ್ಯತೆ

ಅಧಿಕ ಲಾಭದ ನಿರೀಕ್ಷೆಯಲ್ಲಿ ರೈತರು



ಮೈಸೂರು, ಜ.4(ಬಿಎಲ್‌ಯು)– ಕೀಟ ರೋಗ ಭಾದೆಯ ಕಾರಣದಿಂದ ಸಾಮಾನ್ಯವಾಗಿ ಮೈಸೂರು ಜಿಲ್ಲೆಯಲ್ಲಿ ಭತ್ತದ ಇಳುವರಿ ಕಡಿಮೆಯಾಗುತ್ತಿತ್ತು. ಆದರೆ ಈ ವರ್ಷ ಬಂಪರ್ ಬೆಳೆ ಬರುತ್ತದೆ ಎಂದು ರೈತರು ನಿರೀಕ್ಷೆ ಹೊಂದಿದ್ದಾರೆ.

ಮೈಸೂರು ಜಿಲ್ಲೆಯ ತಿ.ನರಸೀಪುರ, ನಂಜನಗೂಡು, ಕೆ.ಆರ್.ನಗರ ತಾಲೂಕಿನಲ್ಲಿ ರೈತರು ಹೆಚ್ಚಾಗಿ ಭತ್ತ ಬೆಳೆಯುತ್ತಾರೆ. ಆದರೆ, ಪ್ರತಿ ವರ್ಷದಂತೆ ಕಳೆದ ವರ್ಷ ಕೂಡ ಕೀಟ ರೋಗ ಬಾಧೆಯಿಂದ ಭತ್ತದ ಇಳುವರಿ ಕಡಿಮೆಯಾಗಿತ್ತು. ಇದರಿಂದ ರೈತರು ನಿರೀಕ್ಷೆ ಮಾಡಿದಷ್ಟು ಲಾಭ ಬರುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಕೃಷಿ ತಜ್ಞರ ಸಲಹೆ ಮೇರೆಗೆ ರೈತರು ಭತ್ತದ ಬೆಳೆಗೆ ಹೆಚ್ಚಿನ ಪ್ರಮಾಣದ ಪೊಟಾಷ್ ಬಳಸಿದ್ದಾರೆ. ಇದರಿಂದ ಭತ್ತವನ್ನು ಕಾಡುತ್ತಿದ್ದ ಕೀಟ ಬಾಧೆ ರೋಗ ಕಡಿಮೆಯಾಗಿದೆ.

ಪೊಟಾಷ್ ಅಂದರೆ ಪೊಟಾಷಿಯಂ ಅಂಶವಿರುವ ಖನಿಜಗಳು ಹಾಗೂ ಲವಣಗಳ ಸಮೂಹ. ಸಸ್ಯಗಳ ಬೆಳವಣಿಗೆಗೆ ಅಗತ್ಯ ಪೋಷಕಾಂಶಗಳನ್ನು ಇದು ಒದಗಿಸುತ್ತದೆ. ಇದರಲ್ಲಿ ಪ್ರಮುಖವಾಗಿ ಪೊಟಾಷಿಯಂ ಕ್ಲೋರೈಡ್ ಹಾಗೂ ಸಲ್ಫೇಟ್ ಇದೆ. ಇದು ಬೆಳೆಗಳಿಗೆ ಶಕ್ತಿ ಮತ್ತು ರೋಗ ನಿರೋಧಕತೆಯನ್ನು ಕೂಡ ಹೆಚ್ಚಿಸುತ್ತದೆ. ಈ ಕಾರಣದಿಂದ ಕೃಷಿ ತಜ್ಞರ ಸಲಹೆ ಮೇರೆಗೆ ರೈತರು ಈ ಬಾರಿ ಹೆಚ್ಚಾಗಿ ಪೊಟಾಷ್ ಬಳಸಿದ್ದಾರೆ.

ಕೃಷಿ ತಜ್ಞರ ಸಲಹೆ ಮೇರೆಗೆ ಭತ್ತದ ಬೆಳೆಗಳಿಗೆ ಹೆಚ್ಚು ಪೊಟಾಷ್ ಬಳಸುವಂತೆ ರೈತರಿಗೆ ಸಲಹೆ ನೀಡಿದ್ದೆವು. ಈಗಿನ ವಾತಾವರಣ ನೋಡಿದರೆ ಈ ಬಾರಿ ಭತ್ತದ ಇಳುವರಿ ಹೆಚ್ಚಾಗಲಿದೆ ಎಂದು ನಿರೀಕ್ಷೆ ಮಾಡಿದ್ದೇವೆ ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದರು. ಆದರೆ ಭತ್ತದ ಇಳುವರಿ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಲಿದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂದು ರವಿ ಹೇಳಿದ್ದಾರೆ.

ಪ್ರಾಣಿ ದತ್ತು ಯೋಜನೆಯಿಂದ ಮೈಸೂರು ಮೃಗಾಲಯಕ್ಕೆ ವಾರ್ಷಿಕ ಕೋಟಿ ಆದಾಯ



ಮೈಸೂರು ಮೃಗಾಲಯ

ಮೈಸೂರು, ಜ.4(ವಿವಿಹೆಚ್)– ಅತೀಹೆಚ್ಚು ಜನ ಮನ್ನಣೆ ಪಡೆದು, ಪ್ರವಾಸಿಗರ ನೆಚ್ಚಿನ ತಾಣವಾಗಿರುವ ಸಾಂಸ್ಕೃತಿಕ ನಗರಿ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯವು 'ಪ್ರಾಣಿ ದತ್ತು ಯೋಜನೆ'ಯಿಂದ ವಾರ್ಷಿಕ ಕೋಟಿ ರೂ. ಆದಾಯ ಗಳಿ ಸಿದೆ.

ಮಹಾಮಾರಿ ಕೋವಿಡ್ ತೀವ್ರತೆಯಿಂದ ಶತಮಾನಗಳ ಇತಿಹಾಸವಿರುವ ಮೈಸೂರು ಮೃಗಾಲಯದಲ್ಲಿ ಪ್ರಾಣಿ–ಪಕ್ಷಿಗಳ ಪೋಷಣೆಗೆ ತೀವ್ರ ತೊಂದರೆ ಉಂಟಾಗಿತ್ತು. ಈ ವೇಳೆ ಪ್ರಾಣಿ ದತ್ತು ಯೋಜನೆ ಜಾರಿಗೆ ಬಂತು. ಈ ಯೋಜನೆ ಮೃಗಾಲಯಕ್ಕೆ ಉತ್ತಮ ಆದಾಯ ಗಳಿಸಿಕೊಡುತ್ತಿದೆ.

ಈ ಸಂಬಂಧ ಮಾಧ್ಯಮಗಳೊಂದಿಗೆ ಮಾತನಾಡಿದ ದತ್ತು ಯೋಜನೆ ಉಸ್ತುವಾರಿ ಸುಪ್ರಿತಾ ಶ್ರೀಕಾಂತ್, ಪ್ರಾಣಿಗಳ ಪಾಲನೆ–ಪೋಷಣೆ ಉದ್ದೇಶದಿಂದ 'ಪ್ರಾಣಿ ದತ್ತು ಯೋಜನೆ' ಜಾರಿ ಮಾಡಲಾಯಿತು. ಕನಿಷ್ಟ 1 ಸಾವಿರ ದಿಂದ 3 ಲಕ್ಷ ರೂ.ವರೆಗೆ ಪ್ರಾಣಿ–ಪಕ್ಷಿಗಳನ್ನು ದತ್ತು ಸ್ವೀಕಾರ ಮಾಡಬಹುದಾಗಿದೆ. ಈ ಪ್ರಕ್ರಿಯೆ ಆನ್‌ಲೈನ್ ಮತ್ತು ಆಫ್ ಲೈನ್ ಎರಡೂ ಮಾದರಿಯಲ್ಲಿಯೂ ಇರಲಿದೆ.

1 ದಿನದಿಂದ ವರ್ಷಗಳ ವರೆಗೂ ದತ್ತು ಪಡೆಯಲು ಅವಕಾಶವಿದ್ದು, 1 ಸಾವಿರದಿಂದ 4 ಸಾವಿರ ವರೆಗೆ ದತ್ತು ಪಡೆಯುವವರಿಗೆ ಪ್ರಮಾಣ ಪತ್ರ ನೀಡುತ್ತೇವೆ. 5 ಸಾವಿರ ರೂ ಮೇಲ್ಪಟ್ಟು ದತ್ತು ಪಡೆಯುವವರಿಗೆ ಉಚಿತ ಪಾಸ್ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ. 25 ಸಾವಿರ ರೂ ನೀಡಿ ದತ್ತು ಪಡೆದಲ್ಲಿ ದತ್ತು ಪಡೆದ ಪ್ರಾಣಿ ಅಥವಾ ಪಕ್ಷಿ ನಾಮ ಫಲಕದಲ್ಲಿ ದತ್ತು ಸ್ವೀಕಾರಕಾರರ ಹೆಸರು ಹಾಕಲಾಗುವುದು ಎಂದು ತಿಳಿಸಿದರು.

ದತ್ತು ಯೋಜನೆಯ ಹಣ ಬಳಕೆ: ಮೃಗಾಲಯದ ಪ್ರಾಣಿ–ಪಕ್ಷಿಗಳ ನಿರ್ವಹಣೆಗೆ ಮುಖ್ಯವಾಗಿ ಪ್ರವಾಸಿಗರ ಟಿಕೆಟ್ ಶುಲ್ಕದ ಹಣ ಬಳಸಲಾಗುತ್ತದೆ. ಆದರೆ ಪ್ರಾಣಿಗಳ ಆಹಾರ, ವೈದ್ಯಕೀಯ ವೆಚ್ಚ ಹಾಗೂ ಆರೈಕೆಗಳಿಗೆ ದತ್ತು ಯೋಜನೆಯಿಂದ ಬಂದ ಹಣ ಬಳಸಲಾಗುತ್ತದೆ. ಸಾಮಾನ್ಯವಾಗಿ, ಪ್ರಾಣಿಪ್ರಿಯರು ಕ್ರಿಕೆಟ್ ಆಟಗಾರರು, ಇತರೇ ಕ್ರೀಡಾ ಪಟುಗಳು, ರಾಜಕಾರಣಿಗಳು, ಸಿನಿಮಾ ನಟರು, ಸಮಾಜ ಸೇವಕರು, ಕೆಲವು ಸಂಘ–ಸಂಸ್ಥೆಗಳು, ಸರ್ಕಾರಿ ಬ್ಯಾಂಕ್‌ಗಳು ಸೇರಿದಂತೆ ಸರ್ಕಾರಿ ಸಂಸ್ಥೆಗಳೂ ದತ್ತು ಯೋಜನೆಯಲ್ಲಿ ಪಾಲ್ಗೊಂಡಿವೆ.

ದತ್ತು ಯೋಜನೆಗೆ ತೆರಿಗೆ ವಿನಾಯಿತಿ ಇದೆ. ಪ್ರತಿವರ್ಷ ಇದರಿಂದ ಕೋಟಿ ರೂ. ಆದಾಯ ಬರುತ್ತದೆ. ಈ ಹಣವನ್ನು ಮೃಗಾಲಯದಲ್ಲಿರುವ 1,500ಕ್ಕೂ ಹೆಚ್ಚು ಪ್ರಾಣಿಗಳು ಹಾಗೂ 120ಕ್ಕೂ ಹೆಚ್ಚು ಪಕ್ಷಿಗಳ ಆಹಾರ, ಅವುಗಳ ನಿಗಾ ಹಾಗೂ ವಂಶಾಭಿವೃದ್ಧಿಗೆ ಬಳಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ವೆನೆಜುವೆಲಾದ ಮೇಲೆ ಅಮೆರಿಕದ ಆಕ್ರಮಣ ಖಂಡಿಸಿ ಮೈಸೂರಲ್ಲಿ ಸಿಪಿಐ(ಎಂ) ಪ್ರತಿಭಟನೆ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಿಪಿಐ (ಎಂ) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.4(ಪಿಎಂ)– ವೆನೆಜುವೆಲಾದ ಮೇಲೆ ಅಮೆರಿಕ ನಡೆಸಿದ ವೈಮಾನಿಕ ದಾಳಿಯನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ/ಸಿಪಿಐ–ಎಂ) ಮೈಸೂರು ಜಿಲ್ಲಾ ಸಂಘಟನಾ ಸಮಿತಿ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು. ಅಲ್ಲದೆ, ವೆನೆಜುವೆಲಾದ ಅಧ್ಯಕ್ಷರು ಹಾಗೂ ಅವರ ಪತ್ನಿಯ ಬಿಡುಗಡೆಗೊಳಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ವೆನೆಜುವೆಲಾದ ಮೇಲೆ ಅಮೇರಿಕವು ಸಾಮ್ರಾಜ್ಯಶಾಹಿ ಆಕ್ರಮಣ ನಡೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಸಿಪಿಐ (ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಅಮೆರಿಕಾವು ತನ್ನ ಸಾಮ್ರಾಜ್ಯಶಾಹಿ ನೀತಿಯ ಭಾಗವಾಗಿ ಸ್ವತಂತ್ರ ಹಾಗೂ ಸಾರ್ವಭೌಮ ದೇಶವಾದ ವೆನೆಜುವೆಲಾದ ಮೇಲೆ ಏಕಾಏಕಿ ದಾಳಿ ನಡೆಸಿದೆ ಎಂದು ಕಿಡಿಕಾರಿದರು.

ಮಾತ್ರವಲ್ಲದೆ, ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ ಹಾಗೂ ಅವರ ಪತ್ನಿ ಸಿಲಿಯಾ ಪ್ಲೋರ್ಸ್ ಅವರನ್ನು ರಾತ್ರೋರಾತ್ರಿ ಅಪಹರಣ ಮಾಡಲಾಗಿದೆ. ಇದು ಅಮೆರಿಕಾದ ಕ್ರೌರ್ಯ. ಈ ದಾಳಿಯನ್ನು ಖಂಡಿಸಿ ಸಿಪಿಐ (ಎಂ) ಇಡೀ ದೇಶದಾದ್ಯಂತ ಪ್ರತಿಭಟನೆ ನಡೆಸುತ್ತಿದೆ. ಅಮೆರಿಕವು ದುರ್ಬಲ ದೇಶಗಳ ಮೇಲೆ ದಾಳಿ ನಡೆಸುವ ಚಾಳಿ ಹೊಂದಿದ್ದು, ಆ ಮೂಲಕ ತನ್ನ ಬಂಡವಾಳಶಾಹಿ ನೀತಿಯನ್ನು ವಿಸ್ತರಿಸುತ್ತಿದೆ ತನ್ನ ಆರ್ಥಿಕ ನೀತಿ ಒಪ್ಪದಿರುವ ದೇಶಗಳ ಮೇಲೆ ಅಮೆರಿಕ ದಾಳಿ ನಡೆಸುತ್ತದೆ ಎಂದು ದೂರಿದರು.

ವೆನೆಜುವೆಲಾದಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ನಡೆಯುತ್ತಿದ್ದು, ಇದರ ಹಿಂದೆ ವೆನೆಜುವೆಲಾ ಅಧ್ಯಕ್ಷರು ಇದ್ದಾರೆ ಎಂದು ಅಮೆರಿಕ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಿದೆ. ಆದರೆ ಈ ಆರೋಪ ಶುದ್ಧಸುಳ್ಳಾಗಿದ್ದು, ಈ ಆರೋಪವನ್ನು ಸಾಬೀತುಪಡಿಸಿಲ್ಲ. ದಾಳಿ ನಡೆಸಲು ನಿಜವಾದ ಕಾರಣ ಅಲ್ಲಿನ ಸಂಪತ್ತು ಲೂಟಿ ಮಾಡುವುದಾಗಿದೆ. ವೆನೆಜುವೆಲಾ ಅತಿದೊಡ್ಡ ತೈಲ ನಿಕ್ಷೇಪಗಳು, ವ್ಯಾಪಕವಾದ ಅನಿಲ ಕ್ಷೇತ್ರಗಳು, ಗಮನಾರ್ಹ ಚಿನ್ನದ ಗಣಿ ಸೇರಿದಂತೆ ಅಪಾರ ಪ್ರಾಕೃತಿಕ ಸಂಪತ್ತು ಹೊಂದಿದ್ದು, ಅದರ ಮೇಲೆ ಅಮೆರಿಕ ಕಣ್ಣಿಟ್ಟಿದೆ. ಹಾಗಾಗಿ ಅದರ ಮೇಲೆ ನಿಯಂತ್ರಣ ಸಾಧಿಸಲು ಅಮೆರಿಕ ಹೊರಟಿದೆ ಎಂದು ಆರೋಪಿಸಿದರು.

ಸಿಪಿಐ (ಎಂ) ಜಿಲ್ಲಾ ಸಮಿತಿ ಸದಸ್ಯರಾದ ಎನ್.ವಿಜಯ್‌ಕುಮಾರ್, ಜಯರಾಂ, ಲೀಲಾವತಿ, ಸ್ಥಳೀಯ ಸಮಿತಿ ಕಾರ್ಯದರ್ಶಿ ಸುಬ್ರಹ್ಮಣ್ಯ, ಸದಸ್ಯರಾದ ರಾಜೇಂದ್ರ, ಅಣ್ಣಪ್ಪ, ಬಸವಯ್ಯ, ಬಾಲಾಜಿರಾವ್, ಪ್ರಭಾಕರ್, ರಾಮಚಂದ್ರ, ನಾಗಣ್ಣ, ಬೀರೇಗೌಡ, ಮಹದೇವಸ್ವಾಮಿ, ಬಸವರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಭಿನಂದನೆ



ಮೈಸೂರಿಗೆ ಭೇಟಿ ನೀಡಿದಉತ್ತರ ಪ್ರದೇಶ ರಾಜ್ಯದ ಕೈಗಾರಿಕಾ ಸಚಿವ ಧರ್ಮವೀರ್ ಪ್ರಜಾಪತಿಯವರನ್ನು ಭಾರತೀಯ ಜನತಾ ಪಾರ್ಟಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ ಅಭಿನಂದಿಸಿದರು. ಈ ವೇಳೆ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ರುದ್ರಮೂರ್ತಿ, ವಕೀಲರಾದ ಶಿವರಾಜ್, ಗ್ರಾಮಾಂತರ ಎಸ್.ಸಿ. ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ನಗರ ಎಸ್.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ ಉಪಸ್ಥಿತರಿದ್ದರು

ನಟ ಯಶ್ ತಾಯಿ ಮನೆಯ ಅಕ್ರಮ ಕಾಂಪೌಂಡ್ ಜೆಸಿಬಿ ಬಳಸಿ ಧ್ವಂಸ



ಒತ್ತುವರಿ ಮಾಡಿಕೊಂಡಿದ್ದ ಕಾಂಪೌಂಡ್ ಅನ್ನು ತೆರವುಗೊಳಿಸಲಾಯಿತು.

ಹಾಸನ, ಜ.4– ರಾಕಿಂಗ್ ಸ್ಟಾರ್ ಯಶ್ ಅವರ ಬಹುನಿರೀಕ್ಷಿತ 'ಟಾಕ್ಸಿಕ್' ಚಿತ್ರ ಸದ್ದು ಮಾಡುತ್ತಿರುವಂತೆಯೇ ಅವರ ತಾಯಿ ಪುಷ್ಪಾ ವಿರುದ್ಧ ಮತ್ತೊಂದು ಆರೋಪ ಕೇಳಿಬಂದಿದೆ.

ತಮ್ಮ ಮನೆ ಪಕ್ಕದಲ್ಲಿದ್ದ ಸೈಟನ್ನು ಒತ್ತುವರಿ ಮಾಡಿ ಕಾಂಪೌಂಡ್ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ. ಇಂದು ಬೆಳ್ಳಂಬೆಳಗ್ಗೆ ಅವರ ಮನೆ ಮುಂದೆ ಜೆಸಿಬಿ ಘರ್ಜನೆ ಮಾಡಿದ್ದು, ಕಾಂಪೌಂಡ್ ತೆರವು ಮಾಡಲಾಗಿದೆ.

ಹಾಸನದ ವಿದ್ಯಾನಗರದಲ್ಲಿ ಯಶ್ ಅಮ್ಮ ಪುಷ್ಪ ಅವರ ಮನೆ ಇದ್ದು, ಅವರು ಲಕ್ಷ್ಮಮ್ಮ ಎಂಬುವರಿಗೆ ಸೇರಿದ್ದ ಸೈಟ್‌ಗೆ ಕಾಂಪೌಂಡ್ ಹಾಕಿದ್ದಾರೆ ಎನ್ನಲಾಗಿದೆ. ಲಕ್ಷ್ಮಮ್ಮ ಸಂಬಂಧಿ ದೇವರಾಜ್ ಎನ್ನುವವರು ಇದನ್ನು ಪ್ರಶ್ನಿಸಿ ಹಾಸನದ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಹಾಸನ ಹಿರಿಯ ಜೆಎಂಎಫ್‌ಸಿ ನ್ಯಾಯಾಲಯ ದೇವರಾಜ್ ಪರವಾಗಿ ಆದೇಶ ಮಾಡಿದ್ದಾರೆ.

ಆದರೆ, ಹಲವಾರು ಬಾರಿ ಕೋರ್ಟ್ ಸಮನ್ಸ್ ಹೊರಡಿಸಿದರೂ ಯಶ್ ತಾಯಿ ಕೋರ್ಟ್‌ಗೆ ಬಾರದೆ ಇದ್ದು ನ್ಯಾಯಾಲಯಕ್ಕೆ ದಾಖಲೆ ಒದಗಿಸದ ಹಿನ್ನಲೆಯಲ್ಲಿ ದೇವರಾಜ್ ಪರ ಕೋರ್ಟ್ ಆದೇಶ ಮಾಡಿದೆ. ದೇವರಾಜ್ ಅವರು ಕೋರ್ಟ್ ಆದೇಶದಂತೆ ಜಾಗ ಬಿಟ್ಟು ಕೊಡುವಂತೆ ಮನವಿ ಮಾಡಿದ್ದರು. ಆದರೆ ದೇವರಾಜ್ ಮನವಿಗೆ ಸ್ಪಂದಿಸದ ಯಶ್ ತಾಯಿ ಸುಮ್ಮನಿದ್ದರು. ಈ ಹಿನ್ನೆಲೆಯಲ್ಲಿ ಕೋರ್ಟ್ ಆದೇಶದಂತೆ ಮಾಲೀಕರು ಇಂದು ಬೆಳ್ಳಂಬೆಳಗ್ಗೆ ಜೆಸಿಬಿ ಮೂಲಕ ಕಾಂಪೌಂಡ್ ತೆರವುಗೊಳಿಸಿದ್ದಾರೆ. ಸುಮಾರು ಒಂದೂವರೆ ಸಾವಿರ ಅಡಿಗೆ ಅಕ್ರಮವಾಗಿ ಕಾಂಪೌಂಡ್ ಹಾಕಿದ್ದರು ಎಂದು ದೇವರಾಜು ಆರೋಪ ಮಾಡಿದ್ದಾರೆ.

ಈ ಮಧ್ಯೆ ಕಾಂಪೌಂಡ್ ತೆರವು ಪ್ರತಿಕ್ರಿಯಿಸಿರುವ ಪುಷ್ಪಾ, ನಮ್ಮ ಬಳಿ ಇರುವ ಎಲ್ಲಾ ದಾಖಲಾತಿಗಳು ಸರಿಯಾಗಿದ್ದು, ಯಾವುದೇ ಒತ್ತುವರಿ ಮಾಡಿಲ್ಲ. ಕಾಂಪೌಂಡ್ ತೆರುವು ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಕಾಂಪೌಂಡ್ ತೆರವು ಬಗ್ಗೆ ಕಾನೂನು ಹೋರಾಟ ಮಾಡುತ್ತೇವೆ ಎಂದು ಪುಷ್ಪಾ ಅವರ ಪರ ವಕೀಲ ಸಂಜಯ್ ಕೂಡ ತಿಳಿಸಿದ್ದಾರೆ.

ನೈಜೀರಿಯಾದಲ್ಲಿ ಹಳ್ಳಿಯೊಂದರ ಮೇಲೆ ಬಂದೂಕುಧಾರಿಗಳ ದಾಳಿ; 30 ಜನರ ಹತ್ಯೆ!

ಅಬುಜಾ :ನೈಜೀರಿಯಾದಲ್ಲಿ ಭಾರೀ ಶಸ್ತ್ರಸಜ್ಜಿತ ಬಂದೂಕುಧಾರಿಗಳು ಹಳ್ಳಿಯೊಂದರ ಮೇಲೆ ದಾಳಿ ಮಾಡಿ ಕನಿಷ್ಠ 30 ಗ್ರಾಮಸ್ಥರನ್ನು ಕೊಂದು ಇತರರನ್ನು ಅಪಹರಿಸಿದ್ದಾರೆ. ನೈಜರ್ ರಾಜ್ಯದ ಬೋರ್ಗು ಸ್ಥಳೀಯ ಸರ್ಕಾರಿ ಪ್ರದೇಶದಲ್ಲಿರುವ ಕಸುವಾನ್–ದಾಜಿ ಗ್ರಾಮದಲ್ಲಿ ಈ ದಾಳಿ ನಡೆದಿದೆ.

ದಾಳಿಕೋರರು ಇದ್ದಕ್ಕಿದ್ದಂತೆ ಹಳ್ಳಿಗೆ ಪ್ರವೇಶಿಸಿ ನಿವಾಸಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ ಈ ದಾಳಿಯು ಗ್ರಾಮದಲ್ಲಿ ಭೀತಿಯನ್ನು ಸೃಷ್ಟಿಸಿದೆ.ನಿವಾಸಿಗಳು ತಮ್ಮ ಜೀವ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿದ್ದಾರೆ! ದಾಳಿಕೋರರು ಗುಂಡು ಹಾರಿಸಿದ್ದು ಮಾತ್ರವಲ್ಲದೆ ಸ್ಥಳೀಯ ಮಾರುಕಟ್ಟೆ ಮತ್ತು ಹಲವಾರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ಬೆಂಕಿ ಹಚ್ಚುವಿಕೆಯು ಗ್ರಾಮದಲ್ಲಿ ಭಾರಿ ವಿನಾಶವನ್ನು ಉಂಟುಮಾಡಿದೆ. ಅನೇಕ ಕುಟುಂಬಗಳನ್ನು ನಿರಾಶ್ರಿತರನ್ನಾಗಿ ಮಾಡಿದೆ. ದಾಳಿಯ ನಂತರ ಗ್ರಾಮವು ಹೊಗೆಯ ದಟ್ಟಣೆಯಲ್ಲಿ ನಾಶವಾಗಿದೆ.

ನೈಜರ್ ರಾಜ್ಯ ಪೊಲೀಸ್ ವಕ್ತಾರ ವಾಸಿಯು ಅಬಿಯೋಡನ್ ಹೇಳಿಕೆಯೊಂದರಲ್ಲಿ, ಅಪಹರಣಕ್ಕೊಳಗಾದ ಜನರನ್ನು ಹುಡುಕಲು ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ಪ್ರದೇಶದಲ್ಲಿ ಶಾಂತಿಯನ್ನು ಪುನಃಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಹೇಳಿದ್ದಾರೆ.

ನಕಲಿ ಬಿಲ್ ತಯಾರಿಸಿ 1,464 ಕೋಟಿ ವಂಚನೆ ವ್ಯವಹಾರ

ವಾಣಿಜ್ಯ ತೆರಿಗೆ ಇಲಾಖೆ ಜಾರಿ ವಿಭಾಗದಿಂದ ನಾಲ್ವರ ಬಂಧನ

ಬೆಂಗಳೂರು, ಜ.4– ಆರ್ಥಿಕ ಅಪರಾಧಗಳ ವಿರುದ್ಧದ ಪ್ರಮುಖ ಕಾರ್ಯಾಚರಣೆಯಲ್ಲಿ, ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗ (ದಕ್ಷಿಣ ವಲಯ) ಬೃಹತ್ ಅಂತಾರಾಜ್ಯ ನಕಲಿ ಬಿಲ್ ತಯಾರಿಸುತ್ತಿದ್ದ ಜಾಲವನ್ನು ಭೇದಿಸಿದೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ವ್ಯಾಪಿಸಿರುವ ಈ ದಂಧೆಯು 1,464 ಕೋಟಿ ವಂಚನೆಯ ವಹಿವಾಟು ಮಾಡಿದೆ ಎಂದು ಆರೋಪಿಸಲಾಗಿದೆ.

ಸಿಮೆಂಟ್, ಕಬ್ಬಿಣ ಮತ್ತು ಉಕ್ಕಿನಂತಹ ಕಟ್ಟಡ ಸಾಮಗ್ರಿಗಳನ್ನು ಒಳಗೊಂಡ ಅತ್ಯಾಧುನಿಕ ಕಾರ್ಯಾಚರಣೆಯನ್ನು ತನಿಖೆಯು ಬಹಿರಂಗಪಡಿಸಿದೆ. ಸರಕುಗಳ ಯಾವುದೇ ನೈಜ ಚಲನೆಯಿಲ್ಲದೆ, ಸುಮಾರು 355 ಕೋಟಿ ರೂಪಾಯಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ITC) ಅನ್ನು ತಪ್ಪಾಗಿ ಪಡೆಯಲು ಮತ್ತು ವರ್ಗಾಯಿಸಲು ಕಾರ್ಟೆಲ್ ನ್ನು ಬಳಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಂಚನೆ ಎಸಗಲು ಆರೋಪಿಗಳು ನಕಲಿ ದಾಖಲೆಗಳನ್ನು ಬಳಸಿಕೊಂಡು ಬಹು ಜಿಎಸ್‌ಟಿ ನೋಂದಣಿಗಳನ್ನು ಪಡೆದಿದ್ದಾರೆ. ಫ್ಯಾಬ್ರಿಕೇಟೆಡ್ ಬಾಡಿಗೆ ಒಪ್ಪಂದಗಳು ಮತ್ತು ಸುಳ್ಳು ತೆರಿಗೆ–ಪಾವತಿಸಿದ ರಶೀದಿಗಳು, ಮನೆ ಮಾಲೀಕರು ಮತ್ತು ಬಾಡಿಗೆದಾರರ ನಕಲಿ ಸಹಿಗಳು, ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಿಂದ ಪಡೆದ ಸ್ಟ್ಯಾಂಪ್ ಪೇಪರ್‌ಗಳು ಮತ್ತು ನಕಲಿ ನೋಟರಿ ದೃಢೀಕರಣಗಳನ್ನು ತಮ್ಮ ವಹಿವಾಟುಗಳಿಗೆ ಬಳಸಿಕೊಂಡಿದ್ದಾರೆ.

ಈ ಶೆಲ್ ಸಂಸ್ಥೆಗಳ ಮೂಲಕ ಐಟಿಸಿಯನ್ನು ಪ್ರಸಾರ ಮಾಡಿದ ನಂತರ, ನೋಂದಣಿಗಳನ್ನು ಸ್ವಯಂಪ್ರೇರಣೆಯಿಂದ ರದ್ದುಗೊಳಿಸಲಾಯಿತು. ಇಲಾಖೆಯ ಆಂತರಿಕ ತೆರಿಗೆದಾರರಲ್ಲದ (NGTP) ಮಾಡ್ಯೂಲ್ ಮೂಲಕ ಇದನ್ನು ಪತ್ತೆ ಹಚ್ಚಲಾಗಿದೆ. ಸುಧಾರಿತ ಜಿಎಸ್ ಟಿ ವ್ಯವಸ್ಥೆಯ ವಿಶ್ಲೇಷಣೆ ಮತ್ತು ಬ್ಯಾಕ್ ಆಫೀಸ್‌ನಿಂದ ಐಪಿ ವಿಳಾಸ ಹಾದಿಗಳನ್ನು ಪತ್ತೆಹಚ್ಚುವ ಮೂಲಕ, ತನಿಖಾಧಿಕಾರಿಗಳು ಅಸಹಜ ಇನ್‌ವಾಯ್ಸಿಂಗ್ ಮಾದರಿಗಳು ಮತ್ತು ವೃತ್ತಾಕಾರದ ಐಟಿಸಿ ಹರಿವುಗಳನ್ನು ಗುರುತಿಸಿದರು. ಈ ಮೂಲಕ ದಾಳಿ ನಡೆಸಲಾಯಿತು. ಬೆಂಗಳೂರು, ಚೆನ್ನೈ, ವೆಲ್ಲೂರು ಮತ್ತು ಪೆರ್ಣಂಪಟ್ಟುಗಳಲ್ಲಿ ಏಕಕಾಲದಲ್ಲಿ ಶೋಧ ಮತ್ತು ವಶಪಡಿಸಿಕೊಳ್ಳುವ ಕಾರ್ಯಾಚರಣೆಗಳನ್ನು ನಡೆಸಲಾಯಿತು. ದಾಳಿಯ ಸಮಯದಲ್ಲಿ, ಅಧಿಕಾರಿಗಳು 24 ಮೊಬೈಲ್ ಫೋನ್‌ಗಳು, 51 ಸಿಮ್ ಕಾರ್ಡ್‌ಗಳು, ವಿವಿಧ ಸಂಸ್ಥೆಗಳ ರಬ್ಬರ್ ಸ್ಟ್ಯಾಂಪ್‌ಗಳು ಮತ್ತು ಬಹು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಲಾಗಿದೆ.

ಆರೋಪಿಗಳಿಗೆ ನ್ಯಾಯಾಂಗ ಬಂಧನ

ಟ್ರಿಯಾನ್ ಟ್ರೇಡರ್ಸ್, ವಂಡರ್ ಟ್ರೇಡರ್ಸ್ ಮತ್ತು ರಾಯಲ್ ಟ್ರೇಡರ್ಸ್ ಸೇರಿದಂತೆ ನಕಲಿ ಸಂಸ್ಥೆಗಳನ್ನು ಈ ನಾಲ್ವರು ವಂಚಕರು ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಪವರ್ ಸ್ಟೀಲ್, ಸಿಮೆಂಟ್ ಮತ್ತು ಪಿ.ಆರ್. ಕನ್‌ಸ್ಟ್ರಕ್ಷನ್‌ನಂತಹ ಶೆಲ್ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿರುವ ಎದ್ದಲ ಪ್ರತಾಪ್ ಮತ್ತು ರೇವತಿ, ಇರ್ಬಾಜ್ ಅಹ್ಮದ್, ನಫೀಜ್ ಅಹ್ಮದ್ ಆರೋಪಿಗಳನ್ನು ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ

ಪ್ರಾಧಿಕಾರದ ಪುಸ್ತಕಗಳಿಗೆ ಶೇ.50 ರಿಯಾಯಿತಿ



ಮೈಸೂರು,ಜ.4– ಗಣರಾಜ್ಯೋತ್ಸವ ದಿನಾಚರಣೆಅಂಗವಾಗಿ 2026ರ ಜನವರಿ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ.50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ಪುಸ್ತಕ ಪ್ರಿಯರು ಈ ಅವಕಾಶ ಬಳಸಿಕೊಳ್ಳಲು ಕೋರಿದೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ (ಸಂಪರ್ಕ ಸಂಖ್ಯೆ: 080–22107705) ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. https://kpp.karnataka.gov.in (ಆನ್‌ಲೈನ್ ಪುಸ್ತಕ ಖರೀದಿಗೆ ಇಲ್ಲಿ ವೀಕ್ಷಿಸಿ) ಕೂಡ ಈ ಶೇ.50 ರಿಯಾಯಿತಿ ಲಭ್ಯವಿದೆ. ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿ ದಂತೆ, ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಈವರೆಗೆ ಪ್ರಕಟಿಸುತ್ತಾ ಬಂದಿದೆ. ಇವುಗಳಲ್ಲಿ ವ್ಯಕ್ತಿ ಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ, ಪರಿಸರ, ಕೃಷಿ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಇದುವರೆಗೆ ಸುಮಾರು 700ಕ್ಕೂ ಹೆಚ್ಚಿನ ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ. ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕಾರದ್ದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಳ್ಳಾರಿ ಗುಂಡಿನ ದಾಳಿ ಪ್ರಕರಣ: ಸಿಐಡಿ ಇಲ್ಲ ಎಸ್‌ಐಟಿ ತನಿಖೆಗೆ ಚಿಂತನೆ

ಬೆಂಗಳೂರು, ಜ.4– ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ಒಬ್ಬ ವ್ಯಕ್ತಿ ಸಾವಿಗೀಡಾದ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಭಾನುವಾರ ತಿಳಿಸಿದ್ದಾರೆ.

ಜನವರಿ 1ರಂದು ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕಾಗಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರ ನಿವಾಸದ ಬಳಿ ಬ್ಯಾನರ್ ಅಳವಡಿಸುವ ವಿಚಾರವಾಗಿ ನಡೆದ ಗಲಾಟೆಯು ವಿಕೋಪಕ್ಕೆ ತಿರುಗಿ ಘರ್ಷಣೆ ಭುಗಿಲೆದ್ದಿತ್ತು. ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಅವರ ಖಾಸಗಿ ಗನ್‌ಮ್ಯಾನ್ ನಡೆಸಿದ ಫೈರಿಂಗ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತ ಸಾವಿಗೀಡಾಗಿದ್ದಾರೆ. ಈ ಘಟನೆಯಲ್ಲಿ ಖಾಸಗಿ ವ್ಯಕ್ತಿಗಳ ಬಂದೂಕುಗಳ ಬಳಕೆ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ನಾನು ಇದನ್ನೇ ಮೊದಲು ಹೇಳಿದ್ದೆ, ಭದ್ರತೆಗಾಗಿ ನೇಮಿಸಿಕೊಂಡಿದ್ದ ಖಾಸಗಿ ಗನ್‌ಮ್ಯಾನ್‌ಗಳ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈಗ ಬ್ಯಾಲಿಸ್ಟಿಕ್ ತಜ್ಞರ ವರದಿಯು ಯಾವ ಬಂದೂಕಿನಿಂದ ಗುಂಡು ಹಾರಿಸಲಾಗಿದೆ ಎಂಬುದನ್ನು ಬಹಿರಂಗಪಡಿಸುತ್ತದೆ. ತನಿಖಾ ವರದಿಯನ್ನು ನೀಡುವಂತೆ ನಾನು ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯ ಅಧಿಕಾರಿಗಳಿಗೆ ಹೇಳಿದ್ದೇನೆ. ಪ್ರಕ್ರಿಯೆ ನಡೆಯುತ್ತಿದೆ. ಪೊಲೀಸ್ ಬಂದೂಕಿನಿಂದ ಗುಂಡು ಹಾರಿಲ್ಲ ಎಂದು ಎಡಿಜಿಪಿ ನನಗೆ ಹೇಳಿದ್ದರು ಎಂದು ಪರಮೇಶ್ವರ ತಿಳಿಸಿದರು.


ಡಾ. ಜಿ.ಪರಮೇಶ್ವರ್

ಈ ಪ್ರಕರಣವನ್ನು ಅಪರಾಧ ತನಿಖಾ ಇಲಾಖೆ (ಸಿಐಡಿ) ಅಥವಾ ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ ಹಸ್ತಾಂತರಿಸಲಾಗುತ್ತದೆಯೇ ಎಂದು ಕೇಳಿದಾಗ, ಆ ಆಯ್ಕೆಯು ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಗೃಹ ಸಚಿವರು ಹೇಳಿದರು.

ನಾವು ಕೂಡ ಇದರ ಬಗ್ಗೆ ಯೋಚಿಸುತ್ತಿದ್ದೇವೆ. ಈ ವಿಷಯವನ್ನು ಸಿಐಡಿಗೆ ವಹಿಸುವ ಸಾಧ್ಯತೆಗಳಿವೆ. ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತನಾಡುತ್ತೇನೆ. ಅಗತ್ಯವಿದ್ದರೆ ನಾವು ತನಿಖೆಯನ್ನು ವರ್ಗಾಯಿಸುತ್ತೇವೆ ಎಂದು ಹೇಳಿದರು.

ಬಳ್ಳಾರಿಗೆ ಯಾತ್ರೆ ನಡೆಸುವ ಬಗ್ಗೆ ಬಿಜೆಪಿಯ ಘೋಷಣೆಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಯಾತ್ರೆ ನಡೆಸುವುದು ದೊಡ್ಡ ವಿಷಯವಲ್ಲ. ಆದರೆ, ಕ್ರಮ ಕೈಗೊಳ್ಳುವುದು ಮುಖ್ಯ, ಅದನ್ನು ಪೊಲೀಸರು ಮಾಡುತ್ತಾರೆ. ಖಾಸಗಿ ಗನ್‌ಮ್ಯಾನ್‌ಗಳು ಇದರಲ್ಲಿ ಭಾಗಿಯಾಗಿದ್ದಾರೆಂದು ತಿಳಿದುಬಂದರೆ ನಾವು ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ. ಎರಡೂ ಕಡೆಯಿಂದ ನಮಗೆ ದೂರುಗಳು ಬಂದಿವೆ. ಬಂದೂಕು ಅಥವಾ ಹ್ಯಾಂಡ್ ಗ್ರೆನೇಡ್‌ಗಳನ್ನು ಬಳಸಲಾಗಿದೆಯೇ ಎಂದು ಪೊಲೀಸರು ತನಿಖೆ ನಡೆಸುತ್ತಾರೆ ಎಂದು ಹೇಳಿದರು.

ಜನಾರ್ದನ ರೆಡ್ಡಿ ಬಳ್ಳಾರಿಗೆ ಬರುವವರೆಗೂ ಯಾವುದೇ ಗದ್ದಲ ಇರಲಿಲ್ಲ. ನಾವು ಅದನ್ನೂ ತನಿಖೆ ಮಾಡುತ್ತೇವೆ ಎಂದರು. ಈ ಮಧ್ಯೆ, ಗುಂಡಿನ ದಾಳಿ ಘಟನೆಗೆ ಸಂಬಂಧಿಸಿದಂತೆ ಇಬ್ಬರು ಖಾಸಗಿ ಗನ್‌ಮ್ಯಾನ್ ಬಲ್ಜಿತ್ ಸಿಂಗ್ ಮತ್ತು ಗುರುಚರಣ್ ಸಿಂಗ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸತೀಶ್ ರೆಡ್ಡಿಯ ಮೂವರು ಗನ್‌ಮ್ಯಾನ್‌ಗಳು ಸೇರಿ 26 ಮಂದಿ ಬಂಧನ

ಬಳ್ಳಾರಿ,ಜ.4–ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರವಾಗಿ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ ಮತ್ತು ಭರತ್ ರೆಡ್ಡಿ ಬೆಂಬಲಿಗರ ಗಲಾಟೆ ಹಾಗೂ ಫೈರಿಂಗ್ ಪ್ರಕರಣದಲ್ಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಬ್ರೂಸ್ ಪೇಟೆ ಠಾಣೆ ಪೊಲೀಸರು ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿಯ ಮೂವರು ಖಾಸಗಿ ಗನ್‌ಮ್ಯಾನ್‌ಗಳನ್ನು ಬಂಧಿಸಿದ್ದಾರೆ. ಪಂಜಾಬ್ ಮೂಲದವರಾದ ಬಲ್ಜಿತ್ ಸಿಂಗ್, ಮಹೇಂದ್ರ ಸಿಂಗ್ ಹಾಗೂ ಗುರುಚರಣ ಸಿಂಗ್ ಬಂಧಿತ ಗನ್‌ಮ್ಯಾನ್‌ಗಳು. ಜ.1ರಂದು ಬಳ್ಳಾರಿಯಲ್ಲಿ ನಡೆದಿದ್ದ ಗಲಾಟೆ ವೇಳೆ ಈ ಮೂವರು ಗನ್‌ಮ್ಯಾನ್‌ಗಳು ಗಾಳಿಯಲ್ಲಿ ಫೈರಿಂಗ್ ಮಾಡಿದ್ದರು. ಈ ಮೂವರು ಗನ್‌ಮ್ಯಾನ್‌ಗಳು ಸೇರಿ ಒಟ್ಟು 26 ಜನರನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದಾರೆ. ಇನ್ನು ಇದೇ ಪ್ರಕರಣ ಸಂಬಂಧ 10 ಬಿಜೆಪಿ ಕಾರ್ಯಕರ್ತರನ್ನೂ ಬಂಧಿಸಲಾಗಿದೆ.

ಜ.7ಕ್ಕೆ ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು: ಮೈಸೂರು ಮಹಾನಗರಪಾಲಿಕೆ 2025–26ನೇ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ಅಂದಾಜು ಆಯ–ವ್ಯಯ ತಯಾರಿಸಲು ಮೈಸೂರು ನಗರದ ಅಭಿವೃದ್ಧಿ ದೃಷ್ಟಿಯಿಂದ ಸದರಿ ಆಯ–ವ್ಯಯದ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯಲು ಮಾಜಿ ಮೇಯರ್ ಮತ್ತು ಮಾಜಿ ಉಪ ಮೇಯರ್‌ರೊಂದಿಗೆ ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಜ.7ರಂದು ಬೆಳಗ್ಗೆ 11.30 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಸದರಿ ಸಭೆಗೆ ಸಾರ್ವಜನಿಕರು ಹಾಜರಾಗಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಲು ಕೋರಲಾಗಿದೆ ಎಂದು ಮೈಸೂರು ನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಚುಟುಕು ತಾರೆಗಳು’ ಕೃತಿ ಬಿಡುಗಡೆ


ಬಿಇಎಲ್ ವಿಶ್ರಾಂತ ಜನರಲ್ ಮ್ಯಾನೇಜರ್ ಮಲ್ಲರಾಜ ಅರಸ್ ರಚಿತ ‘ಚುಟುಕು ತಾರೆಗಳು’ ಕೃತಿ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.4(ಎಂಕೆ)– ಬಿಇಎಲ್ ವಿಶ್ರಾಂತ ಜನರಲ್ ಮ್ಯಾನೇಜರ್ ಮಲ್ಲರಾಜ ಅರಸ್ ರಚಿತ ‘ಚುಟುಕು ತಾರೆಗಳು’ ಕೃತಿಯನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ಕೆ.ಆರ್.ವನಂನಲ್ಲಿರುವ ಶ್ರೀರಾಮ ಸೇವಾ ಅರಸು ಮಂಡಳಿಯಲ್ಲಿ ಅರಸು ಜಾಗೃತಿ ಅಕಾಡೆಮಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಕೃತಿ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಮಲ್ಲರಾಜ ಅರಸ್ ಅವರ ಮೊದಲ ಕೃತಿಯಾದ ‘ಚುಟುಕು ತಾರೆಗಳು’ ಅಚ್ಚುಕಟ್ಟಾಗಿ ಮೂಡಿಬಂದಿದೆ. ಚುಟುಕು ಸಾಹಿತ್ಯವನ್ನು ಜನಮಾನಸಕ್ಕೆ ಮುಟ್ಟಿಸುವ ನಿಟ್ಟಿನಲ್ಲಿ ತಮ್ಮ ಬರವಣಿಗೆ ಮೂಲಕ ಕೊಡುಗೆ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಿವಂಗತ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ ಹೆಸರಿನಲ್ಲಿ ಧ್ವನಿಕೊಟ್ಟ ಧಣಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ ವಿಷಯವಾಗಿದೆ. ಅರಸು ಸಮಾಜ ಮತ್ತಷ್ಟು ಜಾಗೃತರಾಗಿ ಸಮಾಜ ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದು ಆಶಿಸಿದರು.

ಬಳಿಕ ಚುಟುಕು ತಾರೆಗಳು ಕೃತಿ ಕುರಿತು ಸಾಹಿತಿಗಳಾದ ನಾ.ದಿವಾಕರ, ವ.ಸೀತಾಲಕ್ಷ್ಮಿ ವರ್ಮ ಮಾತನಾಡಿದರು. ಮಾಜಿ ಸಚಿವ ಎಂ.ಶಿವಣ್ಣ, ನಾಡೋಜ ಎಸ್.ಷಡಕ್ಷರಿ, ಶ್ರೀರಾಮ ಸೇವಾ ಅರಸು ಮಂಡಳಿ ಅಧ್ಯಕ್ಷ ಡಾ.ಸುಂದರರಾಜೇಅರಸ್, ಕೆಇಬಿ ವಿಶ್ರಾಂತ ಚೀಫ್ ಇಂಜಿನಿಯರ್ ಕೆ.ಆರ್.ಲಕ್ಷ್ಮಿ ಕಾಂತ, ಬಿಇಎಲ್ ವಿಶ್ರಾಂತ ನಿರ್ದೇಶಕ ಹೆಚ್.ಎನ್. ರಾಮ ಕೃಷ್ಣ, ಅರಸು ಜಾಗೃತ ಅಕಾಡೆಮಿ ಟ್ರಸ್ಟ್ ಕಾರ್ಯದರ್ಶಿ ಡಾ.ಎಂ.ಜಿ.ಆರ್. ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಬಳ್ಳಾರಿ ಫೈರಿಂಗ್: ಸಿಐಡಿ ಬೇಡ, ಹಾಲಿ ನ್ಯಾಯಾಧೀಶರಿಂದ ತನಿಖೆಯಾಗಲಿ

ಕೇಂದ್ರ ಸಚಿವ ವಿ.ಸೋಮಣ್ಣ ಒತ್ತಾಯ

ಬಳ್ಳಾರಿ,ಜ.4–ಮಾಜಿ ಸಚಿವ ಜನಾರ್ದನ ರೆಡ್ಡಿ ನಿವಾಸ ಮುಂದೆ ಜನವರಿ 1ರ ರಾತ್ರಿ ನಡೆದಿದ್ದ ಗುಂಡಿನ ದಾಳಿ ಹಾಗೂ ಕಾಂಗ್ರೆಸ್‌ನ ಓರ್ವ ಕಾಂಗ್ರೆಸ್ ಕಾರ್ಯಕರ್ತ ಸಾವನ್ನಪ್ಪಿದ ಪ್ರಕರಣ ಕುರಿತು ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಬಳ್ಳಾರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಘಟನೆಯನ್ನು ಸಿಐಡಿ ತನಿಖೆಗೆ ನೀಡುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ ಇದು ಸರಿಯಲ್ಲ. ನೀವು ನ್ಯಾಯಾಧೀಶರಿಂದ ತನಿಖೆ ಮಾಡಿಸದೇ ಇದ್ದರೆ ಸಿಬಿಐಗೆ ನೀಡಿ, ಇಲ್ಲದಿದ್ದರೆ ಬಳ್ಳಾರಿಯಿಂದಲೇ ಅಧಿಕಾರಕ್ಕೆ ಬಂದ ನಿಮಗೆ, ನಿಮ್ಮ ಆಡಳಿತಕ್ಕೆ ಕೆಟ್ಟ ಹೆಸರು ಬರಲಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ನೀವು ದೇವರಾಜ ಅರಸು ಅವರ ಆಡಳಿತ ಅವಧಿ ಮೀರಿಸುತ್ತಿದ್ದೀರಿ. ಇಂತಹ ದಿನಗಳಲ್ಲಿ ಈ ಘಟನೆಯಿಂದ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತೆ ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.

ನೀವೇ ದ್ವೇಷ ಭಾಷಣ ನಿಷೇಧ ಕಾಯ್ದೆ ಜಾರಿಗೆ ತಂದಿದ್ದೀರಿ. ಜನಾರ್ದನ ರೆಡ್ಡಿ ಮನೆ ಸುಟ್ಟು ಹಾಕುವೆ ಎಂದು ಹೇಳಿರುವ ಶಾಸಕ ಭರತ್ ರೆಡ್ಡಿ ಅವರ ಮೇಲೆ ಕ್ರಮ ಜರುಗಿಸಬೇಕು. ಭರತ್ ರೆಡ್ಡಿ ಮೊದಲ ಬಾರಿಗೆ ಶಾಸಕನಾಗಿದ್ದಾನೆ. ಆತನಿಗೆ ಇನ್ನೂ ರಾಜಕೀಯ ನಡವಳಿಕೆ ತಿಳಿದಂತೆ ಇಲ್ಲ. ಬೇಕಿದ್ದರೆ ನನ್ನ ಬಳಿ 6 ತಿಂಗಳು ಬಂದರೆ ತರಬೇತಿ ನೀಡುವೆ. ಭರತ್ ರೆಡ್ಡಿ ಯಾವ ಶಾಲೆಯಲ್ಲಿ ಓದಿದ್ದಾನೋ ಗೊತ್ತಿಲ್ಲ. ಆತನ ಮಾತುಗಳಲ್ಲಿ ಸಂಯಮ ಇಲ್ಲ. ದ್ವೇಷದ ಮಾತುಗಳು ಬರುವುದು ಸರಿಯಲ್ಲ ಎಂದರು. ಇನ್ನೂ ಜನಾರ್ದನರೆಡ್ಡಿ ಅವರು ಝಡ್ ಪ್ಲಸ್ ಭದ್ರತೆ ಕುರಿತ ಪ್ರತಿಕ್ರಿಯಿಸಿದ ಸೋಮಣ್ಣ, ಈ ಕುರಿತು ಕೇಂದ್ರದ ಗೃಹ ಸಚಿವರ ಬಳಿ ಮಾತನಾಡುವೆ ಎಂದರು.

ಕಲ್ಲು ಗಣಿಗಾರಿಕೆ ವೇಳೆ ಭಾರೀ ಭೂ ಕುಸಿತ; ಹಲವರ ಸಾವು



ಭುವನೇಶ್ವರ: ಕಲ್ಲು ಗಣಿಗಾರಿಕೆ ವೇಳೆ ಸಂಭವಿಸಿದ ಭಾರಿ ಭೂ ಕುಸಿತದಲ್ಲಿ ಹಲವು ಕಾರ್ಮಿಕರು ಸಾವನ್ನಪ್ಪಿರುವ ಘಟನೆಯೊಂದು ಒಡಿಶಾದ ಧೆಂಕಾನಾಲ್ ಜಿಲ್ಲೆಯಲ್ಲಿ ಸಂಭವಿಸಿದೆ. ಧೆಂಕಾನಾಲ್ ಜಿಲ್ಲೆಯ ಮೊಟಂಗಾ ಪೊಲೀಸ್ ಠಾಣೆ ವ್ಯಾಪ್ತಿಯ ಗೋಪಾಲಪುರ ಸಮೀಪ ಕಾರ್ಮಿಕರು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದ ವೇಳೆ ದೊಡ್ಡ ಪ್ರಮಾಣದ ಬಂಡೆಗಳು ಕುಸಿದು ಬಿದ್ದಿವೆ. ಘಟನೆ ವೇಳೆ ಹಲವು ಕಾರ್ಮಿಕರು ಸ್ಥಳದಲ್ಲಿದ್ದರು ಎಂದು ಹೇಳಲಾಗುತ್ತಿದ್ದು, ಎಷ್ಟು ಮಂದಿ ಅವಶೇಷಗಳಡಿ ಸಿಲುಕಿದ್ದಾರೆಂಬ ನಿಖರ ಮಾಹಿತಿಗಳು ಇನ್ನೂ ತಿಳಿದುಬಂದಿಲ್ಲ. ಘಟನೆ ಬಳಿಕ ಸ್ಥಳಕ್ಕೆ ಅಗ್ನಿಶಾಮಕ ದಳ, ಒಡಿಶಾ ವಿಪತ್ತು ತ್ವರಿತ ಕಾರ್ಯ ಪಡೆ, ಶ್ವಾನ ದಳ ಹಾಗೂ ಭಾರೀ ಯಂತ್ರೋಪಕರಣಗಳನ್ನು ರವಾನಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ಧೆಂಕಾನಾಲ್ ಜಿಲ್ಲಾಧಿಕಾರಿ ಆಶಿಷ್ ಇಶ್ವರ್ ಪಾಟೀಲ್ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಅಭಿನವ್ ಸೋಂಕರ್ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಈ ದುರ್ಘಟನೆ ಕುರಿತು ಪ್ರತಿಪಕ್ಷ ನಾಯಕ ನವೀನ್ ಪಟ್ನಾಯಕ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದು, ಅತೀವ ಸಂತಾಪ ಸೂಚಿಸಿದ್ದಾರೆ.